ಮಂಗಳವಾರ, ಮೇ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 145 | ಪುಟ 10

www.prajavani.net

/prajavani.net @prajavani / prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಮಕ್ಕಳು ಚಿಂತೆಗಳಿಂದ ಮುಕ್ತರು. ಚಿಂತೆಯೇ ಇಲ್ಲದ ಕಾರಣ ಒತ್ತಡ ಅವರಿಗೆ ಇರುವುದಿಲ್ಲ ಎಂದೇ ಹೆಚ್ಚಿನ ಹಿರಿಯರು ಯೋಚಿಸುತ್ತಾರೆ. ಆದರೆ ಈಗಿನ ಮಕ್ಕಳು ಒತ್ತಡದಿಂದ ಬಳಲುತ್ತಿದ್ದಾರೆ...

ಆಳ-ಅಗಲ

ಕೋವಿಡ್ ಲಸಿಕೆಗೆ ರಾಜ್ಯಗಳ ಪರದಾಟ

ನಾಳೆ ಕರಾಳ ದಿನ: ಗಡಿಯತ್ತ ರೈತರ ಪಯಣ 9

ಬಾಲಾಸೋರ್‌ಗೆ ಅಪ್ಪಳಿಸಲಿದೆ ಯಸ್ ಚಂಡಮಾರುತ 9

ಸೆನ್ಸೆಕ್ಸ್	ನಿಫ್ಟಿ	₹/$
50,652 ▲	15,197 ▲	72.96 ▼

ಬೆಂಗಳೂರಿನಲ್ಲಿ ಸೋಮವಾರ ಸೂರ್ಯನ ಸುತ್ತ ಕಂಡುಬಂದ ಸಪ್ತವರ್ಣ ಉಂಗುರ

ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

ಸೂರ್ಯನ ಸುತ್ತ ಕಾಮನಬಿಲ್ಲಿನ ಉಂಗುರ!

ಪ್ರಜಾವಾಣಿ ವಾರ್ತೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

ಬೆಂಗಳೂರು: ಕೋವಿಡ್ ಕಾರ್ಮೋಡದಲ್ಲಿ ಮಂಕಾಗಿ ಕುಳಿತಿದ್ದ ಜನ ಸೋಮವಾರ ಬಾನಂಗಳದಲ್ಲಿ 'ಸೂರ್ಯ ದೇವ'ನ ಸಪ್ತ ವರ್ಣಗಳ ಉಂಗುರ ದರ್ಶನದಿಂದ ಪುಳಕಿತರಾದರು.

ಲಾಕ್‌ಡೌನ್‌ನಿಂದ ಮನೆ ಬಿಟ್ಟು ಹೊರಗೇ ಬಾರದ ಜನ ರಸ್ತೆ ಮತ್ತು ತಮ್ಮ ತಮ್ಮ ಮನೆಗಳ ತಾರಸಿ ಮೇಲೆ ಹೋಗಿ ಸೂರ್ಯನ ಹೊಸ 'ಅವತಾರ'ವನ್ನು ನೋಡಿ ಸಂಭ್ರಮಿಸಿದರು.

ಸಾಮಾಜಿಕ ಜಾಲತಾಣಗಳ ಮೂಲಕ ಸೂರ್ಯನ ಉಂಗುರದ ಚಿತ್ರವನ್ನು ಹರಿ ಬಿಟ್ಟಿದ್ದರಿಂದ ಇನ್ನಷ್ಟು ಜನ ಮನೆ ಬಿಟ್ಟು ಹೊರಬಂದು, ಆಗಸದತ್ತ ಮುಖ ಮಾಡಿ ಸೂರ್ಯ ಉಂಗುರ ದರ್ಶನ ಮಾಡಿ ಆನಂದಿಸಿದರು.

ಇದರ ವೈಜ್ಞಾನಿಕ ಹಿನ್ನೆಲೆ ಏನು?: ಸೂರ್ಯನ ಸುತ್ತ ತೇಜೋಪುಂಜದಂತೆ ಕಾಣುವ ಈ ಉಂಗುರ ನಿರ್ಮಾಣ ಆಗಲು ಮುಖ್ಯ ಕಾರಣ ಬೆಳಕಿನ ವಕ್ರೀಭವನ. ವಾತಾವರಣದಲ್ಲಿ ಮಂಜಿನ ಹರಳುಗಳ ಮೇಲೆ ಸೂರ್ಯ ಕಿರಣಗಳು ಬಿದ್ದಾಗ, ಕಿರಣಗಳು ವಕ್ರೀಭವನ ಹೊಂದಿ ಬಾಗುತ್ತವೆ. ಬೆಳಕಿನ ಏಳು ಬಣ್ಣಗಳು ಪ್ರಕಟಗೊಳ್ಳುತ್ತದೆ. ಅತಿ ಸೂಕ್ಷ್ಮ ಸ್ವರೂಪದ ಮೋಡಗಳ ಇರುವಿಕೆಯಿಂದ ನೋಡುಗರ ಕಣ್ಣುಗಳಿಗೆ ಈ ನೈಸರ್ಗಿಕ ಕ್ರಿಯೆ ಉಂಗುರದಂತೆ ಗೋಚರಿಸುತ್ತದೆ. ಈ ಮೋಡಗಳು ಸುಮಾರು 20,000 ಅಡಿ ಎತ್ತರದಲ್ಲಿ ಸೃಷ್ಟಿಯಾಗಿರುತ್ತವೆ. ಮೋಡಗಳು ಕೋಟಿಗಟ್ಟಲೆ ಅತಿ ಸೂಕ್ಷ್ಮ ಮಂಜಿನ ಹರಳುಗಳನ್ನು ಒಳಗೊಂಡಿರುತ್ತವೆ.

ಈ ಉಂಗುರವನ್ನು ವಿಭಿನ್ನ ಕೋನಗಳಲ್ಲಿ ನೋಡಿದಾಗ ಕೊಂಚ ಭಿನ್ನವಾಗಿ ಗೋಚರಿಸುತ್ತದೆ. ಸರಿಯಾದ ಕೋನದಲ್ಲಿ ನೋಡಿದಾಗ ಮಾತ್ರ ಕಾಮನಬಿಲ್ಲಿನ ಗೋಲದಂತೆ ಕಾಣಿಸುತ್ತದೆ. ಇಲ್ಲವಾದರೆ ಕೇವಲ ಬಿಳಿ ಉಂಗುರದಂತೆ ಕಾಣಿಸುತ್ತದೆ. ಸೂರ್ಯ ಮಾತ್ರವಲ್ಲ ರಾತ್ರಿ ವೇಳೆ ಚಂದ್ರನ ಸುತ್ತಲೂ ಕೆಲವೊಮ್ಮೆ ಇಂತಹ ಉಂಗುರ ಕಾಣಿಸಿಕೊಳ್ಳುತ್ತದೆ.

ವಿಜ್ಞಾನಿಗಳು ಇದನ್ನು 22 ಡಿಗ್ರಿ ಉಂಗುರ ಎಂದೂ ಕರೆಯುತ್ತಾರೆ. ಏಕೆಂದರೆ ಈ ಉಂಗುರಗಳು ಸೂರ್ಯ ಅಥವಾ ಚಂದ್ರನ ಸುತ್ತ ಸರಿ ಸುಮಾರು 22 ಡಿಗ್ರಿ ತ್ರಿಜ್ಯವನ್ನು ಹೊಂದಿರುತ್ತವೆ.

ಲಸಿಕೆ: 18-44 ವರ್ಷದವರಿಗೆ ನೇರ ನೋಂದಣಿ ಆರಂಭ

ನವದೆಹಲಿ (ಪಿಟಿಐ): 18-44 ವರ್ಷ ವಯಸ್ಸಿನವರು ಕೋವಿಡ್-19 ಲಸಿಕೆ ಹಾಕಿಸಿಕೊಳ್ಳಲು ಅನುಕೂಲವಾಗುವಂತೆ ಲಸಿಕಾ ಕೇಂದ್ರದಲ್ಲೇ ಕೋವಿನ್ ಆ್ಯಪ್‌ನಲ್ಲಿ ನೇರ (ಆನ್-ಸೈಟ್) ನೋಂದಣಿ ಮತ್ತು ಮುಂಗಡ ನೋಂದಣಿ (ಅಪಾಯಿಂಟ್‌ಮೆಂಟ್) ಪಡೆಯುವ ಅವಕಾಶ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಆದರೆ ಈ ಸೌಲಭ್ಯ ಸದ್ಯ ಸರ್ಕಾರಿ ಕೋವಿಡ್ ಲಸಿಕಾ ಕೇಂದ್ರಗಳಲ್ಲಿ (ಸಿವಿಸಿ) ಮಾತ್ರ ಸಿಗಲಿದೆ. ಖಾಸಗಿ ಸಿವಿಸಿಗಳಲ್ಲಿ ಲಸಿಕಾ ವೇಳಾಪಟ್ಟಿಗಳನ್ನು ಆನ್‌ಲೈನ್ ಮುಂಗಡ ನೋಂದಣಿಗಳಿಗಾಗಿ ಸ್ಲಾಟ್‌ಗಳೊಂದಿಗೆ ಪ್ರತ್ಯೇಕವಾಗಿ ಪ್ರಕಟಿಸಬೇಕಾಗುತ್ತದೆ ಎಂದು ತಿಳಿಸಲಾಗಿದೆ.

ಕಪ್ಪುಶಿಲೀಂಧ್ರ: ಕೊರೊನಾ ಹಿಂದೆಯೇ ಎದುರಾಗಿರುವ ಸೋಂಕು ಭೀತಿ • ಗ್ರಾಮೀಣ ಭಾಗಕ್ಕೂ ನಿಧಾನವಾಗಿ ಹಬ್ಬುತ್ತಿದೆ ಕಾಯಿಲೆ

ಹೆಚ್ಚಿನ ಜಿಲ್ಲೆಗಳಲ್ಲಿ ಆಗಿಲ್ಲ ಸಿದ್ಧತೆ, ಔಷಧಿ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರಸ್ತುತ ಕೊರೊನಾ ಸೋಂಕು ಪ್ರಕರಣಗಳು ಇಳಿಮುಖವಾಗುತ್ತಿವೆ ಎಂಬ ಆಶಾದಾಯಕ ವರದಿಗಳ ಹಿಂದೆಯೇ, ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳ ಭೀತಿ ಹೆಚ್ಚತೊಡಗಿದೆ. ಹೆಚ್ಚಿನ ಜಿಲ್ಲೆಗಳಲ್ಲಿ ಚಿಕಿತ್ಸೆ ನೀಡಲು ಸೌಲಭ್ಯಗಳೇ ಇಲ್ಲ. ಈ ಕಾಯಿಲೆ ರಾಜ್ಯದಾದ್ಯಂತ ಹರಡತೊಡಗಿದ್ದು, ಆತಂಕವನ್ನು ಹೆಚ್ಚಿಸಿದೆ.

ಬಹುತೇಕ ಜಿಲ್ಲೆಗಳಲ್ಲಿ ಕಪ್ಪು ಶಿಲೀಂಧ್ರ ಪ್ರಕರಣಗಳು ಪತ್ತೆಯಾಗಿವೆ. ಮೈಸೂರಿನಲ್ಲಿ 21, ಕಲಬುರ್ಗಿ 34 , ತುಮಕೂರು 21 ಮತ್ತು ಕೋಲಾರ ಜಿಲ್ಲೆಯಲ್ಲಿ 20 ಶಂಕಿತ ಪ್ರಕರಣಗಳು ಪತ್ತೆಯಾಗಿವೆ. ಕಲಬುರ್ಗಿಯಲ್ಲಿ 4, ರಾಯಚೂರು 3, ಮೈಸೂರಿನಲ್ಲಿ ಒಬ್ಬರು ಮೃತಪಟ್ಟಿದ್ದು, ಇವುಗಳಿಗೆ ಕಪ್ಪು ಶಿಲೀಂಧ್ರ ಕಾರಣ ಎಂದು ವರದಿಯಾಗಿದೆ.

ಅಧಿಕ ಪ್ರಕರಣಗಳು ವರದಿಯಾಗಿರುವ ಮೈಸೂರು, ಕಲಬುರ್ಗಿ, ಕೋಲಾರ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿಯೂ ಔಷಧದ ಕೊರತೆ ಇದೆ. ಕೋಲಾರದಲ್ಲಿ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಯನ್ನು ಅವಲಂಬಿಸಿದ್ದು, ಅಲ್ಲಿಯೂ ಔಷಧ ಲಭ್ಯವಿಲ್ಲ. ಆದರೆ, ತುಮಕೂರಿನಲ್ಲಿ ಔಷಧ ಕೊರತೆ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಪ್ರತಿಕ್ರಿಯಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳವರು ಔಷಧಿ ಪಡೆಯಲು ಸರ್ಕಾರಿ ಪೋರ್ಟಲ್ ಮೂಲಕ ಬೇಡಿಕೆಯನ್ನು ಸಲ್ಲಿಸಬೇಕಾಗಿದೆ.ಈ ಪ್ರಕ್ರಿಯೆಯು ಖಾಸಗಿ ಆಸ್ಪತ್ರೆಗಳಲ್ಲಿಯೂ ಔಷಧ ಕೊರತೆಗೆ ಕಾರಣ ಎಂದು ಹೇಳಲಾಗಿದೆ.

ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಈ ಸೋಂಕು ಚಿಕಿತ್ಸೆಗೆ 30 ಹಾಸಿಗೆ ಸಾಮರ್ಥ್ಯದ ಪ್ರತ್ಯೇಕ ವಾರ್ಡ್ ರೂಪಿಸಲಾಗಿದೆ. 20 ಹಾಸಿಗೆಗಳು ಕೋವಿಡ್ ಮತ್ತು ಕಪ್ಪು ಶಿಲೀಂಧ್ರ ಪೀಡಿತ ರೋಗಿಗಳಿಗೆ, 10 ಹಾಸಿಗೆಗಳು ಕೋವಿಡ್‌ನಿಂದ ಚೇತರಿಸಿಕೊಂಡಿರುವ ಕಪ್ಪು ಶಿಲೀಂಧ್ರ ಪೀಡಿತ ರೋಗಿಗಳಿಗೆ ಮೀಸಲಿಡಲಾಗಿದೆ. ಇಎನ್‌ಟಿ ಹಾಗೂ ಫೇಸಿಯೊ ಮ್ಯಾಕ್ಸಿಲರಿ ತಜ್ಞರ ನೇಮಕವಾಗಿದೆ. ನೆರೆಯ ಜಿಲ್ಲೆಗಳ ಕಾಯಿಲೆಪೀಡಿತರು ಮೈಸೂರಿನ 'ದೊಡ್ಡಾಸ್ಪತ್ರೆ' ಸೌಲಭ್ಯದ ಮೇಲೇ ಹೆಚ್ಚು ಅವಲಂಬಿತರಾಗಿದ್ದಾರೆ.

ಈ ಜಿಲ್ಲೆಯಲ್ಲಿಯೇ 21 ಪ್ರಕರಣಗಳು ವರದಿಯಾಗಿವೆ. 17 ಮಂದಿ ಕೆ.ಆರ್. ಆಸ್ಪತ್ರೆ, ಮೂವರು ಜೆಎಸ್‌ಎಸ್ ಆಸ್ಪತ್ರೆ, ಒಬ್ಬರು ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದಾರೆ. ಜಿಲ್ಲೆಯಲ್ಲಿ ಔಷಧದ ಕೊರತೆ ಇದೆ ಎನ್ನುತ್ತಾರೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ.

ಸೌಲಭ್ಯದ ಕೊರತೆ: ಮಂಡ್ಯ ಜಿಲ್ಲೆಯಲ್ಲಿ 6 ಹಾಸಿಗೆಗಳ ಒಂದು ವಾರ್ಡ್ ಮೀಸಲಿದ್ದರೆ, ಚಾಮರಾಜನಗರದಲ್ಲಿ ಚಿಕಿತ್ಸೆಗೆ ಸೌಲಭ್ಯವಿಲ್ಲ. ಹಾಸನ ಜಿಲ್ಲಾಸ್ಪತ್ರೆಯಲ್ಲಿ ಹಾಸಿಗೆ ಮೀಸಲಿಟ್ಟಿದ್ದರೂ, ಚಿಕಿತ್ಸೆ ಸೌಲಭ್ಯವಿಲ್ಲ. ಈ ಜಿಲ್ಲೆಯಲ್ಲಿನ ಶಂಕಿತ 7 ರೋಗಿಗಳು ಮೈಸೂರು, ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಂಡ್ಯದಲ್ಲಿ 3, ಚಾಮರಾಜನಗರದಲ್ಲಿ 2, ಹಾಸನದಲ್ಲಿ 7 ಶಂಕಿತ ಪ್ರಕರಣಗಳು ಪತ್ತೆಯಾಗಿವೆ. ಕೊಡಗು ಜಿಲ್ಲೆಯಲ್ಲಿ 10 ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಯಾವುದೇ ಪ್ರಕರಣ ಪತ್ತೆಯಾಗಿಲ್ಲ.

ಕಲಬುರ್ಗಿ ಜಿಲ್ಲೆಯಲ್ಲಿ 34 ಪ್ರಕರಣಗಳು ಪತ್ತೆಯಾಗಿವೆ. ಅವರ ಪೈಕಿ ನಾಲ್ವರು ಮೃತಪಟ್ಟಿದ್ದಾರೆ. 20 ಮಂದಿ ಜಿಮ್ಸ್‌ನಲ್ಲಿ, 10 ಮಂದಿ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ.

9ನೇ ಪುಟ ನೋಡಿ

ಶಿಲೀಂಧ್ರ ಸೋಂಕಿಗೆ ಕನ್ನಡಿಗನ ಚುಚ್ಚುಮದ್ದು

• ಗುರು ಪಿ. ಎಸ್.

ಶ್ರೀಕಾಂತ ಪೈ

ಬೆಂಗಳೂರು: ಕೋವಿಡ್ ನಂತರ ಅನೇಕರಲ್ಲಿ ಕಾಣಿಸಿಕೊಳ್ಳುತ್ತಿರುವ ಮ್ಯೂಕರ್‌ಮೈಕೊಸಿಸ್ (ಕಪ್ಪು ಶಿಲೀಂಧ್ರ) ಸಮಸ್ಯೆಗೆ ಲೈಪೊಸೋಮಲ್ ಆ್ಯಂಫೊಟೆರಿಸಿನ್ ಚುಚ್ಚುಮದ್ದು ರಾಮಬಾಣದಂತೆ ಕೆಲಸ ಮಾಡುತ್ತಿದೆ. ಈ ಉತ್ಪನ್ನವನ್ನು ಅಭಿವೃದ್ಧಿ ಪಡಿಸಿರುವುದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯ ಬಿ.ಶ್ರೀಕಾಂತ ಅಣ್ಣಪ್ಪ ಪೈ.

ಭಾರತ್ ಸೀರಂ ಕಂಪನಿಯಲ್ಲಿ 17 ವರ್ಷ ವಿವಿಧ ಹುದ್ದೆಯಲ್ಲಿ ಕೆಲಸ ಮಾಡಿರುವ ಶ್ರೀಕಾಂತ ಪೈಯವರು ಆ್ಯಂಫೊಟೆರಿಸಿನ್ ಉತ್ಪನ್ನ ಕಂಡು ಹಿಡಿದಾಗ ಕಂಪನಿಯ ಅಭಿವೃದ್ಧಿ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿದ್ದರು. ಶಿಲೀಂಧ್ರ ಸೋಂಕಿನಿಂದ ಸಾರ್ವಜನಿಕರನ್ನು ರಕ್ಷಿಸುವ ಉದ್ದೇಶದಿಂದ ಈ ಉತ್ಪನ್ನವನ್ನು ಅಭಿವೃದ್ಧಿ ಪಡಿಸಿದ್ದರು. ಈಗ ಅದು ಕಪ್ಪು ಶಿಲೀಂಧ್ರ ಸಮಸ್ಯೆಯಿಂದ ಬಳಲುತ್ತಿರುವವರ ಜೀವರಕ್ಷಕದಂತೆ ಕೆಲಸ ಮಾಡುತ್ತಿದೆ.

'ಆ್ಯಂಫೊಟೆರಿಸಿನ್‌ನ ಮೂಲ ಉತ್ಪಾದಕರು ಅಮೆರಿಕದ ಗಿಲಿಯಡ್ ಸೈನ್ಸಸ್ ಕಂಪನಿ. ಆದರೆ, ಈ ಉತ್ಪನ್ನದ ಹಕ್ಕುಸ್ವಾಮ್ಯದ ಅವಧಿ 2008ರಲ್ಲಿ ಮುಕ್ತಾಯವಾಗಿತ್ತು. ಹಕ್ಕುಸ್ವಾಮ್ಯ ಅವಧಿ ಮುಗಿದ ಮರುದಿನದಿಂದಲೇ ಯಾರು ಬೇಕಾದರೂ ಇಂತಹ ಉತ್ಪನ್ನವನ್ನು ತಯಾರಿಸಬಹುದು. ಆದರೆ, ಭಾರತದಲ್ಲಿ ಇದನ್ನು ಉತ್ಪಾದಿಸುವ ತಂತ್ರಜ್ಞಾನ ಇರಲಿಲ್ಲ. ಇದಕ್ಕೆ ಸಾಕಷ್ಟು ಸಮಯ ಮತ್ತು ಅಧ್ಯಯನ ಬೇಕಾಗುತ್ತದೆ. ಎರಡು ವರ್ಷಗಳ ಸತತ ಪರಿಶ್ರಮದ ನಂತರ 2010-2011ರಲ್ಲಿ ನಾನು ಮತ್ತು ನನ್ನ ತಂಡ ಈ ಉತ್ಪನ್ನವನ್ನು ಮರುಅಭಿವೃದ್ಧಿ ಪಡಿಸಿದೆವು' ಎಂದು ಶ್ರೀಕಾಂತ ಪೈ 'ಪ್ರಜಾವಾಣಿ'ಗೆ ತಿಳಿಸಿದರು.

9ನೇ ಪುಟ ನೋಡಿ

ಕಪ್ಪು ಶಿಲೀಂಧ್ರ: ಚುಚ್ಚುಮದ್ದಿಗೆ ಪರದಾಟ

ಕೋವಿಡ್ ರೋಗಿಗಳಲ್ಲಿ ಕಪ್ಪು ಶಿಲೀಂಧ್ರ (ಮ್ಯೂಕರ್ ಮೈಕೊಸಿಸ್) ಸೋಂಕು ತೀವ್ರಗತಿಯಲ್ಲಿ ಹೆಚ್ಚುತ್ತಿದ್ದು, ರಾಜ್ಯದಲ್ಲಿ ಔಷಧಿ ಕೊರತೆ ತೀವ್ರವಾಗಿ ಕಾಡುತ್ತಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಪ್ರತ್ಯೇಕವಾಗಿ ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದ್ದರೂ, ಲೈಪೊಸೋಮಲ್ ಆ್ಯಂಫೊಟೆರಿಸಿನ್ ಚುಚ್ಚುಮದ್ದಿಗಾಗಿ ಪರದಾಟ ಆರಂಭವಾಗಿದೆ.

ರಾಜ್ಯದಲ್ಲಿ ಈವರೆಗೆ 444 ಜನರಲ್ಲಿ ಕಪ್ಪು ಶಿಲೀಂಧ್ರ ಸೋಂಕು ಪತ್ತೆಯಾಗಿದೆ. ಅಷ್ಟೂ ಜನರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಅವರಲ್ಲಿ 12 ಮಂದಿ ಮೃತಪಟ್ಟಿದ್ದಾರೆ. ನಿತ್ಯವೂ ಹೊಸ ಪ್ರಕರಣಗಳು ವರದಿಯಾಗುತ್ತಲೇ ಇದ್ದು, ಔಷಧಿಯ ಬೇಡಿಕೆಯೂ ಹೆಚ್ಚತೊಡಗಿದೆ. ರಾಜ್ಯದ ಬೇಡಿಕೆಗೆ ಹೋಲಿಸಿದರೆ ಅತ್ಯಲ್ಪ ಪ್ರಮಾಣದಲ್ಲಿ ಆ್ಯಂಫೊಟೆರಿಸಿನ್ ಚುಚ್ಚುಮದ್ದು ಪೂರೈಕೆಯಾಗುತ್ತಿದೆ.

'ಕಪ್ಪು ಶಿಲೀಂಧ್ರ ಸೋಂಕಿತರ ಚಿಕಿತ್ಸೆಗೆ ಬಳಸುವ ಆ್ಯಂಫೊಟೆರಿಸಿನ್ ಚುಚ್ಚುಮದ್ದಿನ 20,000 ವಯಲ್‌ಗಳಿಗೆ ಆರೋಗ್ಯ ಇಲಾಖೆ ಬೇಡಿಕೆ ಸಲ್ಲಿಸಿದ್ದು, ಸೋಮವಾರ 1,150 ವಯಲ್ಸ್ ಪೂರೈಕೆಯಾಗಿದೆ. ಕೇಂದ್ರ ಸರ್ಕಾರ ವಿದೇಶಗಳಿಂದ ಆಮದು ಮಾಡಿಕೊಂಡು ರಾಜ್ಯಗಳಿಗೆ ಹಂಚಿಕೆ ಮಾಡುತ್ತಿದೆ. ಇನ್ನೂ 5,000 ವಯಲ್ಸ್ ಆ್ಯಂಫೊಟೆರಿಸಿನ್ ಚುಚ್ಚುಮದ್ದು ತುರ್ತಾಗಿ ಒದಗಿಸುವಂತೆ ಕೇಂದ್ರ ರಾಸಾಯನಿಕ ಸಚಿವ ಡಿ.ವಿ. ಸದಾನಂದ ಗೌಡ ಅವರಿಗೆ ಮನವಿ ಮಾಡಿದ್ದೇನೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕೇಂದ್ರ ಸರ್ಕಾರವು ಸೋಮವಾರ 9,000 ವಯಲ್ಸ್ ಆ್ಯಂಫೊಟೆರಿಸಿನ್ ಚುಚ್ಚುಮದ್ದು ಆಮದು ಮಾಡಿಕೊಂಡಿದೆ. ಅದರಲ್ಲಿ 1,030 ವಯಲ್ಸ್‌ಗಳನ್ನು ಕರ್ನಾಟಕಕ್ಕೆ ಹಂಚಿಕೆ ಮಾಡಿರುವುದಾಗಿ ಸದಾನಂದಗೌಡ ಅವರು ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಎರಡರಿಂದ ಮೂರು ದಿನಗಳಲ್ಲಿ ಈ ಚುಚ್ಚುಮದ್ದುಗಳು ರಾಜ್ಯದ ಆರೋಗ್ಯ ಇಲಾಖೆಯನ್ನು ತಲುಪುವ ಸಾಧ್ಯತೆಯಿದೆ.

9ನೇ ಪುಟ ನೋಡಿ

ಸೋಂಕಿಗೆ ಕಾರಣಗಳೇನು?

'ಅತಿಯಾದ ಪ್ರಮಾಣದ ಸ್ಟೆರಾಯ್ಡ್ ಬಳಕೆ, ಆಮ್ಲಜನಕ ಪೂರೈಕೆ ಯಂತ್ರದ ಹ್ಯೂಮಿಡಿಫೈರ್ ಸಾಧನದಲ್ಲಿ ಡಿಸ್ಟಿಲ್ಡ್ ನೀರಿನ ಬದಲಿಗೆ ನಲ್ಲಿ ನೀರನ್ನು ಬಳಸುತ್ತಿರುವುದು, ಆಮ್ಲಜನಕ ಪೂರೈಕೆ ಯಂತ್ರದ ಮುಖ ಕವಚ, ಮಾಸ್ಕ್ ಮತ್ತು ಕೊಳವೆಗಳನ್ನು ಸ್ವಚ್ಛಗೊಳಿಸದೆ ಬೇರೆ ರೋಗಿಗಳಿಗೆ ಬಳಸುವುದು, ಒಂದು ಮಾಸ್ಕ್ ಅನ್ನು ಶುಚಿಗೊಳಿಸದೆ ನಿರಂತರವಾಗಿ ಬಳಸುವುದು ಹಾಗೂ ಅತಿಯಾದ ಹೈ ಫ್ಲೋ ಆಮ್ಲಜನಕದ ಬಳಕೆ ಕೋವಿಡ್ ರೋಗಿಗಳಲ್ಲಿ ಕಪ್ಪು ಶಿಲೀಂಧ್ರ ಸೋಂಕು ಹೆಚ್ಚಲು ಕಾರಣ' ಎಂದು ರಾಜ್ಯ ಸರ್ಕಾರ ನೇಮಿಸಿರುವ ತಜ್ಞರ ಸಮಿತಿಯು ಪ್ರಾಥಮಿಕ ವರದಿಯಲ್ಲಿ ತಿಳಿಸಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡ ಸಚಿವ ಡಾ.ಕೆ. ಸುಧಾಕರ್, 'ಈ ಎಲ್ಲ ಕಾರಣಗಳ ಜತೆಗೆ ಕೋವಿಡ್ ರೋಗಿಗಳ ಸಂಬಂಧಿಗಳು ಸೇರಿದಂತೆ ಹೊರಗಿನ ವ್ಯಕ್ತಿಗಳು ವಾರ್ಡ್, ತೀವ್ರ ನಿಗಾ ಘಟಕಗಳಿಗೆ ಭೇಟಿ ನೀಡುತ್ತಿರುವುದರಿಂದಲೂ ಕಪ್ಪು ಶಿಲೀಂಧ್ರ ಸೋಂಕು ಹೆಚ್ಚುತ್ತಿದೆ ಎಂದು ತಜ್ಞರು ಹೇಳಿದ್ದಾರೆ. ಈ ಕುರಿತು ಅಧ್ಯಯನ ಮುಂದುವರಿದಿದೆ' ಎಂದರು.

ಆಸ್ಪತ್ರೆಯ ವೈದ್ಯರು ಮತ್ತು ನಿಗದಿತ ಸಿಬ್ಬಂದಿಯ ಹೊರತಾಗಿ ಇತರರು ವಾರ್ಡ್‌ಗಳಿಗೆ ಪ್ರವೇಶಿಸುವುದನ್ನು ತಡೆಯಲು ಎಲ್ಲ ಕಡೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು. ಕೋವಿಡ್ ರೋಗಿಗಳ ಕುಟುಂಬ ಸದಸ್ಯರು ಮತ್ತು ಸಂಬಂಧಿಗಳಿಗೆ ಸಿಸಿಟಿವಿ ಮೂಲಕವೇ ರೋಗಿಗಳನ್ನು ನೋಡಲು ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

'ಜಿಡಿಪಿ ಕುಸಿತ ಶೇ (-) 7.3ರಷ್ಟು'

ಮುಂಬೈ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ (2020-21) ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಶೇಕಡ (-) 7.3ರಷ್ಟು ಕುಸಿದಿದೆ ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಅಂದಾಜು ಮಾಡಿದೆ.

ಇದೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ (ಜನವರಿ-ಮಾರ್ಚ್ ನಡುವಣ ಅವಧಿ) ಜಿಡಿಪಿಯು ಶೇ 2ರಷ್ಟು ಬೆಳೆದಿದೆ ಎಂದೂ ಸಂಸ್ಥೆಯು ಅಂದಾಜಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಶೇ 0.4ರಷ್ಟು ಬೆಳವಣಿಗೆ ಕಂಡಿತ್ತು. ಅದಕ್ಕಿಂತ ಹೆಚ್ಚಿನ ಬೆಳವಣಿಗೆ ಮಾರ್ಚ್ ತ್ರೈಮಾಸಿಕದಲ್ಲಿ ಆಗಿದೆ ಎಂಬುದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅಧಿತಿ ನಾಯರ್ ಅವರ ಅಂದಾಜು.

ರಾಜ್ಯ ಕೋವಿಡ್ ಅಂಕಿ-ಅಂಶ

24,50,215 ▲	ಒಟ್ಟು ಸೋಂಕಿತರು (24,24,904 ನಿನ್ನೆಯ ವಿವರ)
4,40,435 ▼	ಸಕ್ರಿಯ ಪ್ರಕರಣಗಳು
19,83,948 ▲	ಗುಣಮುಖರಾದವರು
25,811 ▲	ಒಟ್ಟು ಸಾವು

ದಿನದ ವರಿಕೆ

ಹೊಸ ಪ್ರಕರಣ	25,311 ▼
ಗುಣಮುಖ	57,333 ▲
ಸಾವು	529 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ

ಉತ್ತರ ಕರ್ನಾಟಕದಲ್ಲಿ ವೈದ್ಯರ ಕೊರತೆ: ಆದ್ಯತೆ ಮೇರೆಗೆ ನಿಯೋಜನೆ– ಆರೋಗ್ಯ ಸಚಿವ ಸುಧಾಕರ್ ಮಾಹಿತಿ

1,763 ವೈದ್ಯರ ನೇಮಕ ಪ್ರಕ್ರಿಯೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ 1,763 ವೈದ್ಯರ ನೇರ ನೇಮಕಾತಿ ಪೂರ್ಣಗೊಳಿಸಿ, ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಈ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, '715 ತಜ್ಞ ವೈದ್ಯರು ಮತ್ತು 1,048 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ವೈದ್ಯರ ಕೊರತೆ ಹೆಚ್ಚಿದ್ದು, ಅಲ್ಲಿನ ಜಿಲ್ಲೆಗಳಿಗೆ ಆದ್ಯತೆ ಮೇಲೆ ವೈದ್ಯರನ್ನು ನಿಯೋಜಿಸಲಾಗುವುದು' ಎಂದರು.

ತಜ್ಞ ವೈದ್ಯರಲ್ಲಿ 75 ಜನರಲ್ ಫಿಜಿಷಿಯನ್, 57 ಶಸ್ತ್ರಚಿಕಿತ್ಸಾ ತಜ್ಞರು, 145 ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, 40 ಮಂದಿ ಕಿವಿ, ಮೂಗು ಮತ್ತು ಗಂಟಲು ತಜ್ಞರು, 35 ಚರ್ಮರೋಗ ತಜ್ಞರು, 142 ಅರವಳಿಕೆ ತಜ್ಞರು, 153 ಮಕ್ಕಳ ತಜ್ಞರು, 51 ನೇತ್ರ ಚಿಕಿತ್ಸಾ ತಜ್ಞರು ಮತ್ತು 17 ಮಂದಿ ರೇಡಿಯಾಲಜಿ ತಜ್ಞರು ಇದ್ದಾರೆ ಎಂದು ತಿಳಿಸಿದರು.

ವಿಶೇಷ ಭತ್ಯೆ ಮಂಜೂರು: ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ವೈದ್ಯರಿಗೆ ತಿಂಗಳಿಗೆ ತಲಾ ₹ 10,000, ನರ್ಸಿಂಗ್ ಸಿಬ್ಬಂದಿಗೆ ತಿಂಗಳಿಗೆ ತಲಾ ₹ 8,000 ಮತ್ತು 'ಡಿ' ದರ್ಜೆ ಸಿಬ್ಬಂದಿಗೆ ತಿಂಗಳಿಗೆ ತಲಾ ₹ 10,000 ವಿಶೇಷ ಭತ್ಯೆ ಮಂಜೂರು ಮಾಡಲಾಗಿದೆ. ಏಪ್ರಿಲ್ 1ರಿಂದಲೇ ಈ ಸೌಲಭ್ಯ ದೊರೆಯಲಿದೆ ಎಂದರು.

ಕೆಲವು ಜಿಲ್ಲೆಗಳಲ್ಲಿ ಸರ್ಕಾರಿ ಆಸ್ಪತ್ರೆಗಳ ಹಿರಿಯ ವೈದ್ಯರು ಕೋವಿಡ್ ಚಿಕಿತ್ಸಾ ಕರ್ತವ್ಯಕ್ಕೆ ಹಾಜರಾಗದೇ ಇರುವುದು ಕಂಡುಬಂದಿದೆ. ಈ ಕಾರಣದಿಂದ ಎಲ್ಲ ಸರ್ಕಾರಿ ಆಸ್ಪತ್ರೆಗಳು ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜಿನ ವೈದ್ಯರ ದೈನಂದಿನ ಕರ್ತವ್ಯ ನಿಗದಿ ಪಟ್ಟಿಯನ್ನು ಆರೋಗ್ಯ ಇಲಾಖೆಯ ಆಯುಕ್ತರು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಕಾರ್ಯದರ್ಶಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಸುಧಾಕರ್ ಹೇಳಿದರು.

ಪದನಾಮ ಬದಲಾವಣೆ: 'ಆರೋಗ್ಯ ಸಹಾಯಕರ' ಪದನಾಮವನ್ನು 'ಅಧಿಕಾರಿಗಳು' ಎಂದು ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದೆ. ಕಿರಿಯ ಮತ್ತು ಹಿರಿಯ ಆರೋಗ್ಯ ಸಹಾಯಕರು, ಮಹಿಳಾ ಆರೋಗ್ಯ ಸಹಾಯಕರು ಹಾಗೂ ಜಿಲ್ಲಾ ಮಟ್ಟದ ಉಸ್ತುವಾರಿ ಅಧಿಕಾರಿಗಳ ಪದನಾಮವನ್ನು ಬದಲಾವಣೆ ಮಾಡಲಾಗಿದೆ. ಆದರೆ, ವೇತನ ಮತ್ತು ಇತರ ಸೌಲಭ್ಯಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಹೇಳಿದರು.

ತಾಂತ್ರಿಕ ಸಮಸ್ಯೆಯಿಂದ ಆಶಾ ಕಾರ್ಯಕರ್ತೆಯರ ಗೌರವ ಧನ ಪಾವತಿ ವಿಳಂಬವಾಗಿತ್ತು. ಹಳೆಯ ವ್ಯವಸ್ಥೆಯಲ್ಲೇ ಗೌರವ ಧನ ಪಾವತಿ ಮಾಡಲಾಗುತ್ತಿದೆ. 17 ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಂಡಿದ್ದು, ಎರಡು ದಿನಗಳಲ್ಲಿ ಎಲ್ಲ ಜಿಲ್ಲೆಗಳಲ್ಲೂ ಗೌರವ ಧನ ಪಾವತಿ ಆಗಲಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರವು 530 ಸಂಚಾರಿ ವೆಂಟಿಲೇಟರ್‌ಗಳನ್ನು ರಾಜ್ಯಕ್ಕೆ ನೀಡಿದೆ. ಅವುಗಳನ್ನು ರಾಜ್ಯದಲ್ಲಿರುವ ಸಾಮಾನ್ಯ ಆಂಬುಲೆನ್ಸ್‌ಗಳಿಗೆ ಅಳವಡಿಸಲಾಗುವುದು
ಡಾ.ಸುಧಾಕರ್, ಆರೋಗ್ಯ ಸಚಿವ

₹ 3.13 ಲಕ್ಷ ವಂಚನೆ

ಬೆಂಗಳೂರು: ಆರೋಗ್ಯದ ಬಗ್ಗೆ ಆನ್‌ಲೈನ್‌ನಲ್ಲಿ ಸಮಾಲೋಚನೆ ಮಾಡುವುದಾಗಿ ಹೇಳಿ ನಗರದ ನಿವಾಸಿಯೊಬ್ಬರಿಂದ ₹ 3.13 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಉತ್ತರ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಲ್ಲೇಶ್ವರ 8ನೇ ಅಡ್ಡರಸ್ತೆ ನಿವಾಸಿಯಾಗಿರುವ 36 ವರ್ಷದ ವ್ಯಕ್ತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಡಾ. ಸಂಜನಾ ಫರ್ನಾಂಡಿಸ್ ಹಾಗೂ ಡಾ. ಡಿ. ರವೀರಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಆರೋಪಿಗಳ ಪರಿಚಯವಾಗಿತ್ತು. ವೈದ್ಯರೆಂದು ಹೇಳಿಕೊಂಡಿದ್ದ ಆರೋಪಿಗಳು, ವೈಯಕ್ತಿಕ ಆರೋಗ್ಯ ಅಭಿವೃದ್ಧಿ ಹಾಗೂ ಮಾನಸಿಕ ಆರೋಗ್ಯ ಬಗ್ಗೆ ಆನ್‌ಲೈನ್ ಮೂಲಕ ಸಮಾಲೋಚನೆ ನೀಡುವುದಾಗಿ ಹೇಳಿದ್ದರು. ಅದಕ್ಕೆ ಶುಲ್ಕ ಪಾವತಿಸುವಂತೆ ತಿಳಿಸಿ, ವಂಚಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಉಚಿತ ಆಂಬುಲೆನ್ಸ್ ಸೇವೆಗೆ ವಿಧಾನಪರಿಷತ್ ಸದಸ್ಯ ರವಿ ಚಾಲನೆ ನೀಡಿದರು. ದಾನಿ ಸಪ್ತಗಿರಿ ಶಂಕರ್‌ನಾಯಕ್, ಮುಖಂಡರಾದ ಮಿಲ್ಟಿ ಮೂರ್ತಿ, ಯುವ ಕಾಂಗ್ರೆಸ್ ನ ನಾರಾಯಣಗೌಡ, ಮುಖಂಡರಾದ ಆರ್.ಉಮಾಶಂಕರ್, ಪುರುಷೋತ್ತಮ್, ಪ್ರದೀಪ್, ಉಮೇಶ್‌ಗೌಡ ಇದ್ದಾರೆ

ಆಂಬುಲೆನ್ಸ್ ಸೇವೆಗೆ ಚಾಲನೆ

ನೆಲಮಂಗಲ: 'ಕೋವಿಡ್ ತಗುಲಿ ಆಸ್ಪತ್ರೆಗೆ ತಲುಪಲಾಗದೆ, ಚಿಕಿತ್ಸೆ ದೊರೆಯದೆ ಹಲವರು ಪ್ರಾಣ ಕಳೆದುಕೊಂಡಿದ್ದು, ಇದನ್ನರಿತು ಸಪ್ತಗಿರಿ ಶಂಕರ್‌ನಾಯಕ್ ಅವರು ಉಚಿತ ಆಂಬುಲೆನ್ಸ್ ಸೇವೆ ಆರಂಭಿಸಿದ್ದಾರೆ' ಎಂದು ವಿಧಾನ ಪರಿಷತ್ತಿನ ಸದಸ್ಯ ರವಿ ತಿಳಿಸಿದರು.

ಉಚಿತ ಆಂಬುಲೆನ್ಸ್ ಹಾಗೂ ಸ್ಯಾನಿಟೈಸರ್ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ದಿನದ 24 ಗಂಟೆಯೂ ಎರಡು ಆಂಬುಲೆನ್ಸ್‌ಗಳು ಲಭ್ಯ ಇರಲಿವೆ' ಎಂದರು.

ಕಾಂಗ್ರೆಸ್ ಮುಖಂಡ ಸಪ್ತಗಿರಿ ಶಂಕರ್‌ನಾಯಕ್ ಮಾತನಾಡಿ, 'ಒಂದು ಆಂಬುಲೆನ್ಸ್ ನೆಲಮಂಗಲ ಪಟ್ಟಣ, ಇನ್ನೊಂದು ದಾಬಸ್‌ಪೇಟೆಯಲ್ಲಿ ಇರಲಿದೆ. ಸೋಂಕಿತರು ಹೆಚ್ಚಿರುವ ಪ್ರದೇಶದಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗುವುದು' ಎಂದರು.

ಬಡವರಿಗೆ ಸದ್ಯವೇ ಮತ್ತೊಂದು ಪ್ಯಾಕೇಜ್: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಆರ್ಥಿಕ ಪ್ಯಾಕೇಜ್ ಸಿಗದ ಬಡವರು ಮತ್ತು ಕೂಲಿ ಕಾರ್ಮಿಕರಿಗಾಗಿ ಇನ್ನು 10–12 ದಿನಗಳಲ್ಲಿ ಮತ್ತೊಂದು ಪ್ಯಾಕೇಜ್ ನೀಡಲು ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ಸೋಮವಾರ ನಗರದ ಬಿಬಿಎಂಪಿ ಕೋವಿಡ್ ವಾರ್‌ರೂಂಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿ ಅವರು ಈ ವಿಷಯ ತಿಳಿಸಿದರು.

ಸರ್ಕಾರದ ಹಣಕಾಸಿನ ಇತಿಮಿತಿಯಲ್ಲಿ ಮೊದಲ ಪ್ಯಾಕೇಜ್ ನೀಡಿದ್ದೇವೆ. ದೊಡ್ಡದಾಗಿ ಮಾತನಾಡುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಏನು ಮಾಡಿದ್ದಾರೆ ಎಂಬುದು ಜಗತ್ತಿಗೇ ಗೊತ್ತು ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಸಂಕಷ್ಟದಲ್ಲಿರುವ ಇನ್ನೂ ಸಾಕಷ್ಟು ಬಡವರಿಗೆ ಪ್ಯಾಕೇಜ್ ನೀಡುವ ಇಚ್ಛೆ ಇದೆ. ಆ ಬಗ್ಗೆ ಖಂಡಿತಾ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಅವರು ಭರವಸೆ ನೀಡಿದರು.

ಆಮ್ಲಜನಕ ಕೊರತೆ ನೀಗಿದೆ: ಕೋವಿಡ್ ರೋಗಿಗಳಿಗೆ ಆಮ್ಲಜನಕ ಸಹಿತ ಹಾಸಿಗೆ ಸಿಗುತ್ತಿದೆ. ಆಮ್ಲಜನಕದ ಕೊರತೆಯೂ ಇಲ್ಲ. ಐಸಿಯು ಸೌಲಭ್ಯ ಹೊಂದಿದ ಹಾಸಿಗೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ವ್ಯವಸ್ಥೆ ಮಾಡುತ್ತಿದ್ದೇವೆ ಎಂದು ಯಡಿಯೂರಪ್ಪ ಹೇಳಿದರು.

28 ಕೋವಿಡ್ ಆರೈಕೆ ಕೇಂದ್ರಗಳಲ್ಲಿ 3,000 ಹಾಸಿಗೆ ಮತ್ತು 1,000 ಆಕ್ಸಿಜನ್ ಹಾಸಿಗೆಗಳು ಇವೆ. ಇಲ್ಲಿ ಊಟ, ಔಷಧಿ ನೀಡಲಾಗುತ್ತದೆ. ವೈದ್ಯರು ಮತ್ತು ದಾದಿಯರೂ ಇದ್ದಾರೆ. ಕೋವಿಡ್ ಸೋಂಕಿಗೆ ಒಳಗಾದವರು ಇಲ್ಲಿಗೆ ನೇರವಾಗಿ ಬಂದು ಪರೀಕ್ಷೆ ಮಾಡಿಸಿಕೊಳ್ಳಬಹುದು ಎಂದೂ ಅವರು ತಿಳಿಸಿದರು.

ಕೊಳೆಗೇರಿಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಕೋವಿಡ್ ಪರೀಕ್ಷೆ ಮಾಡಲು ಸೂಚಿಸಿದ್ದೇನೆ. ಹಳ್ಳಿಗಳಲ್ಲೂ ಇದೇ ರೀತಿ ಮನೆ- ಮನೆಗಳಿಗೆ ಭೇಟಿ ನೀಡಿ ಪರೀಕ್ಷೆ ಮಾಡಲು ಸೂಚಿಸಲಾಗಿದೆ ಎಂದು ಹೇಳಿದರು.

ಕೋವಿಡ್ ಮೂಲ ಸೌಕರ್ಯ ಮೊದಲಿಗಿಂತಲೂ ಸಾಕಷ್ಟು ಸುಧಾರಣೆಯಾಗಿದೆ. ಲಸಿಕೆ ಕೊರತೆ ಇರುವುದು ನಿಜ. ಹೆಚ್ಚು ಲಸಿಕೆ ತರಿಸಿ, ಕೊರತೆ ಆಗದಂತೆ ನೋಡಿಕೊಳ್ಳಲಾಗುವುದು ಎಂದೂ ಯಡಿಯೂರಪ್ಪ ಭರವಸೆ ನೀಡಿದರು.

ಸುದ್ದಿ 2 ನಿಮಿಷ

'ಪರೀಕ್ಷೆಗೂ ಮೊದಲು ವಿದ್ಯಾರ್ಥಿಗಳಿಗೆ ಲಸಿಕೆ ನೀಡಿ'

ಬೆಂಗಳೂರು: 'ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ನಡೆಸುವುದಕ್ಕೂ ಮೊದಲು, ಆ ತರಗತಿಯ ವಿದ್ಯಾರ್ಥಿಗಳಿಗೆ ತುರ್ತು ಆಗಿ ವಿಶೇಷ ಕಾರ್ಯಯೋಜನೆ ರೂಪಿಸಿ ಕೋವಿಡ್ ಲಸಿಕೆ ಹಾಕಬೇಕು' ಎಂದು ಕಾಂಗ್ರೆಸ್ ಶಾಸಕ ಕೆ.ಜೆ. ಜಾರ್ಜ್ ಆಗ್ರಹಿಸಿದ್ದಾರೆ.

'ಲಸಿಕೆ ಹಾಕಿದ ಬಳಿಕ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಬೇಕು. ಪ್ರಮಾಣಪತ್ರ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

'ಕೋವಿಡ್ ಎರಡನೇ ಅಲೆಯ ಬಳಿಕ ಮೂರನೇ ಅಲೆಯ ಆತಂಕ ವ್ಯಕ್ತವಾಗಿದೆ. ಹೀಗಾಗಿ, ಈ ವಿದ್ಯಾರ್ಥಿಗಳಿಗೆ ಲಸಿಕೆ ಅಭಿಯಾನ ಕೈಗೊಂಡ ಬಳಿಕ ಜುಲೈ- ಆಗಸ್ಟ್‌ನಲ್ಲಿ ಪರೀಕ್ಷೆ ನಡೆಸಬಹುದು. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದರೆ ಅಪಾಯ ಖಚಿತ' ಎಂದು ಎಚ್ಚರಿಕೆ ನೀಡಿದ್ದಾರೆ.

'ಪದವಿಪೂರ್ವ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಸಭೆ ನಡೆಸಿ ತಕ್ಷಣ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಲಸಿಕೆ ನೀಡದೆ ಯಾವುದೇ ಕಾರಣಕ್ಕೂ ಪರೀಕ್ಷೆ ನಡೆಸಬಾರದು' ಎಂದೂ ಹೇಳಿದ್ದಾರೆ.

ಬಿಟಿಎಂ ಲೇಔಟ್: ಆಹಾರ ವಿತರಣೆಗೆ ಚಾಲನೆ

ಬೆಂಗಳೂರು: ಬಿಟಿಎಂ ಲೇಔಟ್ ಕ್ಷೇತ್ರ ವ್ಯಾಪ್ತಿಯಲ್ಲಿ 20 ಸಾವಿರ ಮಂದಿಗೆ ಆಹಾರ ವಿತರಣೆ ಹಾಗೂ 15 ಅಡುಗೆ ಮನೆಗಳಲ್ಲಿ ತಯಾರಿ ಕಾರ್ಯಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸೋಮವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು,'ಕೊರೊನಾದಿಂದ ಬಡಜನರಿಗೆ ಆಹಾರಕ್ಕೆ ಸಮಸ್ಯೆ ಎದುರಾಗಿದೆ. ಕೊರೊನಾ ನಿಯಂತ್ರಣಕ್ಕೆ ಸ್ವಚ್ಛತೆ ಬಹಳ ಮುಖ್ಯ. ಹಾಗಾಗಿ, ಆರೋಗ್ಯಕರ ವಾತಾವರಣದಲ್ಲಿ ಅಡುಗೆ ಮನೆಗಳ ಮೂಲಕ ಆಹಾರ ಸಿದ್ಧಪಡಿಸಲಾಗುತ್ತಿದೆ' ಎಂದರು.

'ಹಸಿವು ಮುಕ್ತ ಕ್ಷೇತ್ರ ನಮ್ಮ ಗುರಿ. ಆರೋಗ್ಯ ಕಾಪಾಡಿಕೊಳ್ಳಲು ಆಹಾರವೇ ಮುಖ್ಯ. ಜನರಿಗೆ ಆಹಾರ ಸಿಕ್ಕಾಗ ಮಾತ್ರ ಅವರ ಮನಸ್ಸು ಹಾಗೂ ಬುದ್ಧಿ ಉತ್ತಮ ರೀತಿಯಲ್ಲಿ ಆಲೋಚನೆ ಮಾಡುತ್ತದೆ. ಇದನ್ನು ಮನಗಂಡು ಕ್ಷೇತ್ರದಲ್ಲಿರುವ ಬಡವರು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು, ವಲಸೆ ಕಾರ್ಮಿಕರು, ಆಟೊ ಚಾಲಕರು ಸೇರಿದಂತೆ ಸಂಕಷ್ಟದಲ್ಲಿರುವ ಜನರಿಗೆ ಉಚಿತವಾಗಿ ಆಹಾರ ವಿತರಿಸಲಾಗುತ್ತಿದೆ' ಎಂದು ಹೇಳಿದರು.

'ಪ್ರತಿದಿನ 20 ಸಾವಿರ ಮಂದಿಗೆ ಆಹಾರ ವಿತರಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಕೋರಮಂಗಲ, ರಾಜೇಂದ್ರ ನಗರ, ಪಾಸ್ ಪೋರ್ಟ್ ಕಚೇರಿ ಹತ್ತಿರ, ಮಡಿವಾಳ, ಮಾರುತಿ ನಗರ ಸೇರಿದಂತೆ 15 ಸ್ಥಳಗಳಲ್ಲಿ ಅಡುಗೆ ಮನೆಗಳನ್ನು ಆರಂಭಿಸಲಾಗಿದೆ. ಬೇಡಿಕೆಗೆ ತಕ್ಕಂತೆ ಆಹಾರ ಪೂರೈಸಲಾಗುವುದು. ಕಳೆದ ಲಾಕ್‌ಡೌನ್ ವೇಳೆ 60 ಸಾವಿರ ಪಡಿತರ ಕಿಟ್ ವಿತರಿಸಲಾಗಿತ್ತು. ಈ ಬಾರಿಯೂ ಕಿಟ್ ವಿತರಿಸುವ ಚಿಂತನೆ ಇದೆ' ಎಂದರು.

ಕೋರಮಂಗಲದ ಕಾಂಗ್ರೆಸ್ ಮುಖಂಡ ವಿಲೇಜ್ ವೆಂಕಟೇಶ್ ಇದ್ದರು.

ಬೇಡಿಕೆ ಈಡೇರಿಸದಿದ್ದರೆ ಶಾಲೆ ಬಂದ್ : ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಶಾಲಾ ಶಿಕ್ಷಕ- ಶಿಕ್ಷಕೇತರ ಸಿಬ್ಬಂದಿಗೆ ಲಸಿಕೆ ನೀಡುವುದು, ವಿಶೇಷ ಪ್ಯಾಕೇಜ್ ಘೋಷಣೆ ಮತ್ತು ವಿದ್ಯಾರ್ಥಿಗಳ ದಾಖಲಾತಿಗೆ ಆದೇಶ ಹೊರಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ 2021-22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶಾಲೆಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಲಿದೆ' ಎಂದು ರಾಜ್ಯದ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ.

ಖಾಸಗಿ ಶಾಲಾಡಳಿತ ಮಂಡಳಿಗಳ ಸಂಘಟನೆಗಳಾದ ಕ್ಯಾಮ್ಸ್, ರುಪ್ಸಾ, ಕುಸ್ಮಾ, ಅಲ್ಪಸಂಖ್ಯಾತ ಶಾಲೆಗಳ ಒಕ್ಕೂಟ ಸೋಮವಾರ ಸಭೆ ನಡೆಸಿ ಈ ತೀರ್ಮಾನ ತೆಗೆದುಕೊಂಡಿವೆ.

ಈ ಬಗ್ಗೆ ಮಾತನಾಡಿದ ಕ್ಯಾಮ್ಸ್ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್, 'ಜೂನ್ 15ರಿಂದ ಶೈಕ್ಷಣಿಕ ವರ್ಷ ಆರಂಭವಾಗಲಿದೆ ಎಂದು ಈಗಾಗಲೇ ಸರ್ಕಾರ ತಿಳಿಸಿದೆ. ಆನ್‌ಲೈನ್‌ನಲ್ಲಿ ತರಗತಿ ನಡೆಸಲು ನಾವು ತಯಾರಿದ್ದೇವೆ. ಆದರೆ, ಇದಕ್ಕೂ ಮೊದಲು ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಕೋವಿಡ್ ಲಸಿಕೆ ನೀಡಬೇಕು. ಒಂದರಿಂದ 10ನೇ ತರಗತಿಯವರೆಗೂ ಎಲ್ಲ ವಿದ್ಯಾರ್ಥಿಗಳು ಕಡ್ಡಾಯವಾಗಿ ಶಾಲೆಗೆ ಪ್ರವೇಶ ಪಡೆಯುವಂತೆ ಆದೇಶ ಹೊರಡಿಸಬೇಕು. ಶುಲ್ಕ ಬಿಕ್ಕಟ್ಟು ಪರಿಹಾರ ಕಲ್ಪಿಸಬೇಕು. ನೇರ ಅಥವಾ ಆನ್‌ಲೈನ್ ಎರಡರಲ್ಲಿ ಒಂದಕ್ಕೆ ಕಡ್ಡಾಯವಾಗಿ ಹಾಜರಾತಿ ಇರಬೇಕು. ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸದ ಹೊರತು ಶಾಲೆಗಳನ್ನು ಆರಂಭಿಸುವುದಿಲ್ಲ' ಎಂದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಐದು ರಾಜ್ಯಗಳ ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ಹಟಕ್ಕೆ ಬಿದ್ದು, ಕೊರೊನಾ ನಿಯಂತ್ರಣ ಮರೆತರು. ಆದರಿಂದಾಗಿಯೇ ದೇಶದಲ್ಲಿ ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹಬ್ಬಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಆರೋಪಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕೋವಿಡ್ ಮೊದಲ ಅಲೆಯನ್ನು ಮೋದಿ ಸಮರ್ಥವಾಗಿ ನಿಯಂತ್ರಿಸಿದ್ದಾರೆ ಎಂದು ಎಲ್ಲರೂ ಹೊಗಳಿದ್ದರು. ಆದರೆ, ಎರಡನೇ ಅಲೆಯಲ್ಲಿ ಸೋಂಕು ತೀವ್ರವಾಗಿ ಹೆಚ್ಚುತ್ತಿದೆ. ಕಪ್ಪು ಶಿಲೀಂಧ್ರ ಮತ್ತು ಬಿಳಿ ಶಿಲೀಂಧ್ರದ ಸೋಂಕು ಕೂಡ ಆತಂಕ ಹುಟ್ಟಿಸಿವೆ. ಈ ಕುರಿತು ವಿದೇಶಗಳ ತಜ್ಞರೂ ಮಾತನಾಡುತ್ತಿದ್ದಾರೆ' ಎಂದರು.

ಚುನಾವಣೆಯ ಬದಲಿಗೆ ಕೋವಿಡ್ ನಿರ್ವಹಣೆಗೆ ಪ್ರಧಾನಿ ಗಮನ ನೀಡಿದ್ದರೆ ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ ಅನಿಸುತ್ತದೆ. ಈ ಬಾರಿ ಹೆಚ್ಚು ಸಮಸ್ಯೆ ಆಗಿರುವುದಕ್ಕೆ ಅದೇ ಕಾರಣ ಇರಬಹುದು ಎಂದು ಅವರು ಹೇಳಿದರು.

'ಕೊರೊನಾ ನಿಯಂತ್ರಣದ ವಿಚಾರದಲ್ಲಿ ಪ್ರಧಾನಿ ಹಾಗೂ ರಾಜ್ಯ ಸರ್

ಮೆಟ್ರೊ: ಏಪ್ರಿಲ್‌ವರೆಗಿನ ಪ್ರಗತಿ ವಿವರ ಬಿಡುಗಡೆ ಮಾಡಿದ ಬಿಎಂಆರ್‌ಸಿಎಲ್

ಸುರಂಗ ನಿರ್ಮಾಣ ಕಾಮಗಾರಿ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) 'ನಮ್ಮ ಮೆಟ್ರೊ'ದ ಏಪ್ರಿಲ್‌ವರೆಗಿನ ಕಾಮಗಾರಿಯ ಪ್ರಗತಿಯ ವಿವರವನ್ನು ಸೋಮವಾರ ಬಿಡುಗಡೆ ಮಾಡಿದೆ. ಬೇರೆ ಎಲ್ಲದಕ್ಕಿಂತ ಸುರಂಗ ಮಾರ್ಗ ನಿರ್ಮಾಣ ಕಾಮಗಾರಿ ಹೆಚ್ಚು ಪ್ರಗತಿ ಕಂಡಿದೆ.

ಡೇರಿ ವೃತ್ತದಿಂದ ಸೌತ್ ರ‍್ಯಾಂಪ್‌ವರೆಗೆ ಸುರಂಗ ಕೊರೆಯುವ ಯಂತ್ರ (ಟಿಬಿಎಂ) ಅಣಿಗೊಳಿಸಲಾಗಿದೆ. ಇದು ದಕ್ಷಿಣದಿಂದ ಉತ್ತರದ ಕಡೆಗೆ ಸುಮಾರು 600 ಮೀ. ಉದ್ದದ ಸುರಂಗ ಕೊರೆಯಲಿದೆ. ಏ. 22ರಂದು ಇದು ಕಾರ್ಯಾರಂಭ ಮಾಡಿದೆ.

ಡೇರಿ ವೃತ್ತದಿಂದ ಟ್ಯಾನರಿ ರಸ್ತೆ ನಡುವಿನ 9.28 ಕಿ.ಮೀ. ಮಾರ್ಗದಲ್ಲಿ ಈಗಾಗಲೇ ಐದು ಟಿಬಿಎಂಗಳ ಸುರಂಗ ಕಾಮಗಾರಿ ವಿವಿಧ ಹಂತದಲ್ಲಿದೆ. ಕಂಟೋನ್ಮೆಂಟ್- ಶಿವಾಜಿನಗರ ಮಧ್ಯೆ ಸುರಂಗ ನಿರ್ಮಿಸುತ್ತಿರುವ ಟಿಬಿಎಂ ಊರ್ಜಾ 576 ರಿಂಗ್‌ಗಳ ಪೈಕಿ 286 ರಿಂಗ್‌ಗಳನ್ನು ಜೋಡಿಸಿದೆ. ಇದೇ ಮಾರ್ಗದಲ್ಲಿ ಬರುತ್ತಿರುವ 'ವಿಂಧ್ಯ' ಸುಮಾರು 254 ರಿಂಗ್‌ಗಳನ್ನು ಜೋಡಿಸುವಲ್ಲಿ ಯಶಸ್ವಿಯಾಗಿದೆ.

ಶಿವಾಜಿನಗರದಿಂದ ಎಂ.ಜಿ. ರಸ್ತೆ ಕಡೆಗೆ ಸಾಗುತ್ತಿರುವ 'ಅವನಿ' 309 ರಿಂಗ್‌ಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಳಿಸಿದ್ದು, ಹಿಂದೆಯೇ ಪಯಣ ಬೆಳೆಸಿರುವ 'ಲವಿ' 56 ರಿಂಗ್‌ಗಳನ್ನು ಜೋಡಣೆ ಮಾಡಿದೆ. ವೆಲ್ಲಾರ ಜಂಕ್ಷನ್‌ನಿಂದ ಲ್ಯಾಂಗ್‌ಫೋರ್ಡ್ ರಸ್ತೆ ಮಧ್ಯೆ ಮಾರ್ಚ್‌ನಿಂದ ಸುರಂಗ ಕೊರೆಯುವ ಕಾರ್ಯ ಆರಂಭಿಸಿರುವ ಆರ್‌ಟಿ01 ಟಿಬಿಎಂ 429 ರಿಂಗ್‌ಗಳ ಪೈಕಿ 55 ರಿಂಗ್‌ಗಳನ್ನು (ಶೇ. 13ರಷ್ಟು) ಜೋಡಣೆ ಮಾಡಿದೆ ಎಂದು ಬಿಎಂಆರ್‌ಸಿಎಲ್ ವಾರ್ತಾಪತ್ರದಲ್ಲಿ ತಿಳಿಸಿದೆ.

ಪೈಲಿಂಗ್ ಕಾಮಗಾರಿ ಜೋರು: ಸುರಂಗ ಕಾಮಗಾರಿಯೊಂದಿಗೆ ಮಾರ್ಗದುದ್ದಕ್ಕೂ ಬರುವ ನಿಲ್ದಾಣಗಳ ನಿರ್ಮಾಣ ಕಾಮಗಾರಿ ಕೂಡ ಚುರುಕಿನಿಂದ ಸಾಗಿದೆ. ಇಲ್ಲಿ ಪೈಲಿಂಗ್ ಕಾರ್ಯದಲ್ಲಿ (ಸಿಮೆಂಟ್ ಕಂಬಗಳ ಅಳವಡಿಕೆ) ಶೇ 70ರಷ್ಟು ಪ್ರಗತಿ ಕಂಡುಬಂದಿದೆ.

ಇನ್ನು, ಕಾರ್ಮಿಕರ ಕೊರತೆಯ ನಡುವೆಯೂ ಸಿವಿಲ್ ಕಾಮಗಾರಿ ಪ್ರಗತಿ ತೃಪ್ತಿಕರವಾಗಿದೆ ಎಂದು ನಿಗಮ ಹೇಳಿದೆ.

ಶಿವಾಜಿನಗರದಿಂದ ಎಂ.ಜಿ. ರಸ್ತೆಯವರೆಗೆ 'ಅವನಿ' ಟಿಬಿಎಂ ಕೊರೆದಿರುವ ಸುರಂಗ ಮಾರ್ಗದ ನೋಟ

ಏಪ್ರಿಲ್‌ವರೆಗಿನ ಸಿವಿಲ್ ಕಾಮಗಾರಿ ಪ್ರಗತಿ (ಶೇ. ದಲ್ಲಿ)	
ಬೈಯಪ್ಪನಹಳ್ಳಿ- ವಿಶ್ವೇಶ್ವರಯ್ಯ ಕೈಗಾರಿಕೆ ಪ್ರದೇಶ	86
ವಿಶ್ವೇಶ್ವರಯ್ಯ ಕೈಗಾರಿಕೆ ಪ್ರದೇಶ- ವೈಟ್‌ಫೀಲ್ಡ್	99
ಮೈಸೂರು ರಸ್ತೆ- ಪಟ್ಟಣಗೆರೆ	96
ಪಟ್ಟಣಗೆರೆ- ಬಲ್ಲಘಟ್ಟ	95
ಹೆಸರಘಟ್ಟ ಕ್ರಾಸ್- ಬಿಐಇಸಿ	70
ಯಲಚೇನಹಳ್ಳಿ- ರೇಷ್ಮೆ ಸಂಸ್ಥೆ	96
ಬೊಮ್ಮಸಂದ್ರ- ಹೊಸ ರಸ್ತೆ	78
ಹೊಸ ರಸ್ತೆ- ಬೊಮ್ಮನಹಳ್ಳಿ	92
ಬೊಮ್ಮನಹಳ್ಳಿ- ಆರ್.ವಿ. ರಸ್ತೆ	39
ಕಾಳೇನ ಅಗ್ರಹಾರ- ಸ್ವಾಗತ್ ಕ್ರಾಸ್ ರಸ್ತೆ	37

ಐದು ಆಮ್ಲಜನಕ ಸಾಂದ್ರಕ ಹಸ್ತಾಂತರ

ಬಿಎಂಆರ್‌ಸಿಎಲ್‌ನಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು ಮತ್ತು ಉದ್ಯೋಗಿಗಳಿಗಾಗಿ ಏಪ್ರಿಲ್‌ನಲ್ಲಿ ನಿಗಮವು ನೂರು ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ ತೆರೆದಿದೆ. 80ಕ್ಕೂ ಹೆಚ್ಚು ರೋಗಿಗಳು ಚಿಕಿತ್ಸೆ ಪಡೆದಿದ್ದು, 15ಕ್ಕೂ ಅಧಿಕ ಮಂದಿ ಗುಣಮುಖರಾಗಿದ್ದಾರೆ.

ಇದೇ ಕೇಂದ್ರಕ್ಕೆ ಸೋಮವಾರ ಹತ್ತು ಲೀಟರ್ ಸಾಮರ್ಥ್ಯದ ಐದು ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಹಸ್ತಾಂತರಿಸಲಾಯಿತು. ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಸಿಂಗ್ ಮತ್ತಿತರ ಅಧಿಕಾರಿಗಳು ಇದ್ದರು.

ತಪಾಸಣೆ ಬಿಗಿ: 1,496 ವಾಹನ ಜಪ್ತಿ

ಬೆಂಗಳೂರು: ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ನಗರದಲ್ಲಿ ವಾಹನಗಳ ತಪಾಸಣೆಯನ್ನು ಪೊಲೀಸರು ಬಿಗಿಗೊಳಿಸಿದ್ದು, ಸೋಮವಾರ 1,496 ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಕೆ.ಆರ್. ಮಾರುಕಟ್ಟೆ, ಕಾರ್ಪೊರೇಷನ್ ವೃತ್ತ, ಮೆಜೆಸ್ಟಿಕ್, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ಮೇಖ್ರಿ ವೃತ್ತ, ಶಿವಾಜಿನಗರ, ಸ್ಯಾಟಲೈಟ್ ಬಸ್ ನಿಲ್ದಾಣ ಹಾಗೂ ಸುತ್ತಮುತ್ತ ಪ್ರದೇಶಗಳ ಚೆಕ್‌ಪೋಸ್ಟ್‌ನಲ್ಲಿ ಸಾವಿರಾರು ವಾಹನಗಳನ್ನು ತಪಾಸಣೆ ನಡೆಸಲಾಯಿತು.

ಅಗತ್ಯ ವಸ್ತುಗಳ ಖರೀದಿ ಅವಧಿ ಮುಗಿದ ಬಳಿಕವೂ ಹಲವರು ಅನಗತ್ಯವಾಗಿ ಸಂಚರಿಸುತ್ತಿದ್ದರು. ಅಂಥವರ ವಾಹನಗಳನ್ನು ಜಪ್ತಿ ಮಾಡಿದ ಪೊಲೀಸರು, ನೋಟಿಸ್ ನೀಡಿ ಕಳುಹಿಸಿದರು.

'1,316 ದ್ವಿಚಕ್ರ ವಾಹನ, 79 ಮೂರು ಚಕ್ರ ವಾಹನ ಹಾಗೂ 101 ನಾಲ್ಕು ಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ವೇಳಾಪಟ್ಟಿ ವಿಸ್ತರಿಸಿದ ಹೈಕೋರ್ಟ್

ಬೆಂಗಳೂರು: ಕೋವಿಡ್ ಕಾರಣದಿಂದ ಕೆಲ ವರ್ಗಗಳ ಪ್ರಕರಣಗಳನ್ನು ವಿಲೇವಾರಿ ಮಾಡಲು ಜಿಲ್ಲಾ ಮತ್ತು ವಿಚಾರಣಾ ನ್ಯಾಯಾಲಯಗಳಿಗೆ ನೀಡಲಾದ ಸಮಯದ ವೇಳಾಪಟ್ಟಿಯನ್ನು ಹೈಕೋರ್ಟ್ ಸೋಮವಾರ ವಿಸ್ತರಿಸಿದೆ.

ಜಿಲ್ಲಾ ಮತ್ತು ವಿಚಾರಣಾ ನ್ಯಾಯಾಲಯಗಳ ವಿಲೇವಾರಿಗೆ ನಿಗದಿಪಡಿಸಿದ ಗಡುವಿನಲ್ಲೇ ಕೆಲ ಪ್ರಕರಣಗಳ ವಿಲೇವಾರಿ ಕಷ್ಟ ಎಂದು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ ಹೊರಡಿಸಿದ ಎಸ್‌ಇಪಿ (ಮಾರ್ಗದರ್ಶಿ ಸೂತ್ರ) ತಿಳಿಸಿದೆ. ನಿಗದಿತ ಸಮಯ ಮೀರಿದ ಪ್ರಕರಣಗಳನ್ನು ವಿಲೇವಾರಿ ಮಾಡಲು ಅವಧಿಯನ್ನು ಮೂರು ತಿಂಗಳಿಗೆ ವಿಸ್ತರಿಸಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳು ಇ-ಮೇಲ್ ಮೂಲಕ ನೀಡುವ ನೋಟಿಸ್‌ಗಳನ್ನು ಸ್ವೀಕರಿಸಬೇಕು. ಇ-ಮೇಲ್ ಐಡಿಗಳ ಪಟ್ಟಿಯನ್ನು ಹೆಚ್ಚುವರಿ ಅಡ್ವೊಕೇಟ್ ಜನರಲ್ ನೀಡಬೇಕು ಎಂದು ಪೀಠ ತಿಳಿಸಿದೆ.

'ಕೋವಿಡ್ ಹರಡಲು ನ್ಯಾಯಾಲಯ ಯಾವುದೇ ಕೊಡುಗೆ ನೀಡುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ನಿರ್ದೇಶನಗಳನ್ನು ನೀಡಲಾಗಿದೆ' ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಜೂ.2ಕ್ಕೆ ಮುಂದೂಡಿತು.

ಮ್ಯೂಕರ್‌ಮೈಕೊಸಿಸ್ ರೋಗಿಗಳಿಗೆ ಹಾಸಿಗೆ ಮೀಸಲು: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮ್ಯೂಕರ್‌ಮೈಕೊಸಿಸ್(ಕಪ್ಪು ಶಿಲೀಂಧ್ರ) ಸೋಂಕಿಗೆ ತುತ್ತಾದವರಿಗೆ ಚಿಕಿತ್ಸೆ ನೀಡಲು ಬೌರಿಂಗ್ ಆಸ್ಪತ್ರೆಯಲ್ಲಿ ನೂರು ಹಾಸಿಗೆಗಳನ್ನು ಮೀಸಲಿಡಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಆರ್. ಅಶೋಕ್

ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು 'ಮ್ಯೂಕರ್‌ಮೈಕೊಸಿಸ್‌ಗೆ ತುತ್ತಾದವರಿಗೆ ಚಿಕಿತ್ಸೆ ನೀಡಲು 200 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅದರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 100 ಹಾಸಿಗೆ, ಬೌರಿಂಗ್ ಆಸ್ಪತ್ರೆಯಲ್ಲಿ 100 ಹಾಸಿಗೆ ನಿಗದಿಪಡಿಸಲಾಗಿದೆ. ಮಹಾರಾಷ್ಟ್ರ ಹಾಗೂ ಗುಜರಾತ್ ಪರಿಸ್ಥಿತಿ ಗಮನಿಸಿದರೆ ಇನ್ನೂ ಹೆಚ್ಚಿನ ಹಾಸಿಗೆಗಳ ಅವಶ್ಯಕತೆ ಇದೆ' ಎಂದರು.

'ಈ ಕಾಯಿಲೆಯ ಚಿಕಿತ್ಸೆಗೆ ಹೆಚ್ಚಿನ ಲಿಪೊಸೊಮಲ್ ಆಂಫೋಟೆರಿಸಿನ್ ಔಷಧಿ ಅವಶ್ಯಕತೆಯಿದೆ ಎಂದು ಕೇಂದ್ರ ಸಚಿವ ಸದಾನಂದಗೌಡ ಅವರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದೇನೆ. ಒಬ್ಬ ರೋಗಿಗೆ ಕನಿಷ್ಠ 70 ವಯಲ್ಸ್ ಬೇಕಾಗುತ್ತದೆ. ಅದು ಗರಿಷ್ಠ 360ಕ್ಕೂ ತಲುಪಬಹುದು. ಆ ನಿಟ್ಟಿನಲ್ಲಿ ಅಂದಾಜು ವಾರಕ್ಕೆ 9,800 ವಯಲ್ಸ್ ನೀಡಬೇಕು ಎಂದು ಕೇಳಿಕೊಂಡಿದ್ದೇನೆ' ಎಂದರು.

'ಮೂರನೇ ಅಲೆಯು ಮಕ್ಕಳಿಗೆ ಹೆಚ್ಚು ತಗುಲಬಹುದು ಎಂಬ ಅಭಿಪ್ರಾಯ ಇರುವ ಕಾರಣ ಮಕ್ಕಳ ಆಸ್ಪತ್ರೆಗಳನ್ನ ಸಿದ್ಧಪಡಿಸಲು ಪ್ರಯತ್ನಗಳು ಆರಂಭವಾಗಿವೆ. ಈಗಾಗಲೇ ಪದ್ಮನಾಭನಗರದಲ್ಲಿ ಸೋಂಕಿಗೆ ತುತ್ತಾದ ಮಕ್ಕಳಿಗೆ ಚಿಕಿತ್ಸೆ ನೀಡಲು ಆಸ್ಪತ್ರೆ ಸಿದ್ಧಪಡಿಸಲು ತಯಾರಿ ನಡೆಯುತ್ತಿದೆ. ಈ ರೀತಿಯ ಸೌಲಭ್ಯವನ್ನು ಬೆಂಗಳೂರಿನ ವಿವಿಧ ಭಾಗಗಳಲ್ಲಿಯೂ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತಾ ಅವರಿಗೆ ಸೂಚಿಸಿದ್ದೇನೆ' ಎಂದು ಹೇಳಿದರು.

'ಬೆಂಗಳೂರಿನಲ್ಲಿ ದಿನಕ್ಕೆ ಸುಮಾರು 7 ಸಾವಿರ ಪ್ರಕರಣಗಳು ದಾಖಲಾಗುತ್ತಿವೆ. ಮುಂದಿನ ಹತ್ತು ದಿನಗಳಲ್ಲಿ ಈ ಸಂಖ್ಯೆ 2 ಸಾವಿರಕ್ಕೆ ಇಳಿಯುವ ಸಾಧ್ಯತೆಯಿದೆ. ಕೋವಿಡ್ ಸೋಂಕು ನಿಯಂತ್ರಣಕ್ಕೆ ಬರುವವರೆಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ' ಎಂದರು.

ಲಸಿಕೆ ದರ ನಿಯಂತ್ರಣ ಅಸಾಧ್ಯ

ಬೆಂಗಳೂರು: ಖಾಸಗಿ ಆಸ್ಪತ್ರೆಗಳು ಮತ್ತು ಆರೋಗ್ಯ ಸಂಸ್ಥೆಗಳು ನೇರವಾಗಿ ಉತ್ಪಾದಕರಿಂದ ಕೋವಿಡ್ ಲಸಿಕೆ ಖರೀದಿಸಿ, ವಿತರಿಸುತ್ತಿವೆ. ಖಾಸಗಿಯಾಗಿ ನೀಡುವ ಲಸಿಕೆಯ ದರವನ್ನು ಸರ್ಕಾರ ನಿಯಂತ್ರಿಸುವುದು ಅಸಾಧ್ಯ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಖಾಸಗಿ ಆಸ್ಪತ್ರೆಗಳು ಕೋವಿಡ್ ಲಸಿಕೆಗೆ ಹೆಚ್ಚಿನ ದರ ನಿಗದಿಪಡಿಸಿರುವ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಖಾಸಗಿ ಆಸ್ಪತ್ರೆಗಳು ನೇರವಾಗಿ ಲಸಿಕೆ ಖರೀದಿಸುತ್ತಿವೆ. ಅವು ವಿತರಿಸುವ ಲಸಿಕೆಯ ದರವನ್ನು ನಿಯಂತ್ರಿಸುವುದಕ್ಕೆ ಸರ್ಕಾರಕ್ಕೆ ಅವಕಾಶಗಳಿಲ್ಲ. ಕೆಲವೇ ದಿನಗಳಲ್ಲಿ ಸರ್ಕಾರದಿಂದಲೇ ಎಲ್ಲರಿಗೂ ಲಸಿಕೆ ನೀಡುವುದು ಸಾಧ್ಯವಾಗಲಿದೆ' ಎಂದರು.

ರಾಜ್ಯದಲ್ಲಿ ಈವರೆಗೆ 1.22 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. 11.46 ಲಕ್ಷ ಡೋಸ್‌ಗಳಷ್ಟು ಲಸಿಕೆಯ ದಾಸ್ತಾನು ಇದೆ ಎಂದು ತಿಳಿಸಿದರು.

ಸೋಂಕಿತರ ಸಾವಿನ ದರ ಶೇ 3ರ ಸಮೀಪಕ್ಕೆ

ಬಿಬಿಎಂಪಿ: ಇಳಿಯುತ್ತಲೇ ಇಲ್ಲ ಮರಣದ ಸರಣಿ • ಮೇ ತಿಂಗಳಲ್ಲಿ 5,144 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹರಡುವಿಕೆ ಪ್ರಮಾಣ ಎರಡು ವಾರಗಳಿಂದ ಇಳಿಕೆ ಕಂಡಿದೆ. ಆದರೆ, ಸೋಂಕಿತರ ಸಾವಿರ ದರ ಮಾತ್ರ ಏರುತ್ತಲೇ ಸಾಗುತ್ತಿದ್ದು, ಶೇ 3ರ ಸಮೀಪಕ್ಕೆ ತಲುಪಿದೆ.

ಬಿಬಿಎಂಪಿ ಸೋಮವಾರ ಬಿಡುಗಡೆ ಮಾಡಿದ ಅಂಕಿ-ಅಂಶಗಳ ಪ್ರಕಾರ ಕೋವಿಡ್ ರೋಗಿಗಳ ಸಾವಿನ ದರ ಶೇ 2.95 ಇತ್ತು. 2021ರ ಏಪ್ರಿಲ್ ಆರಂಭದಲ್ಲಿ ಶೇ 0.37ರಷ್ಟಿದ್ದ ಕೋವಿಡ್ ಪೀಡಿತರ ಸಾವಿನ ದರ ಏಪ್ರಿಲ್ ಅಂತ್ಯಕ್ಕೆ ಶೇ 0.56ರಷ್ಟಿತ್ತು. ಸಾವಿನ ದರ ಇಳಿಕೆ ಕಾಣದಿರುವುದು ಬಿಬಿಎಂಪಿ ಅಧಿಕಾರಿಗಳನ್ನು ಚಿಂತೆಗೀಡುಮಾಡಿದೆ.

ನಗರದಲ್ಲಿ ಇದುವರೆಗೆ ಒಟ್ಟು 11,514 ಮಂದಿ ಕೋವಿಡ್‌ನಿಂದ ಅಸುನೀಗಿದ್ದಾರೆ. ಅವರಲ್ಲಿ ಮೇ ತಿಂಗಳಿನಲ್ಲಿ ಮೃತಪಟ್ಟವರ ಸಂಖ್ಯೆ 5,144. ಅಂದರೆ ನಗರದಲ್ಲಿ ಇದುವರೆಗೆ ಕೋವಿಡ್‌ನಿಂದ ಆಗಿರುವ ಸಾವುಗಳಲ್ಲಿ ಶೇ 44.67ರಷ್ಟು ಮಂದಿ ಮೇ ತಿಂಗಳಿನಲ್ಲಿ ಮೃತಪಟ್ಟಿದ್ದಾರೆ.

'ಕೋವಿಡ್ ಉಲ್ಬಣಗೊಂಡು ದೇಹಸ್ಥಿತಿ ಗಂಭೀರ ಹಂತ ತಲುಪಿದವರಿಗೆ ಸಕಾಲದಲ್ಲಿ ಚಿಕಿತ್ಸೆ ಕೊಡಿಸಲು ಸಾಧ್ಯವಾಗುತ್ತಿಲ್ಲ. ತೀವ್ರನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆಗಳ ಕೊರತೆ ಈಗಲೂ ಮುಂದುವರಿದಿದೆ. ಐಸಿಯು ಹಾಸಿಗೆ ಕೊಡಿಸಿ ಎಂದು ಬಿಬಿಎಂಪಿ ಸಹಾಯವಾಣಿಗೆ ಈಗಲೂ ನಿತ್ಯ ನೂರಾರು ಕರೆಗಳು ಬರುತ್ತಿವೆ. ಒಮ್ಮೆ ಐಸಿಯುಗೆ ದಾಖಲಾದವರು ಪೂರ್ತಿ ಗುಣಮುಖರಾಗಲು 10-15 ದಿನಗಳು ಬೇಕು. ಐಸಿಯುಗಳ ಸಾಮರ್ಥ್ಯ ಹೆಚ್ಚಿಸದ ಹೊರತು ಸಾವಿನ ಪ್ರಮಾಣ ತಗ್ಗಿಸುವುದು ಕಷ್ಟ. ಸೋಂಕು ಪತ್ತೆ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿ, ಅಗತ್ಯ ಇರುವ ಎಲ್ಲರಿಗೂ ಐಸಿಯು ಹಾಸಿಗೆ ಲಭ್ಯವಾದರಷ್ಟೇ ಸಾವಿನ ಸಂಖ್ಯೆ ಕಡಿಮೆ ಆಗಬಹುದು' ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಕೋವಿಡ್ ಪರೀಕ್ಷೆ ಮಾಡಿಸಿಕೊಂಡವರಲ್ಲಿ ಸೋಂಕು ದೃಢಪಡುವ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿರುವುದು ಅಧಿಕಾರಿಗಳು ತುಸು ನಿಟ್ಟುಸಿರು ಬಿಡುವಂತೆ ಮಾಡಿದೆ. ಮೇ ತಿಂಗಳ ಮೊದಲ ವಾರದಲ್ಲಿ ಶೇ 38.32ರಷ್ಟಕ್ಕೆ ಹೆಚ್ಚಳವಾಗಿದ್ದ ಸೋಂಕು ಪತ್ತೆ ದರ ಈಗ ಶೇ 18.65ಕ್ಕೆ ಇಳಿಕೆ ಕಂಡಿದೆ.





ಮೆಚ್ಚುಗೆ ವ್ಯಕ್ತಪಡಿಸಿರುವ ಹಿರಿಯ ಅಧಿಕಾರಿಗಳು

ಕುಟುಂಬಸ್ಥರ ಸ್ಥಾನದಲ್ಲಿ ನಿಂತು ಪೀಣ್ಯದ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಿದ್ದಾರೆ. ಕೊನೆ ಕ್ಷಣದಲ್ಲಿ ಮೃತದೇಹಕ್ಕೆ ನಾಗರಾಜು ಸೆಲ್ಯೂಟ್

ಬಡ ಕಾರ್ಮಿಕನ ಅಂತ್ಯಕ್ರಿಯೆ ನೆರವೇರಿಸಿದ ಹೆಡ್ ಕಾನ್‌ಸ್ಟೆಬಲ್

ಬೆಂಗಳೂರು: ರೈಲಿನಲ್ಲಿ ತೀರಿಕೊಂಡಿದ್ದ ಬಡ ಕೂಲಿ ಕಾರ್ಮಿಕ ಬಂಟುಲಾಲ್ ಬೆನ್ (43) ಎಂಬುವರ ಮೃತದೇಹದ ಅಂತ್ಯಕ್ರಿಯೆಯನ್ನು ನಗರದ ರೈಲ್ವೆ ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಎಂ. ನಾಗರಾಜು ನೆರವೇರಿಸಿದ್ದಾರೆ.

ನಾಗರಾಜು ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಹಿರಿಯ ಅಧಿಕಾರಿಗಳು, 'ಬಡ ಕೂಲಿ ಕಾರ್ಮಿಕನ ಅಂತ್ಯಕ್ರಿಯೆಯನ್ನು ಕುಟುಂಬದವರ ಸ್ಥಾನದಲ್ಲಿ ನಿಂತು ಗೌರವಯುತವಾಗಿ ನಡೆಸಿರುವ ನಾಗರಾಜು ಕೆಲಸ ಇತರರಿಗೆ ಮಾದರಿ' ಎಂದಿದ್ದಾರೆ.

ಮೃತದೇಹಕ್ಕೆ ಹೆಡ್ ಕಾನ್‌ಸ್ಟೆಬಲ್ ಎಂ. ನಾಗರಾಜು ಸೆಲ್ಯೂಟ್ ಮಾಡ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಕೋವಿಡ್ ಸಂದರ್ಭದಲ್ಲಿ ಗರ್ಭಿಣಿಯರ ಕಾಳಜಿ

ಪ್ರಸೂತಿ ತಜ್ಞೆ ಡಾ. ವಿದ್ಯಾ ವಿ. ಭಟ್
ಬೆಂಗಳೂರಿನ ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ
ಗರ್ಭಪಾತ, ಅವಧಿಪೂರ್ವ ಹೆರಿಗೆ, ಇದಕ್ಕೆ ಕಾರಣಗಳು ಹಾಗೂ ಪರಿಹಾರಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ
ನೀವೂ ಪ್ರಶ್ನೆಗಳನ್ನು ಕೇಳಬಹುದು
ಇಂದು ಬೆಳಿಗ್ಗೆ 11 ಗಂಟೆಗೆ

Council of Scientific and Industrial Research
NATIONAL AEROSPACE LABORATORIES
P.B. No. 1779, HAL Airport Road, Kodihalli, Bengaluru - 560 017, India. Ph: 080-25086046
ISO:9001:2008 Certified

NOTIFICATION

No.CSIR-NAL/GMA-7/2021/S-VI May 25, 2021

Refer to the tender of even number dated 10.05.2021 advertised for General Manpower Agreement for various Divisions of CSIR-NAL, Bengaluru. The last date for submission of quote is extended and the tender will be opened on 08.06.2021 at 11.00 A.M. For details, visit website www.nal.res.in.

Sd/-
Controller of Administration

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080-26961928 ಫ್ಯಾಕ್ಸ್-080-26961929

ಸಂಖ್ಯೆ: ರಾಗಾವಿ/ಪ್ರೊಕ್/ಎಲ್‌ಎಮ್‌ಎಸ್/149/2020-21 ದಿನಾಂಕ: 21.05.2021

ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು, ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಸರ್ಕಾರಿ ಕಾಲೇಜುಗಳಲ್ಲಿರುವ ವೈದ್ಯಕೀಯ, ದಂತ, ಆಯುಷ್, ಫಾರ್ಮಸಿ, ನರ್ಸಿಂಗ್, ಪಿಸಿಯೋಥೆರಪಿ ಮತ್ತು ಸಂಬಂಧಿತ ಆರೋಗ್ಯ ವಿಜ್ಞಾನ ಕೋರ್ಸ್‌ಗಳ ಎಲ್ಲಾ ಪದವಿಪೂರ್ವ ಮತ್ತು ಸ್ನಾತ್ತಕೋತರ ವಿದ್ಯಾರ್ಥಿಗಳಿಗೆ ಹಾಗೂ ಎನ್‌ಇಇಟಿ ಪೂರ್ವ ಪಿಜಿ ಪ್ರವೇಶ ಪರೀಕ್ಷೆ ಸಿದ್ಧತೆಯ ವೈದ್ಯಕೀಯ ಪದವಿಪೂರ್ವ ವಿದ್ಯಾರ್ಥಿಗಳಿಗೆ ಅಡ್ವಾನ್ಸಡ್ ಡಿಜಿಟಲೈಜಡ್ ಲರ್ನಿಂಗ್ ಮತ್ತು ಟೀಚಿಂಗ್ (ಎಲ್‌ಎಮ್‌ಎಸ್) ಗಾಗಿ ಸೇವೆಯನ್ನು ಒದಗಿಸಲು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	21.05.2021 ಸಂಜೆ 5:42 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	28.05.2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	08.06.2021 ಸಂಜೆ 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	10.06.2021 ಬೆಳಿಗ್ಗೆ 10:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	17.06.2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/-
ಕುಲಸಚಿವರು

ವಾ.ಸಾ.ಸಂ.ಇ/413/2021-22

ಕರ್ನಾಟಕ ಸರ್ಕಾರ
ಇ-ಆಡಳಿತ ಕೇಂದ್ರ
4ನೇ ಮಹಡಿ, ಆರವಿಂದ ಭವನ, ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು-560 001.
ದೂ: 080-22234115, 22230960, ಇ-ಮೇಲ್: pdeproc@karnataka.gov.in

ಸಂಖ್ಯೆ: ಸಿಇಜೆ-13011/21/2021-ಸಿಇಜಿ ಇ-ಪ್ರೊಕ್ ದಿನಾಂಕ: 24.05.2021

"RFP for Selection of an Accounting firm to manage e-Procurement Accounts for 2020-21"

ಸಿಇಜಿಯ RFP for Selection of an Accounting firm to manage e-Procurement Accounts for 2020-21 ಪ್ರಕಟಣೆಯನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದಾಗಿದೆ.

ಸಹಿ/- ಯೋಜನಾ ನಿರ್ದೇಶಕರು
ಇ-ಸಂಗ್ರಹಣಾ ಕೋಶ

DIPR/DDU/YC/419/2021-22

ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಪೊಲೀಸ್
(ISO 9001:2015 - ಪ್ರಮಾಣಿತ ನೇಮಕಾತಿ ಪ್ರಕ್ರಿಯೆ)

ಪೊಲೀಸ್ ಕಾನ್ಸ್‌ಟೇಬಲ್ (ನಾಗರಿಕ) (ಪುರುಷ ಮತ್ತು ಮಹಿಳಾ) (ಮಿಕ್ಕುಳಿದ) ಮತ್ತು ಕಲ್ಯಾಣ ಕರ್ನಾಟಕ (ಸ್ಥಳೀಯ) ವೃಂದದ ಹುದ್ದೆಗಳ ನೇರ ನೇಮಕಾತಿ

ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಮಿಕ್ಕುಳಿದ ಮತ್ತು ಸ್ಥಳೀಯ ವೃಂದಗಳ ಪೊಲೀಸ್ ಕಾನ್ಸ್‌ಟೇಬಲ್ (ನಾಗರಿಕ) (ಪುರುಷ ಮತ್ತು ಮಹಿಳಾ) ಒಟ್ಟು 3533 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಆನ್‌ಲೈನ್ (Online) ಮುಖಾಂತರ ಮಾತ್ರ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಖಾಲಿ ಹುದ್ದೆಗಳ ವರ್ಗೀಕರಣವನ್ನು ಹಾಗೂ ಅರ್ಹತಾ ಷರತ್ತುಗಳಿಗೆ ಅಧಿಕೃತ ವೆಬ್‌ಸೈಟ್ www.recruitment.ksp.gov.in ನಲ್ಲಿನ ಅಧಿಸೂಚನೆಯನ್ನು ಗಮನಿಸುವುದು.

ಅರ್ಜಿಗಳನ್ನು ಸಲ್ಲಿಸುವ ಅವಧಿ ಮತ್ತು ಶುಲ್ಕವನ್ನು ಪಾವತಿಸುವ ವಿವರಗಳು

- ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 25.05.2021 ಬೆಳಿಗ್ಗೆ 10.00 ಗಂಟೆಗೆ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.06.2021 ಸಂಜೆ 06.00 ಗಂಟೆಗೆ
- ಅಧಿಕೃತ ಬ್ಯಾಂಕ್ ಶಾಖೆಗಳ / ಅಂಚೆ ಕಛೇರಿಯ ಕಛೇರಿ ವೇಳೆಯಲ್ಲಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 28.06.2021

ಶುಲ್ಕ	ಸಾಮಾನ್ಯ ವರ್ಗ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	ರೂ. 400/-
	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಸೇರಿದ ಅಭ್ಯರ್ಥಿಗಳಿಗೆ	ರೂ. 200/-

ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಧಿಕೃತ ವೆಬ್‌ಸೈಟ್ www.recruitment.ksp.gov.in ನಲ್ಲಿ ನೀಡಲಾಗಿರುವ ಅಧಿಸೂಚನೆ, ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಳ್ಳಬೇಕು.

DIPR/DDU/ZEN/RO-417/ 2020-21

ಸಹಿ/-
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು-560 001.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ Government of Karnataka
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BELLARY
Reg. No: 205/1995-96-Recognized by Medical Council of India, New Delhi vide No: MCI-57(3)/79-Med/1912, Dtd, 16-04-1976
Director: 08392-242387, PA: 08392-235210, Fax : 08392-235202, Principal: 08392-235204
e-mail-ids: directorvimsbellary@gmail.com principalvimsbellary@gmail.com web: www.vimsbellary.org.in

ಸಂ. ವಿಮ್ಸ್/ಸಿಬ್ಬಂದಿ-2/186/2021-22 ದಿನಾಂಕ: 22-05-2021

ಕೋವಿಡ್ ಚಿಕಿತ್ಸೆಗಾಗಿ ತಾತ್ಕಾಲಿಕ ನೇಮಕಾತಿ ಪ್ರಕಟಣೆ

ಜಿಲ್ಲಾಡಳಿತ ಬಳ್ಳಾರಿ ಇವರ ವತಿಯಿಂದ ಸರ್ಕಾರದಿಂದ ಹುದ್ದೆಗಳು ಸೃಜನೆಯಾಗುವವರೆಗೆ ಡಿ.ಎಂ.ಎಫ್ ಯೋಜನೆಯ ನಿಧಿಯಿಂದ ಬಳ್ಳಾರಿಯ ವಿಮ್ಸ್ ಸಂಸ್ಥೆ ಅಧೀನದಲ್ಲಿರುವ ಕೋವಿಡ್-19 ಕೇಂದ್ರಗಳಲ್ಲಿ ರೋಗಿಗಳ ಚಿಕಿತ್ಸೆಗಾಗಿ ಶುಶ್ರೂಷಕ ಸಿಬ್ಬಂದಿಗಳನ್ನು ಸಂಚಿತ ವೇತನ ರೂ. 20,000/- + Risk allowance ರೂ. 5000/-ಗಳ ಆಧಾರದ ಮೇಲೆ 11 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಲು ನೇರ ಸಂದರ್ಶನ ಏರ್ಪಡಿಸಲಾಗಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಶೈಕ್ಷಣಿಕ ದಾಖಲಾತಿಗಳ ಮೂಲ ಪ್ರತಿ ಹಾಗು ಒಂದು ಜೆರಾಕ್ಸ್ ಪ್ರತಿಯೊಂದಿಗೆ ನೇರ ಸಂದರ್ಶನಕ್ಕೆ (Walk in interview) ಹಾಜರಾಗುವುದು.

ನೇರ ಸಂದರ್ಶನ ದಿನಾಂಕ: 28.05.2021 ರಂದು 11.00 ಗಂಟೆಗೆ
ಸಂದರ್ಶನ ನಡೆಯುವ ಸ್ಥಳ: ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಬಳ್ಳಾರಿ

ಕ್ರ ಸಂ.	ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವಯೋಮಿತಿ
1	ಶುಶ್ರೂಷಾಧಿಕಾರಿ	118	1) ಜಿ.ಎನ್.ಎಂ ಶುಶ್ರೂಷ ತರಬೇತಿ ಹೊಂದಿರತಕ್ಕದ್ದು. 2) ಬಿ.ಎಸ್.ಸಿ. ನರ್ಸಿಂಗ್ ಹೊಂದಿದ್ದಲ್ಲಿ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. ಹೆಚ್ಚಿನ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. ಐ.ಸಿ.ಯು & ಕ್ರಿಟಿಕಲ್ ಕೇರ್ ವಿಭಾಗದಲ್ಲಿ ಹಾಗು 500 ಹಾಸಿಗೆಗಳ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ ಆಧಾರದ ಮೇಲೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಪ್ರಕಾರ ನೀಡಲಾಗುವುದು.	1) ಪರಿಶಿಷ್ಟಜಾತಿ / ಪರಿಶಿಷ್ಟಪಂಗಡ / ಪ್ರವರ್ಗ-1-40 ವರ್ಷಗಳು 2) ಸಾಮಾನ್ಯ = 35 ವರ್ಷಗಳು

ನೇರ ಸಂದರ್ಶನಕ್ಕೆ (walk in interview) ಹಾಜರಾಗಲು ಅರ್ಜಿಯನ್ನು ವಿಮ್ಸ್ ಅಂತರ್ಜಾಲದಲ್ಲಿ www.vimsbellary.org.in ಮೂಲಕ ಡೌನ್ ಲೋಡ್ ಮಾಡಿಕೊಂಡು ಶೈಕ್ಷಣಿಕ ದಾಖಲಾತಿಗಳೊಂದಿಗೆ ಅಭ್ಯರ್ಥಿಯು ನೇರ ಸಂದರ್ಶನಕ್ಕೆ ಹಾಜರಾಗುವುದು.

ವಿಶೇಷ ಸೂಚನೆ : 1) ನೇಮಕಾತಿಯು ಸಂಚಿತ ವೇತನ ಆಧಾರದ ಮೇಲೆ ತಾತ್ಕಾಲಿಕವಾಗಿ ಇರುತ್ತದೆ. ಯಾವುದೇ ಖಾಯಂ ನೇಮಕಾತಿಗಾಗಿ ಪರಿಗಣಿಸಲಾಗುವುದಿಲ್ಲ ಹಾಗೂ ಹಕ್ಕನ್ನು ಚಲಾಯಿಸುವಂತಿಲ್ಲ.
2) ಸಂಚಿತ ವೇತನ ಆಧಾರದ ಅವಧಿಯು 11 ತಿಂಗಳಿಗೆ ಮಾತ್ರ ಇರುತ್ತದೆ.

ಸಹಿ/-
ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಪೊಲೀಸ್ ಇಲಾಖೆ,
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರವರ ಕಛೇರಿ,
ಪೊಲೀಸ್ ಗಣಕ ವಿಭಾಗ, 7ನೇ ಮಹಡಿ,
ಬಹುಮಹಡಿಗಳ ಕಟ್ಟಡ-1, ಡಾ.ಅಂಬೇಡ್ಕರ್ ವೀಧಿ,
ಬೆಂಗಳೂರು-560 001 ದೂರವಾಣಿ ಸಂಖ್ಯೆ:22943784
ಇ-ಮೇಲ್: adgppcw@ksp.gov.in
ಸಂಖ್ಯೆ:25/ಸಂಗ್ರಹ/ಎಡಿಜಿಪಿ/ಪಿಸಿಡಬ್ಲ್ಯೂ/21-22/ಕರೆ-2 ದಿನಾಂಕ:21.05.2021

ಇ-ಟೆಂಡರ್ ಪ್ರಕಟಣೆ

ರಾಜ್ಯ ದತ್ತಾಂಶ ಕೇಂದ್ರಕ್ಕೆ ಅವಶ್ಯಕತೆ ಇರುವ ಈ ಕೆಳಕಂಡ ಉಪಕರಣ ಸರಬರಾಜು ಮಾಡಿ ಅಳವಡಿಸುವ ಕುರಿತು ಕೆ.ಟಿ.ಪಿ.ಪಿ. ಕಾಯ್ದೆಯ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ-ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.
ಟೆಂಡರ್ ಸಂಖ್ಯೆ: 25/STS/ADGP/PCW/2021-22/Call-2. ಟೆಂಡರ್ ಸಂಕ್ಷಿಪ್ತ ವಿವರ: **Auto Main Change Over Panel.** ಸಂಖ್ಯೆ: 1. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: 07.06.2021, ಸಂಜೆ 5.30ಗಂಟೆಗೆ. ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ **Auto Main Change Over Panel** ಅನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ-ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಇ-ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ-1, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560 001 ಇಲ್ಲಿ ವ್ಯವಸ್ಥೆ ಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ: 080-25501216, 25201227ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ **https://eproc.karantaka.gov.in** ಅಥವಾ ಹೆಲ್ಪ್‌ಲೈನ್ 080-25501216, 25201227 ಗಳನ್ನು ಸಂಪರ್ಕಿಸತಕ್ಕದ್ದು. **ದಿನಾಂಕ:24.05.2021**ರಿಂದ ಟೆಂಡರ್ ದಾಖಲಾತಿಯು **https://eproc.karantaka.gov.in** ನಲ್ಲಿ ಲಭ್ಯವಿರುತ್ತದೆ. (1) ಟೆಂಡರ್ ಫಾರಂ ಡೌನ್‌ಲೋಡ್ ಮಾಡುವ ದಿನಾಂಕ ಹಾಗೂ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ:24.05.2021 ರಿಂದ 07.06.2021ರ 5.30 ಗಂಟೆವರೆಗೆ.** (2) ಇಎಂಡಿ: **ರೂ.28,000/-** (3) ಪ್ರೀ-ಬಿಡ್ ಸಭೆ: **29.05.2021 ರಂದು 11.30 ಗಂಟೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.06.2021ರಂದು 11.30 ಗಂಟೆಗೆ.** (5) ವಾಣಿಜ್ಯ ಬಿಡ್ ತೆರೆಯುವ ದಿನಾಂಕ:**14.06.2021ರಂದು ಮಧ್ಯಾಹ್ನ 12.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

ವಾಸಾಸಂಇ/ಆನಿ.ನ/ಎಂಸಿಎ/406/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃಹತ್ ನೀರು ಕಾಳುವೆ (ದಾಸರಹಳ್ಳಿ ವಲಯ),
ಬೃಬೆಂಮಪಾ 9ನೇ ಮಹಡಿ, ವ್ಯಾಪಾರ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು – 11.

ಸಂಖ್ಯೆ: ಕಾಪಾಅ/ಬೃನೀಕಾ/ದಾಹವ/ಟೆಂಡರ್/01/2021-22 ದಿನಾಂಕ: 24.05.2021

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಬಿ) ದ್ವಿಲಕೋಟೆ ಪದ್ಧತಿ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ (ದಾಸರಹಳ್ಳಿ ವಲಯ), ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ಸಮನಾಂತರವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಪ್ಯಾ.ಟೆಂ.ದಾ-ಕೆಡಬ್ಲ್ಯೂ-4)

ಕಾಮಗಾರಿಯ ಹೆಸರು	ಟೆಂಡರಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
ಸಿಎಮ್‌ಎನ್‌ಎನ್‌ವೈ ಯೋಜನೆಯಡಿ ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ-12, 14 & 39ರ ವಿವಿಧ ಪ್ರದೇಶದಲ್ಲಿ ಹರಡಿಕೊಂಡಿರುವ ದ್ವಿತೀಯ ಹಂತದ ಚರಂಡಿಗಳು, ಕಲ್ವರ್ಟ್ / ಸೇತುವೆಗಳ ನಿರ್ಮಾಣ / ಮರುರೂಪ ಹಾಗೂ ಬೃಹತ್ ನೀರು ಕಾಲುವೆಗಳ ಇತರೆ ಎಲ್ಲಾ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. ದಾಹವ ಪ್ಯಾಕೇಜ್-01/ 2021-22	860.38	ಇಎಂಡಿ ವಿನಾಯಿತಿಯನ್ನು ಅಂಗೀಕರಿಸಲು ಬಿಡ್ದರುಗಳು ಸರ್ಕಾರದ ಆದೇಶ ಸಂಖ್ಯೆ: ಎಇ-675, ವೆಚ್ಚ-12/2020, ಬೆಂಗಳೂರು ಇದರಂತೆ ದಿನಾಂಕ: 22.12.2020 ನಿಗದಿತ ನಮೂನೆಯಲ್ಲಿ ಸಹಿ ಮಾಡಿರುವ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 27.05.2021ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ವಿಚಾರಣೆ /ವಿವರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ 04.06.2021ರ ಸಂಜೆ 6:00 ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 04.06.2021ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2021ರ ಸಂಜೆ 4:00 ಗಂಟೆಗೆ. (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 18.06.2021ರ ಸಂಜೆ 4:30 ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್

ಮಕ್ಕಳಿಗೂ ಬಂತು ಟೆನ್‌ಶನ್!

ಲಾವಣ್ಯಗೌರಿ ವೆಂಕಟೇಶ್

ಮಕ್ಕಳು ಎಂದರೆ ಸಂತಸದ ಚಿಲುಮೆ! ಸಂತೋಷ ಎನ್ನುವುದಕ್ಕೆ ಅನ್ವರ್ಥನಾಮವೆಂದರೆ ಮಕ್ಕಳು. ಮಕ್ಕಳಂತೆ ಇದ್ದರೆ ಯಾವ ಚಿಂತೆಗಳೂ ಇರುವುದಿಲ್ಲ ಎನ್ನುವ ಕಾಲವೊಂದಿತ್ತು. ಮಕ್ಕಳು ಯಾವುದರ ಬಗ್ಗೆ ಚಿಂತಿಸಬೇಕು? ಕೆಲಸದ ಬಗ್ಗೆಯೇ? ಸಂಸಾರದ ತಾಪತ್ರಯಗಳ ಕುರಿತೇ? ಹಣದ ಬಗ್ಗೆಯೇ? ಇವ್ಯಾವುದರ ಗೊಡವೆ ಮಕ್ಕಳಿಗೆ ಇಲ್ಲವಾದ್ದರಿಂದ ಮಕ್ಕಳು ಚಿಂತೆಗಳಿಂದ ಮುಕ್ತರು. ಹೀಗಾಗಿ ಚಿಂತೆಯೇ ಇಲ್ಲದ ಕಾರಣ ಒತ್ತಡ ಅವರಿಗೆ ಇರುವುದಿಲ್ಲ ಎಂದೇ ಹೆಚ್ಚಿನ ಹಿರಿಯರು ಯೋಚಿಸುತ್ತಾರೆ. ಆದರೆ ಈಗಿನ ಮಕ್ಕಳು ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಅದರಲ್ಲೂ ಈ ಕೊರೊನಾಕಾಲದಲ್ಲಿ ಇದು ಹೆಚ್ಚಿದೆ ಎಂದೇ ಹೇಳಬೇಕು.

> ಮಕ್ಕಳು ಚಿಂತೆಗಳಿಂದ ಮುಕ್ತರು. ಹೀಗಾಗಿ ಚಿಂತೆಯೇ ಇಲ್ಲದ ಕಾರಣ ಒತ್ತಡ ಅವರಿಗೆ ಇರುವುದಿಲ್ಲ ಎಂದೇ ಹೆಚ್ಚಿನ ಹಿರಿಯರು ಯೋಚಿಸುತ್ತಾರೆ. ಆದರೆ ಈಗಿನ ಮಕ್ಕಳು ಒತ್ತಡದಿಂದ ಬಳಲುತ್ತಿದ್ದಾರೆ.

ಮಕ್ಕಳ ಒತ್ತಡದ ಜೀವನಕ್ಕೆ ಕಾರಣಗಳೇನು?

'ಇರುವೆಯ ಭಾರ ಇರುವೆಗೆ, ಆನೆಯ ಭಾರ ಆನೆಗೆ' ಎಂಬ ಮಾತಿನಂತೆ, ಅವರವರ ಚಿಂತೆಯ ಹೊರೆ ಹೊತ್ತವರಿಗಷ್ಟೇ ಗೊತ್ತು. ಒತ್ತಡವೆಂದರೆ ನಮಗಿಷ್ಟವಿಲ್ಲದ ಅಥವಾ ನಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಾದ ಕೋರಿಕೆಗಳನ್ನು ತನು-ಮನಗಳ ಮೇಲೆ ಹೇರಿದಾಗ ಉಂಟಾಗುವಂಥದ್ದು. ಇವು ಹೊರಗಿನಿಂದ ಬಂದವುಗಳಾಗಿರಬಹುದು; ಕೆಲವೊಂದು ಮನಸ್ಸಿನ ಒಳಗಿನಿಂದ ಉಂಟಾಗುವ ಒತ್ತಡಗಳು ಇವೆ. ಪ್ರಸ್ತುತ ಬಹಳಷ್ಟು ಮಕ್ಕಳ ಒತ್ತಡಕ್ಕೆ ಕಾರಣವಾಗಿರುವುದು ಇತ್ತೀಚೆಗೆ ಎಲ್ಲೆಡೆ ವ್ಯಾಪಿಸಿರುವ ಸರ್ವವ್ಯಾಪಿ ವ್ಯಾಧಿ ಕೊರೋನಾ ಎಂದರೆ ತಪ್ಪಾಗಲಾರದು. ಮಕ್ಕಳಿಗೆ ಶಾಲೆಯಿಲ್ಲ, ಮನೆಯಿಂದ ಹೊರಬರುವಂತಿಲ್ಲ. ಬಂದರೂ ಯಾರೊಡನೆಯೂ ಕೂಡಿ ಆಡುವಂತಿಲ್ಲ. ಹೀಗಾದಾಗ ಮಕ್ಕಳು ಖಿನ್ನತೆಗೂ ಒಳಗಾಗುತ್ತಾರೆ.

ಪೋಷಕರ ಬೇರ್ಪಡುವಿಕೆ, ಕಿಶೋರಾವಸ್ಥೆಯಲ್ಲಿ ಶೈಕ್ಷಣಿಕ ಹಾಗೂ ಸಾಮಾಜಿಕ ಒತ್ತಡಗಳು ಮಕ್ಕಳನ್ನು ಬಾಧಿಸುತ್ತವೆ. ಬಹಳಷ್ಟು ಮಕ್ಕಳು ಆಟೋಟಗಳಿಗೇ ಸಮಯವಿಲ್ಲದಂತೆ ಓದುತ್ತಾರೆ. ಓದಿನ ಜೊತೆಗೆ ಆಟವೂ ಇದ್ದರೆ ಮಾತ್ರ ಮಕ್ಕಳ ಮನಸ್ಸು ಹಾಗೂ ದೇಹ ಒತ್ತಡರಹಿತವಾಗಿರಲು ಸಾಧ್ಯ. ಇಂದು ಮಕ್ಕಳಿಗೆ ಶಾಲೆಯೂ ಇಲ್ಲ; ಸ್ನೇಹಿತರ ಸಂಪರ್ಕವೂ ಇಲ್ಲ; ಆಟ ಇರಲಿ, ಹೊರಗೆ ಹೋಗುವಂತೆಯೇ ಇಲ್ಲ. ಹೀಗಾಗಿ ಮಕ್ಕಳು ಸಹಜವಾಗಿ ಖಿನ್ನತೆಗೂ ಒಳಗಾಗಬಹುದಾದ ಅಪಾಯವಿದೆ.

ಮನೆಯಲ್ಲಿ ಮಕ್ಕಳ ಎದುರಿಗೆ ಹಿರಿಯರ ಜಗಳ, ಮಕ್ಕಳೆದುರಿಗೆ ಮನೆಯ ಸಮಸ್ಯೆಗಳ ಬಗ್ಗೆ ಚರ್ಚೆ – ಇಂತಹ ವಿಷಯಗಳು ಮಕ್ಕಳ ಒತ್ತಡವನ್ನು ಹೆಚ್ಚಿಸುತ್ತವೆ. ಬಹಳಷ್ಟು ಬಾರಿ ಮಕ್ಕಳು ಒತ್ತಡಕ್ಕೆ ಒಳಗಾಗಿದ್ದಾರೆ ಎಂದು ಕೂಡ ತಿಳಿದಿರುವುದಿಲ್ಲ. ಇದಕ್ಕಿಂತ ಪ್ರಮಾದ ಇನ್ನೊಂದಿಲ್ಲ.

ಹಾಗಾದರೆ ಮಕ್ಕಳು ಒತ್ತಡವನ್ನು ಅನುಭವಿಸುತ್ತಿದ್ದಾರೆ ಎಂದು ತಿಳಿಯುವುದು ಹೇಗೆ?

ಮಕ್ಕಳು ಒತ್ತಡದಲ್ಲಿದ್ದಾರೆಂದು ತಿಳಿಯುವುದು ಕಷ್ಟದ ಕೆಲಸ. ಮಕ್ಕಳ ನಡವಳಿಕೆಯಲ್ಲಿ ಬದಲಾವಣೆಗಳಾಗುತ್ತವೆ. ನಿದ್ದೆಯಲ್ಲಿ ವ್ಯತ್ಯಾಸವಾಗುತ್ತದೆ. ಮನಃಸ್ಥಿತಿ ಒಮ್ಮೆ ಇದ್ದಂತೆ ಇನ್ನೊಮ್ಮೆ ಇರುವುದಿಲ್ಲ. ಚಿಕ್ಕ ಮಕ್ಕಳು ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವುದು, ಹೊಟ್ಟೆನೋವು ಹಾಗೂ ತಲೆನೋವು ಎಂದು ದೂರುವುದು, ಹಟ ಮಾಡುವುದು, ಕಾರಣವಿಲ್ಲದೆ ಅಳುವುದು – ಇವು ಮಕ್ಕಳು ಒತ್ತಡಕ್ಕೊಳಗಾದಾಗ ಕಾಣುವು ಕೆಲವು ಲಕ್ಷಣಗಳು. ಹದಿಹರೆಯದ ಮಕ್ಕಳು ಕೆಲವೊಂದು ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಾರೆ. ಉಗುರು ಕಚ್ಚುವುದು, ಸುಳ್ಳು ಹೇಳುವುದು, ಬೇರೆ ಮಕ್ಕಳನ್ನು ಕಾಡಿಸುವುದು, ಸಿಡಿಮಿಡಿಗೊಳ್ಳುವುದು, ಹೀಗೆ ಒತ್ತಡ ಹೆಚ್ಚಾದಾಗ ಮಕ್ಕಳು ತಮ್ಮ ಇರುವಿಕೆಗಿಂತ ಭಿನ್ನವಾಗಿ ವರ್ತಿಸುತ್ತಾರೆ.

ಇದಕ್ಕೆ ಪರಿಹಾರವಿದೆಯೇ? ಖಂಡಿತ ಇದೆ.

- ವಿಶ್ರಾಂತಿ ಹಾಗೂ ಪೌಷ್ಟಿಕವಾದ ಆಹಾರವು ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
- ಪೋಷಕರು ದಿನದ ಸ್ವಲ್ಪ ಸಮಯವಾದರೂ ಮಕ್ಕಳೊಂದಿಗೆ ಕಳೆಯಬೇಕು.
- ಮಕ್ಕಳನ್ನು ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡಬಾರದು.
- ಮಕ್ಕಳೊಂದಿಗೆ ಅವರ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಬೇಕು. ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವಂಥ ಘಟನೆಗಳನ್ನು ಹೇಳಬೇಕು. ಪಾಲಕ-ಪೋಷಕರು ಅವರಿಗೆ ಸ್ಫೂರ್ತಿಯಾಗುವಂತೆ ನಡೆದುಕೊಳ್ಳಬೇಕು.
- ಓದು, ಅಂಕಗಳು, ಮೊದಲ ದರ್ಜೆ – ಎಂದು ಸದಾ ಮಕ್ಕಳ ಮೇಲೆ ಒತ್ತಡವನ್ನು ಹೇರಬಾರದು. ಇಂದಿನ ಮಕ್ಕಳ ಒತ್ತಡದ ಜೀವನಕ್ಕೆ ಇವುಗಳೇ ಮೂಲಕಾರಣಗಳು.
- ಮಕ್ಕಳಿಗೆ ಬೇರೆ ಬೇರೆ ಕ್ಷೇತ್ರದ ಸಾಧಕರ ಆತ್ಮಕಥೆಯನ್ನು, ಸ್ಫೂರ್ತಿದಾಯಕ ಕಥೆಗಳನ್ನು ಓದಲು ಪ್ರೇರೇಪಿಸಬೇಕು.
- ಪ್ರತಿಯೊಂದು ಮಗುವಿಗೂ ಯಾವುದಾದರೊಂದು ವಿಷಯದಲ್ಲಿ ಮೇಲುಗೈ ಸಾಧಿಸುವ ಸಾಮರ್ಥ್ಯ ಇದ್ದೇ ಇರುತ್ತದೆ. ಯಾವ ಮಕ್ಕಳೂ ದಡ್ಡರಲ್ಲ! ಮಕ್ಕಳ ಆಸಕ್ತಿಯನ್ನೂ ಶಕ್ತಿಯನ್ನೂ ಗಮನಿಸಿ, ಅದಕ್ಕೆ ತಕ್ಕಂತೆ ವ್ಯಕ್ತಿತ್ವವನ್ನೂ ಸಾಧನೆಯನ್ನೂ ರೂಢಿಸಿಕೊಳ್ಳಲು ನೆರವಾಗಬೇಕು.
- ಇಂದು ಎದುರಾಗಿರುವ ಪರಿಸ್ಥಿತಿ ಶಾಶ್ವತವಲ್ಲ; ಇದು ಸದ್ಯದಲ್ಲಿಯೇ ನಿವಾರಣೆಯಾಗುತ್ತದೆ. ಮತ್ತೆ ಒಳ್ಳೆಯ ದಿನಗಳು ಬರುತ್ತವೆ; ಮೊದಲಿನಂತೆಯೇ ಶಾಲೆ, ಆಟ, ಸ್ನೇಹಿತರು – ಎಲ್ಲವೂ ಮುಂದುವರೆಯುತ್ತದೆ ಎಂಬ ವಿಶ್ವಾಸವನ್ನೂ ಧೈರ್ಯವನ್ನೂ ಮಕ್ಕಳಲ್ಲಿ ಮೂಡಿಸಬೇಕು.
- ಈಗ ಸಿಕ್ಕಿರುವ ಬಿಡುವಿನ ವೇಳೆಯನ್ನು ಮಕ್ಕಳೊಂದಿಗೆ ಸರಿಯಾಗಿ ವಿನಿಯೋಗವಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಹಿರಿಯರ ಮೇಲಿದೆ.

ಪ್ರೋನಿಂಗ್: ಉಸಿರಾಟದ ಸಮಸ್ಯೆಗೆ ಪರಿಹಾರ

ಪ್ರವೀಣ ಎಸ್. ಮುಗನೂರ

ಕೋವಿಡ್‌ನಿಂದ ಎದುರಾಗುವ ಸಮಸ್ಯೆಗಳಲ್ಲಿ ಪ್ರಮುಖವಾದದ್ದು ಉಸಿರಾಟದ ಸಮಸ್ಯೆ. ಪ್ರೋನಿಂಗ್ ವಿಧಾನ ಉಸಿರಾಟದ ತೊಂದರೆಯನ್ನು ನಿವಾರಿಸುತ್ತದೆ – ಎಂದು ಭಾರತ ಸರ್ಕಾರದ ಆರೋಗ್ಯ ಸಚಿವಾಲಯವೇ ಖಚಿತಪಡಿಸಿದೆ.

ಪ್ರೋನಿಂಗ್ ಎಂದರೆ ಏನು?

ಪ್ರೋನಿಂಗ್ ಎನ್ನುವುದು ಉದರ ಭಾಗದ ಮೇಲೆ ಮಲಗಿ ವಿಶ್ರಾಂತಿ ಮಾಡುವ ಒಂದು ವಿಧಾನ ಹಾಗೂ ಆಮ್ಲಜನಕವನ್ನು (ಉಸಿರಾಟ) ಸುಧಾರಿಸಲು ವೈದ್ಯರು ಹಾಗೂ ವಿಜ್ಞಾನಿಗಳಿಂದ ಅಂಗೀಕರಿಸಲ್ಪಟ್ಟ ಒಂದು ಭಂಗಿ. ಇದು ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿರುವ ಚಿಕಿತ್ಸಾ ಪದ್ಧತಿ. ಇದರಿಂದ ಆಮ್ಲಜನಕದ ಮಟ್ಟವನ್ನು ಸುಧಾರಿಸಬಹುದು. ಇದನ್ನು ತೀವ್ರ ಉಸಿರಾಟದ ವೈಫಲ್ಯದ ರೋಗಿಗಳ ಮೇಲೆ ಬಳಸಲಾಗುತ್ತದೆ. ಆಮ್ಲಜನಕದ ಮಟ್ಟವನ್ನು ಸುಧಾರಿಸಲು ಇದು ಸರಳ ಮತ್ತು ಸುರಕ್ಷಿತ ವಿಧಾನ. ಉಸಿರಾಟದ ತೊಂದರೆ ಇರುವ ಕೋವಿಡ್-19 ಸೋಂಕಿತ ವ್ಯಕ್ತಿಗಳಲ್ಲಿಯೂ ಇದು ಉಪಯುಕ್ತ.

ಭಾರತ ಮತ್ತು ವಿದೇಶಗಳ ವೈದ್ಯರು ತಮ್ಮ ಕೋವಿಡ್-19 ಚಿಕಿತ್ಸೆಯ ಪ್ರೋಟೋಕಾಲ್‌ನ ನಿಯಮಿತ ಭಾಗವಾಗಿ ಪ್ರೋನಿಂಗ್ ಅನ್ನು ಸೇರಿಸಿ, ಸೋಂಕಿತ ವ್ಯಕ್ತಿಗಳಿಗೆ ಇದರ ಅಭ್ಯಾಸವನ್ನು ಮಾಡಿಸುತ್ತಿದ್ದಾರೆ. ಈ ಚಿಕಿತ್ಸೆಯಲ್ಲಿ ಬರುವ ವಿವಿಧ ಭಂಗಿಗಳು ಯೋಗಾಸದ ಭಂಗಿಗಳೇ ಆಗಿವೆ (ಮಕರಾಸನ, ಸರಳ ಅನಂತಶಯನಾಸನ, ಬಾಲಾಸನ ಮತ್ತು ದಂಡಾಸನದ ವಿಶ್ರಾಂತಿಸ್ಥಿತಿ). ಇವುಗಳ ಅಭ್ಯಾಸದಿಂದ ದೇಹಕ್ಕೆ ಸಂಪೂರ್ಣ ವಿಶ್ರಾಂತಿಯೊಂದಿಗೆ ಆಮ್ಲಜನಕದ ಪ್ರಮಾಣವೂ ಹೆಚ್ಚಾಗಿ ದೊರೆಯುತ್ತದೆ.

ಪ್ರೋನಿಂಗ್ ಮಾಡುವ ವಿಧಾನ

1. ಮೊದಲನೆಯ ವಿಧಾನ

ಉದರಭಾಗದ ಮೇಲೆ ಮಲಗುವುದು: ಈ ಸ್ಥಿತಿಯಲ್ಲಿ ನೆಲದ ಮೇಲೆ, ಹೊಟ್ಟೆಯ ಮೇಲೆ ಮಲಗಬೇಕು; ಕಾಲುಗಳು ಎರಡೂ ಪರಸ್ಪರ ತಾಗಿರಲಿ ಅಥವಾ ಕಾಲುಗಳ ಮಧ್ಯೆ ಅಂತರ ಇರಲಿ ಹಾಗೂ ಕೈಗಳೆರಡು ದೇಹದ ಪಕ್ಕದಲ್ಲಿ ಇರಲಿ. ಸರಳವಾಗಿ ಹಾಗೂ ಸಹಜವಾಗಿ ಉಸಿರಾಡುವುದು. ಈ ಭಂಗಿಯಲ್ಲಿ ಮೂವತ್ತು ನಿಮಿಷದಿಂದ ಎರಡು ಗಂಟೆಗಳವರೆಗೆ ಹೊಟ್ಟೆಯ ಮೇಲೆ ಮಲಗಿ ಉಸಿರಾಟ ಕ್ರಿಯೆ ಮಾಡಬಹುದು.

2. ಎರಡನೆಯ ವಿಧಾನ



ಬಲಭಾಗದ ಕಡೆಗೆ ತಿರುಗಿ ಮಲಗಿ, ಬಲಗೈಯನ್ನು ತಲೆಯ ಕೆಳಭಾಗದಲ್ಲಿ ಇರಿಸಿ ಎಡಗೈ ಹಸ್ತ ಎದೆಯ ಗೂಡಿನ ಪಕ್ಕದಲ್ಲಿ ಅಥವಾ ಎಡಗಾಲಿನ ತೊಡೆಯ ಮೇಲೆ ಇರಿಸಿ, ವಿಶ್ರಾಂತಿ ಮಾಡುತ್ತ ಸರಳ ಹಾಗೂ ಸಹಜವಾಗಿ ಉಸಿರಾಡುವುದು.

ಎಡಭಾಗದ ಕಡೆಗೆ ತಿರುಗಿ ಮಲಗಿ, ಎಡಗೈಯನ್ನು ತಲೆಯ ಕೆಳಭಾಗದಲ್ಲಿ ಇರಿಸಿ ಬಲಗೈ ಹಸ್ತವನ್ನು ಎದೆಯ ಗೂಡಿನ ಪಕ್ಕದಲ್ಲಿ ಅಥವಾ ಬಲಗಾಲಿನ ತೊಡೆಯ ಮೇಲೆ ಇರಿಸಿ ವಿಶ್ರಾಂತಿ ಮಾಡುತ್ತ ಸರಳ ಹಾಗೂ ಸಹಜವಾಗಿ ಉಸಿರಾಡುವುದು. ಈ ಭಂಗಿಯಲ್ಲಿ ಮೂವತ್ತು ನಿಮಿಷದಿಂದ ಎರಡು ಗಂಟೆಗಳವರೆಗೆ ಎಡಭಾಗದ ಮೇಲೆ ಮಲಗಿ ಉಸಿರಾಟಕ್ರಿಯೆಯನ್ನು ಮಾಡಬಹುದು.

3. ಮೂರನೆಯ ವಿಧಾನ

ಸರಳ ದಂಡಾಸನ (ವಿಶಾಲಕೋನದಲ್ಲಿ) ಕುಳಿತು ಸರಳ ಹಾಗೂ ಸಹಜವಾಗಿ ಉಸಿರಾಡುವುದು. ಹೀಗೆ ಮೂವತ್ತು ನಿಮಿಷದಿಂದ ಎರಡು ಗಂಟೆಗಳವರೆಗೆ ಇದೇ ಭಂಗಿಯಲ್ಲಿ ಕುಳಿತುಕೊಳ್ಳುವುದು.

4. ನಾಲ್ಕನೆಯ ವಿಧಾನ

5. ಐದನೆಯ ವಿಧಾನ

ಈ ಸ್ಥಿತಿಯಲ್ಲಿ ಮೊದಲನೆಯ ಭಂಗಿಗೆ ಮರಳಿ ಮೊದಲಿನಂತೆಯೇ ಅಭ್ಯಾಸ ಮಾಡುವುದು.

ಪ್ರೋನಿಂಗ್ ಮಹತ್ವ

- ಬೋರಲಾಗಿ ಮಲಗುವ ವಿಧಾನವನ್ನು ಅನುಸರಿಸುವುದರಿಂದ ಉಸಿರಾಟ ಸುಗಮವಾಗಲು, ಶ್ವಾಸಕೋಶಕ್ಕೆ ಗಾಳಿಯ ಸಂಚಾರ ಸುಲಭವಾಗಿ ದೊರೆಯಲು ನೆರವಾಗುತ್ತದೆ.
- ಎದೆ ಮತ್ತು ಹೊಟ್ಟೆ ಬೋರಲು ಮಾಡಿ ಅಥವಾ ಬದಿಗಳಲ್ಲಿ ಮಲಗುವುದರಿಂದ ದೇಹವು ಶ್ವಾಸಕೋಶ ಎಲ್ಲಾ ಪ್ರದೇಶಗಳಿಗೆ ಹೆಚ್ಚಿನ ಗಾಳಿಯನ್ನು ಪಡೆಯಲು ಸಹಾಯಕವಾಗುತ್ತದೆ.
- ತೀವ್ರವಾದ ಉಸಿರಾಟದ ಕಾಯಿಲೆ ಸಿಂಡ್ರೋಮ್ (ಎಆರ್‌ಡಿಎಸ್) ಇರುವವರಿಗೆ ಇದು ಪ್ರಯೋಜನಕಾರಿ.
- ಪ್ರೋನಿಂಗ್ ಆಮ್ಲಜನಕೀಕರಣವನ್ನು ಸುಧಾರಿಸುತ್ತದೆ; ಶ್ವಾಸಕೋಶದ ಪ್ರಮಾಣವನ್ನು ಹೆಚ್ಚಿಸುತ್ತದೆ.
- ಸೋಂಕಿತರು ಉಸಿರಾಡಲು ಕಷ್ಟಪಡುತ್ತಿದ್ದರೆ ಮತ್ತು ಅವರ ದೇಹದ ಆಮ್ಲಜನಕದ ಪ್ರಮಾಣ ಶೇ. 94ಕ್ಕಿಂತ ಕಡಿಮೆ ಇದ್ದರೆ ಈ ವಿಧಾನ ಅನುಸರಿಸಬೇಕು.
- ಇದನ್ನು ಉತ್ತಮ ಗಾಳಿ ಇರುವ ವಾತಾವರಣದಲ್ಲಿ ಅಭ್ಯಾಸ ಮಾಡುವುದರಿಂದ ಆಮ್ಲಜನಕದ ಪ್ರಮಾಣ ಹೆಚ್ಚುತ್ತದೆ.

ಪ್ರೋನಿಂಗ್ ಅನ್ನು ದಿಂಬಿನ ಸಹಾಯದಿಂದ ಕೂಡ ಮಾಡಬಹುದು. ಒಂದು ದಿಂಬನ್ನು ಕತ್ತಿನ ಕೆಳಭಾಗದಲ್ಲಿ ಇರಿಸಬೇಕು. ಒಂದು ಅಥವಾ ಎರಡು ದಿಂಬುಗಳನ್ನು ಎದೆಯಿಂದ ಕೆಳಭಾಗದಲ್ಲಿ, ತೊಡೆಯಿಂದ ಮೇಲ್ಭಾಗದಲ್ಲಿ ಇರಿಸುವುದು.

- ಸ್ವಯಂ ಪ್ರೋನಿಂಗ್
  ನಾಲ್ಕರಿಂದ ಐದು ದಿಂಬುಗಳನ್ನು ಬಳಸಿಕೊಳ್ಳಿ. ಮಲಗುವ ವಿಧಾನವನ್ನು ಆಗಾಗ ಬದಲಾಯಿಸುತ್ತಾ ಇರಿ. ಪ್ರತಿಯೊಂದು ಭಂಗಿಯಲ್ಲಿ ಸುಮಾರು ಮೂವತ್ತು ನಿಮಿಷ ಮಲಗಿ.

ಮುನ್ನೆಚ್ಚರಿಕೆಗಳು

ಊಟವಾದ ಒಂದು ಗಂಟೆಯವರೆಗೆ ಪ್ರೋನಿಂಗ್ ಮಾಡಬೇಡಿ. ಸಹಜವಾಗಿ ನಿಮಗೆ ಎಷ್ಟು ಹೊತ್ತು ಹಾಗೆ ಮಲಗಲು ಸಾಧ್ಯವಿದೆಯೋ ಅಷ್ಟೇ ಹೊತ್ತು ಮಾಡಿ; ಬಲವಂತವಾಗಿ ಹೆಚ್ಚು ಹೊತ್ತು ಮಾಡಬಾರದು. ಗಾಯಗಳು, ಹುಣ್ಣುಗಳು ಮತ್ತು ಎಲುಬಿನ ಮೇಲೆ ಗಮನವಿರಲಿ.

ಯಾರೆಲ್ಲ ಮಾಡಬಾರದು?

ಗರ್ಭಿಣಿಯರು, ರಕ್ತಹೆಪ್ಪುಗಟ್ಟುವಿಕೆಯಂಥ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆದವರು, ಹೃದಯದ ಸಮಸ್ಯೆ ಇರುವವರು, ಬೆನ್ನುಮೂಳೆಯ ಸಮಸ್ಯೆ ಇರುವವರು, ಮೂಳೆಮುರಿತ, ಬಿರುಕು ಸಮಸ್ಯೆಗೆ ಒಳಗಾಗಿರುವವರು ಇದನ್ನು ಮಾಡಬಾರದು. ತಜ್ಞರ ಸಲಹೆಯನ್ನು ಪಡೆಯುವುದು ಒಳಿತು.

ನಿರೂಪಣೆ: ಅವಿನಾಶ ಎಸ್. ಬೋರಂಚಿ
(ಲೇಖಕ ಯೋಗಶಿಕ್ಷಕ)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ರಚನೆಗಳು

ಎಸ್ಸೆಸ್ಸೆಲ್ಸಿ

ಗಣಿತ

ಒಂದು ರೇಖಾಖಂಡವನ್ನು ವಿಭಾಗಿಸುವುದು

ಒಂದು ರೇಖಾಖಂಡವನ್ನು ನೀಡಲಾಗಿದೆ ಮತ್ತು ನೀವು ಇದನ್ನು ದತ್ತ ಅನುಪಾತ 3:2 ರಲ್ಲಿ ವಿಭಾಗಿಸಬೇಕಿದೆ. ಈ ರೇಖಾಖಂಡದ ಉದ್ದವನ್ನು ಅಳೆದು, ನಂತರ ಇದರ ಮೇಲೆ ದತ್ತ ಅನುಪಾತದಲ್ಲಿರುವಂತೆ ಒಂದು ಬಿಂದುವನ್ನು ಗುರುತಿಸಿ ನೀವು ಅದನ್ನು ವಿಭಾಗಿಸಬಹುದು. ಆದರೆ ಒಂದು ವೇಳೆ ನಿಮಗೆ ನಿಖರವಾಗಿ ಯಾವುದೇ ರೀತಿಯಲ್ಲಿ ರೇಖಾಖಂಡವನ್ನು ಅಳೆಯಲಾಗದಿದ್ದರೆ, ಈ ವಿಭಾಗಿಸುವ ಬಿಂದುವನ್ನು ನೀವು ಹೇಗೆ ಗುರುತಿಸುವಿರಿ? ಅಂತಹ ಬಿಂದುವನ್ನು ಗುರುತಿಸಲು ನಾವು ಈ ಕೆಳಗೆ ಎರಡು ವಿಧಾನಗಳನ್ನು ನೀಡಿದ್ದೇವೆ.

ರಚನೆ: 6.1 ಒಂದು ರೇಖಾಖಂಡವನ್ನು ದತ್ತ ಅನುಪಾತದಲ್ಲಿ ವಿಭಾಗಿಸಬಹುದು.

AB ರೇಖಾಖಂಡವನ್ನು ನೀಡಲಾಗಿದೆ. ಇದನ್ನು ನಾವು m:n ಅನುಪಾತದಲ್ಲಿ ವಿಭಾಗಿಸಬೇಕಿದೆ. ಇಲ್ಲಿ m ಮತ್ತು n ಗಳೆರಡೂ ಪೂರ್ಣಾಂಕಗಳಾಗಿವೆ. ಇದನ್ನು ಅರ್ಥೈಸಲು ನಿಮಗೆ ಸಹಾಯವಾಗುವಂತೆ ನಾವು m = 3 ಮತ್ತು n = 2 ಎಂದು ತೆಗೆದುಕೊಳ್ಳೋಣ.



ರಚನಾ ಹಂತಗಳು

1. AB ಯೊಂದಿಗೆ ಲಘುಕೋನ ಏರ್ಪಡುವಂತೆ ಒಂದು ಕಿರಣ AX ಎಳೆಯಿರಿ.
2. $AA_1 = A_1A_2 = A_3A_4 = A_4A_5$ ಆಗುವಂತೆ AX ನ ಮೇಲೆ $A_1, A_2, A_3, A4$ ಮತ್ತು A_5 ಎಂಬ 5 (= m + n) ಬಿಂದುಗಳನ್ನು ಗುರುತಿಸಿ.
3. B, A_5 ಸೇರಿಸಿ.
4. AB ಯನ್ನು C ಬಿಂದುವಿನಲ್ಲಿ ಛೇದಿಸುವಂತೆ A3 ಯಲ್ಲಿಗೆ ಸಮನಾಗಿರುವ ಕೋನವನ್ನು ರಚಿಸುವುದರಿಂದ A5B ಗೆ ಸಮಾಂತರವಾಗಿರುವ ಒಂದು ರೇಖೆಯನ್ನು ಎಳೆಯಿರಿ. (ಚಿತ್ರ 6.1 ನೋಡಿ) ಈಗ AC:CB = 3:2 ಆಗಿರುತ್ತದೆ.

ಈ ವಿಧಾನದಿಂದ ನಮಗೆ ಅಪೇಕ್ಷಿತ ವಿಭಜನೆಯು ಹೇಗೆ ದೊರೆಯಿತು ಎಂಬುದನ್ನು ನೋಡೋಣ.

ಈಗ, $A_3C \parallel A_5B$

$$\therefore \frac{AA_3}{A_3A_5} = \frac{AC}{CB}$$ (ಮೂಲ ಸಮಾನುಪಾತತೆಯ ಪ್ರಮೇಯದಿಂದ)

ರಚನೆಯಿಂದ, $\frac{AA_3}{A_3A_5} = \frac{3}{2}$

$$\therefore \frac{AC}{CB} = \frac{3}{2}$$ (ಸ್ವಯಂ ಸಿದ್ಧ)

C ಯು AB ಯನ್ನು 3:2 ಅನುಪಾತದಲ್ಲಿ ವಿಭಾಗಿಸುತ್ತದೆ ಎಂಬುದನ್ನು ಇದು ತೋರಿಸುತ್ತದೆ.

ರಚನೆ: 6.2: ತ್ರಿಭುಜ ಮತ್ತು ಅನುಪಾತಾಂಕ (Scale-factor) ವನ್ನು ನೀಡಿದ್ದಾಗ, ಸಮರೂಪ ತ್ರಿಭುಜವನ್ನು ರಚಿಸುವುದು.

ಈ ರಚನೆಯು ಎರಡು ವಿವಿಧ ಸನ್ನಿವೇಶಗಳನ್ನು ಒಳಗೊಂಡಿದೆ. ಒಂದರಲ್ಲಿ ದತ್ತ ತ್ರಿಭುಜಕ್ಕಿಂತ ಚಿಕ್ಕದಾದ ತ್ರಿಭುಜವನ್ನು ಮತ್ತು ಇನ್ನೊಂದರಲ್ಲಿ ದೊಡ್ಡದಾದ ತ್ರಿಭುಜವನ್ನು ರಚಿಸುವುದು. ಇಲ್ಲಿ ಅನುಪಾತಾಂಕವೆಂದರೆ ರಚಿಸಬೇಕಾದ ತ್ರಿಭುಜದ ಬಾಹುಗಳು ಮತ್ತು ದತ್ತ ತ್ರಿಭುಜದ ಅನುರೂಪ ಬಾಹುಗಳ ಅನುಪಾತವಾಗಿರುತ್ತದೆ.

ಈ ರಚನೆಗಳನ್ನು ಅರ್ಥೈಸಲು ಕೆಳಗಿನ ಉದಾಹರಣೆಗಳನ್ನು ತೆಗೆದುಕೊಳ್ಳೋಣ. ಸಾಮಾನ್ಯ ಪ್ರಕರಣಕ್ಕೆ ಸಹ ಇದೇ ರೀತಿಯ ವಿಧಾನಗಳನ್ನು ಅನ್ವಯಿಸಲಾಗುತ್ತದೆ.

ಉದಾಹರಣೆ 1 : ದತ್ತ ತ್ರಿಭುಜ ABC ಗೆ ಸಮರೂಪವಾಗಿರುವ ಮತ್ತೊಂದು ತ್ರಿಭುಜವನ್ನು ಅದರ ಪ್ರತಿಯೊಂದು ಬಾಹುವು ತ್ರಿಭುಜ ABC ಯ ಅನುರೂಪ ಬಾಹುಗಳ 3/4 ರಷ್ಟಕ್ಕೆ ಸಮನಾಗಿರುವಂತೆ ರಚಿಸಿ (ಅಂದರೆ ಅನುಪಾತಾಂಕ 3/4 ಇರುವಂತೆ)

ಪರಿಹಾರ: ABC ಯು ದತ್ತ ತ್ರಿಭುಜವಾಗಿದೆ. ಈಗ ನಾವು ಮತ್ತೊಂದು ತ್ರಿಭುಜವನ್ನು ಅದರ ಪ್ರತಿಯೊಂದು ಬಾಹುವು ತ್ರಿಭುಜ

ಸುಭಾಷಿತ

ಶ್ರೇಯಸ್ಕರವಲ್ಲದ ಲೌಕಿಕ ಯಶಸ್ಸು ಉಡುಗೊರೆಯ ವರ್ಣಾಕರ್ಷಕ ಕಾಗದದಂತೆ ಅಲ್ಪಾಯುಷಿ.
-ಕೆ.ಎಸ್.ನಿಸಾರ್ ಅಹಮದ್

ಕಪ್ಪು ಶಿಲೀಂಧ್ರದ ಕಾಟ: ಔಷಧ ಕೊರತೆಯನ್ನು ತಕ್ಷಣ ನೀಗಿಸಿ

ಕೋವಿಡ್ ಎರಡನೇ ಅಲೆಯ ಹೊಡೆತಕ್ಕೆ ದೇಶದ ಜನ ತತ್ತರಿಸಿಹೋಗಿದ್ದಾರೆ. ಒಂದೆಡೆ ಸಾಲು ಸಾಲು ಸಾವುಗಳಾದರೆ, ಇನ್ನೊಂದೆಡೆ ಚಿಕಿತ್ಸೆ ಪಡೆದು ಗುಣಮುಖರಾದ ಕೆಲವರಲ್ಲಿ ಇದೀಗ ಕಪ್ಪು ಶಿಲೀಂಧ್ರದ ಕಾಟ ಕಾಣಿಸಿಕೊಂಡು ದುಗುಡವನ್ನು ಮತ್ತಷ್ಟು ಹೆಚ್ಚಿಸಿದೆ. ರಾಜ್ಯದಲ್ಲಿ ಈಗಾಗಲೇ 300ಕ್ಕೂ ಅಧಿಕ ಮಂದಿಯಲ್ಲಿ ಇದು ಕಾಯಿಲೆ ಸ್ವರೂಪ ಪಡೆದಿದ್ದು, 20ಕ್ಕೂ ಅಧಿಕ ಮಂದಿ ಇದರಿಂದ ಮೃತಪಟ್ಟಿದ್ದಾರೆ. ಇದಕ್ಕೆ ಚಿಕಿತ್ಸೆಯೂ ಬಲು ದುಬಾರಿ. ಬಡವರ ಕೈಗೆಟುಕುವಂಥದ್ದಲ್ಲ. ಕಾಯಿಲೆಪೀಡಿತರಿಗೆ ಉಚಿತವಾಗಿ ಚಿಕಿತ್ಸೆ ನೀಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿರುವುದು ಸ್ವಾಗತಾರ್ಹ. ಕಪ್ಪು ಶಿಲೀಂಧ್ರ ಪತ್ತೆಯಾದವರ ಚಿಕಿತ್ಸೆಗೆ ವಿವಿಧ ಆಸ್ಪತ್ರೆಗಳಲ್ಲಿ ಕಾಯ್ದಿರಿಸಿದ ಹಾಸಿಗೆಗಳು ಕೆಲವೇ ದಿನಗಳಲ್ಲಿ ಭರ್ತಿಯಾಗಿವೆ. ದಿನದಿಂದ ದಿನಕ್ಕೆ ಹೇಗೆ ಹೆಚ್ಚಿನ ಜನರನ್ನು ಇದು ಬಾಧಿಸುತ್ತಿದೆ ಎನ್ನುವುದಕ್ಕೆ ಈ ಮಾಹಿತಿಯೇ ಸಾಕ್ಷ್ಯ ಒದಗಿಸುತ್ತದೆ. ಗ್ರಾಮೀಣ ಪ್ರದೇಶಗಳ ಜನರಲ್ಲಿ ಕಪ್ಪು ಶಿಲೀಂಧ್ರ ಕಾಣಿಸಿಕೊಂಡರೆ ಚಿಕಿತ್ಸೆಗೆ ಸ್ಥಳೀಯ ಮಟ್ಟದಲ್ಲಿ ವ್ಯವಸ್ಥೆಯೇ ಇಲ್ಲ. ಚಿಕಿತ್ಸೆಗಾಗಿ ನೂರಾರು ಕಿ.ಮೀ. ದೂರದ ಆಸ್ಪತ್ರೆಗಳನ್ನು ಆಶ್ರಯಿಸಬೇಕಾಗಿದೆ. ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರವೇ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು. ಕಪ್ಪು ಶಿಲೀಂಧ್ರದಿಂದ ಬರುವ ಕಾಯಿಲೆಯ ಚಿಕಿತ್ಸೆಗೆ ಬಳಸುವ ಆ್ಯಂಫೊಟೆರಿಸಿನ್-ಬಿ ಔಷಧದ ಕೊರತೆಯೂ ರೋಗಿಗಳನ್ನು ಕಂಗಾಲಾಗಿಸಿದೆ. ಈ ಔಷಧವನ್ನು ತರಿಸಿಕೊಟ್ಟರೆ ಮಾತ್ರ ಚಿಕಿತ್ಸೆ ಮುಂದುವರಿಸಬಹುದು ಎಂದು ಕೆಲವು ವೈದ್ಯರು ಅಸಹಾಯಕತೆ ವ್ಯಕ್ತಪಡಿಸಿದ ವರದಿಗಳಿವೆ. ರಾಜ್ಯ ಸರ್ಕಾರ ಈ ಔಷಧದ 20 ಸಾವಿರ ವಯಲ್‌ಗೆ ಬೇಡಿಕೆ ಸಲ್ಲಿಸಿದರೆ, ಕೇಂದ್ರ ಸರ್ಕಾರ ಇದುವರೆಗೆ ಹಂಚಿಕೆ ಮಾಡಿರುವುದು 3,960 ವಯಲ್ಸ್ ಮಾತ್ರ. ಹಾಗಾದರೆ ರಾಜ್ಯದ ಔಷಧ ಕೊರತೆಯನ್ನು ಹೇಗೆ ಸರಿದೂಗಿಸಬೇಕು? ಔಷಧ ಕೊರತೆಯು ರೋಗಿಗಳ ಸಂಬಂಧಿಕರಲ್ಲಿ ಹಾಹಾಕಾರ ಎಬ್ಬಿಸುವುದಲ್ಲದೆ ಕಾಳಸಂತೆಯಲ್ಲೂ ಔಷಧಿ ಮಾರಾಟವಾಗುವುದಕ್ಕೆ ದಾರಿ ಮಾಡಿ ಕೊಡುತ್ತದೆ. ಕೋವಿಡ್ ಚಿಕಿತ್ಸೆಗೆ ಬಳಸುವ ರೆಮ್‌ಡಿಸಿವಿರ್ ಔಷಧದ ಕೊರತೆಯೇ ಇದಕ್ಕೆ ಜ್ವಲಂತ ಸಾಕ್ಷಿ. ಆ ಔಷಧಿಯು ಕಾಳಸಂತೆಯಲ್ಲಿ ಮಾರಾಟವಾಗಿ ಜನರ ಸುಲಿಗೆಗೆ ಕಾರಣವಾಯಿತು. ನಕಲಿ ರೆಮ್‌ಡಿಸಿವಿರ್ ಮಾರಾಟದ ಕುರಿತೂ ವ್ಯಾಪಕವಾಗಿ ದೂರುಗಳು ಕೇಳಿಬಂದವು. ಹಳೆಯ ತಪ್ಪುಗಳು ನಮಗೆ ಪಾಠವಾಗಬೇಕು. ಅಗತ್ಯ ಪ್ರಮಾಣದ ಆ್ಯಂಫೊಟೆರಿಸಿನ್-ಬಿ ಪೂರೈಸುವಂತೆ ಕೇಂದ್ರದ ಮೇಲೆ ರಾಜ್ಯ ಸರ್ಕಾರ ಒತ್ತಡ ಹೇರಬೇಕು. ಈ ಔಷಧದ ಉತ್ಪಾದನೆ ಹೆಚ್ಚಿಸಲು ಇಲ್ಲವೆ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ತಕ್ಷಣ ಕ್ರಮ ಜರುಗಿಸಬೇಕು. ಕೊರತೆಯನ್ನೂ ನೀಗಿಸಬೇಕು.

ಕೋವಿಡ್‌ನಿಂದ ಅಮೂಲ್ಯ ಜೀವಗಳನ್ನು ದೇಶ ಕಳೆದುಕೊಂಡಿದೆ. ಕಪ್ಪು ಶಿಲೀಂಧ್ರವು ಮತ್ತಷ್ಟು ವ್ಯಾಪಕವಾಗಿ ಕಾಡದಂತೆ ಸರ್ಕಾರ ಎಲ್ಲ ರೀತಿಯಲ್ಲೂ ಎಚ್ಚರಿಕೆ ವಹಿಸಬೇಕು

ಕೋವಿಡ್ ರೋಗಿಗಳ ಚಿಕಿತ್ಸೆಗೆ ಸ್ಟೆರಾಯ್ಡ್ ಬಳಕೆ, ಹ್ಯುಮಿಡಿಫೈಯರ್‌ಗಳಲ್ಲಿ ಶುದ್ಧ ನೀರು ಬಳಸದಿರುವುದು, ತೀವ್ರ ನಿಗಾ ಘಟಕದ ವೆಂಟಿಲೇಟರ್‌ಗಳಲ್ಲಿ ಸ್ವಚ್ಛತೆ ಕಾಪಾಡದಿರುವುದು, ಚಿಕಿತ್ಸೆಗೆ ಬಳಸುವ ಕೊಳವೆಗಳನ್ನು, ಆಸ್ಪತ್ರೆಗಳ ಹಾಸಿಗೆಗಳನ್ನು ಶುಭ್ರವಾಗಿ ಇಟ್ಟುಕೊಳ್ಳದೇ ಇರುವುದು- ಇಂತಹ ಸನ್ನಿವೇಶದಲ್ಲಿ ಕಪ್ಪು ಶಿಲೀಂಧ್ರ ತಗಲುವ ಸಾಧ್ಯತೆ ಹೆಚ್ಚು ಎಂದು ತಜ್ಞರು ಎಚ್ಚರಿಸಿದ್ದಾರೆ. ಒಂದೇ ಮಾಸ್ಕನ್ನು ದೀರ್ಘಕಾಲ ಬಳಸಿದರೂ ಇದು ಕಾಣಿಸಿಕೊಳ್ಳುವ ಅಪಾಯವಿದೆ ಎಂದೂ ಅವರು ಹೇಳಿದ್ದಾರೆ. ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ನೀಡುವಾಗ ಸ್ವಚ್ಛತಾ ಮಾನದಂಡಗಳು ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಮಾಸ್ಕ್ ಬಳಕೆ ಕುರಿತು ಜನರಿಗೆ ಸರಿಯಾದ ತಿಳಿವಳಿಕೆಯೇ ಇಲ್ಲ. ಮಾಸ್ಕ್ ಧರಿಸದವರಿಂದ ದಂಡ ವಸೂಲಿ ಮಾಡುವುದಕ್ಕೆ ಸರ್ಕಾರ ಆದ್ಯತೆ ನೀಡಿತೇ ವಿನಾ ಅದರ ಬಳಕೆ ಹಾಗೂ ವಿಲೇವಾರಿಯ ವೈಜ್ಞಾನಿಕ ವಿಧಾನದ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು ಸಮರ್ಪಕವಾಗಿ ಮಾಡಲೇ ಇಲ್ಲ. ಮಾಸ್ಕ್‌ಗಳನ್ನು ಎಚ್ಚರಿಕೆಯಿಂದ ಬಳಸದಿದ್ದರೆ ಎದುರಿಸಬಹುದಾದ ಅಪಾಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಕೊರೊನಾದಂತಹ ಸಾಂಕ್ರಾಮಿಕ ಕಾಣಿಸಿಕೊಂಡಾಗ ಮುಂದೆ ಒದಗಬಹುದಾದ ಪರಿಸ್ಥಿತಿಗಳನ್ನು ಮುಂಚಿತವಾಗಿ ಆಲೋಚಿಸಿ ಪೂರ್ವಸಿದ್ಧತೆ ಮಾಡಿಕೊಳ್ಳುವ ಹೊಣೆ ಸರ್ಕಾರದ್ದು. ಪ್ರತೀ ಪ್ರಜೆಯ ಜೀವವೂ ಬಲು ಮುಖ್ಯ ಎಂಬುದನ್ನು ಅದು ಅರಿಯಬೇಕು. ಕೋವಿಡ್‌ನಿಂದ ಅಮೂಲ್ಯ ಜೀವಗಳನ್ನು ದೇಶ ಕಳೆದುಕೊಂಡಿದೆ. ಕಪ್ಪು ಶಿಲೀಂಧ್ರವು ಮತ್ತಷ್ಟು ವ್ಯಾಪಕವಾಗಿ ಕಾಡದಂತೆ ಸರ್ಕಾರ ಎಲ್ಲ ರೀತಿಯಲ್ಲೂ ಎಚ್ಚರಿಕೆ ವಹಿಸಬೇಕು.

ರಾಜಕೀಯ ಅಧಿಕಾರ, ಆರ್ಥಿಕ– ಸಾಮಾಜಿಕ ಅಭಿವೃದ್ಧಿ ಸೂಚ್ಯಂಕಗಳಲ್ಲಿನ ಅಸಮತೋಲನ ಬೃಹತ್ ಸಮಸ್ಯೆ ಸೃಷ್ಟಿಸಬಲ್ಲದು

ಗಂಗೆಯಲ್ಲಿ ತೇಲಿಬಂದ ಶವ, ಅಸ್ಮಿತೆಯ ರಾಜಕಾರಣ

ವಿಶ್ಲೇಷಣೆ

ಶೇಖರ್ ಗುಪ್ತ

ಕೋವಿಡ್‌ಪೀಡಿತ ಉತ್ತರಪ್ರದೇಶ ಮತ್ತು ಬಿಹಾರ ರಾಜ್ಯಗಳ ಮೂಲಕ ಹರಿಯುವ ಗಂಗಾ ಮತ್ತು ಯಮುನಾ ನದಿಗಳಲ್ಲಿ ತೇಲಿಬಂದ ಶವಗಳ ಚಿತ್ರಗಳು ಸಾಂಕ್ರಾಮಿಕದ ಕಾಲಘಟ್ಟದಲ್ಲಿ ತೆಗೆದವಾದರೂ ಬಹುಕಾಲ ನೆನಪಿನಲ್ಲಿ ಉಳಿದುಕೊಳ್ಳಲಿವೆ.

ಭಾರತದಲ್ಲಿರುವ ನಮಗೆ ಈ ಚಿತ್ರಗಳು ಬೇರೆಯದೇ ಆದ ಸಂದೇಶವೊಂದನ್ನು ನೀಡುತ್ತಿವೆ. ಇವು ಲಕ್ಷಾಂತರ ಜನರನ್ನು ಆಪೋಶನ ತೆಗೆದುಕೊಳ್ಳುವ, ಒಮ್ಮೆ ಬಂದು ಹೋಗುವ ಸಾಂಕ್ರಾಮಿಕದ ಅಲೆಯ ಕಥೆಯನ್ನು ಮಾತ್ರ ಹೇಳುತ್ತಿಲ್ಲ. ಈ ಚಿತ್ರಗಳು ಕೆಟ್ಟ ಆಡಳಿತದ, ಅಭಿವೃದ್ಧಿ ಇಲ್ಲದಿರುವ, ಕೊಳಕು ರಾಜಕಾರಣದ ಮತ್ತು ಭಯ ಹುಟ್ಟಿಸುವಂತಹ ಪ್ರಾದೇಶಿಕ ಅಸಮತೋಲನದ ಶಾಶ್ವತ ದುರಂತದ ವಿವರಗಳನ್ನೂ ನೀಡುತ್ತಿವೆ.

ಮಹಾನ್ ನದಿಗಳು ಹರಿದು ಹೋಗುವುದು ಉತ್ತರ ಪ್ರದೇಶ ಮತ್ತು ಬಿಹಾರದ ಮೂಲಕವಷ್ಟೇ ಅಲ್ಲ. ಗಂಗಾ, ಯಮುನಾ ಮಾತ್ರವಲ್ಲದೆ ಬ್ರಹ್ಮಪುತ್ರ, ಕೃಷ್ಣಾ, ಕಾವೇರಿ, ಗೋದಾವರಿ, ನರ್ಮದಾ ಮತ್ತು ಇನ್ನೂ ಅನೇಕ ನದಿಗಳು ಹಲವು ರಾಜ್ಯಗಳ ಮೂಲಕ ಹರಿದು-ಹೋಗುತ್ತವೆ. ಕೋವಿಡ್‌ಗೆ ಬಲಿಯಾದವರ ಶವಗಳು ಆ ನದಿಗಳಲ್ಲಿ ಏಕೆ ಕಾಣಿಸುತ್ತಿಲ್ಲ?

ಇದರಲ್ಲಿ ನದಿಗಳದ್ದೇನೂ ತಪ್ಪಿಲ್ಲ. ನಮ್ಮ ದೇಶದ ಎಲ್ಲ ನದಿಗಳನ್ನೂ ದೇವತೆಗಳೆಂದು ಪೂಜಿಸಲಾಗುತ್ತದೆ. ಬೇರೆ ನದಿಗಳು ಹರಿಯುವ ರಾಜ್ಯಗಳು, ಪ್ರದೇಶ-ಗಳಲ್ಲೆಲ್ಲ ಇದೇ ರೀತಿಯ ಧಾರ್ಮಿಕ ನಂಬಿಕೆಗಳೇ ಇವೆ. ಧರ್ಮ ಅಲ್ಲದಿದ್ದರೆ, ಈ ರೀತಿ ಆಗಿದ್ದಕ್ಕೂ ಬೇರೆ ಬೇರೆ ಪ್ರದೇಶಗಳಿಗೂ ಸಂಬಂಧ ಇದೆಯೇ? ಹಾಗೇನೂ ಇಲ್ಲ.

ಸಟ್ಲೆಜ್, ಬಿಯಾಸ್ ಮತ್ತು ರಾವಿ ನದಿಗಳು ಹರಿಯುವ ಪಂಜಾಬ್‌ನಲ್ಲಿ ಇಂತಹ ಚಿತ್ರಗಳು ನಮಗೆ ಕಾಣುವುದಿಲ್ಲ. ಇಡೀ ದೇಶದಲ್ಲಿ ಕೋವಿಡ್‌ನಿಂದಾಗಿ ಮರಣಹೊಂದಿದವರ ಶೇಕಡಾವಾರು ಪ್ರಮಾಣ ಪಂಜಾಬ್‌ನಲ್ಲಿ ಹೆಚ್ಚಿಗಿದ್ದರೂ, ಅಲ್ಲಿನ ನದಿಗಳಲ್ಲಿ ಹೀಗೆ ಶವಗಳು ತೇಲಿಬಂದಿಲ್ಲ.

ಭಾಷೆ ಅಥವಾ ಸಂಸ್ಕೃತಿಗೂ ಇದಕ್ಕೂ ಏನಾದರೂ ಸಂಬಂಧವಿದೆಯೇ? ಅಧಿಕಾರದಲ್ಲಿ ಇರುವವರಿಗೆ ಹೇಳಲು ಇನ್ಯಾವ ನೆಪಗಳೂ ಕಾಣದಿದ್ದಾಗ, ಅವರು ಜನರ ಕಡೆ ಬೊಟ್ಟು ಮಾಡುವುದಿದೆ. ತಮ್ಮ ಪ್ರೀತಿಪಾತ್ರರ ಅಂತ್ಯಸಂಸ್ಕಾರಕ್ಕೆ ಕಟ್ಟಿಗೆ ಸಂಗ್ರಹಿಸಲು ಆಗದೆ, ಹೂಳಲು ಜಾಗ ಗೊತ್ತುಮಾಡಲು ಆಗದೆ, ಪೂಜಾರಿಯ ಶುಲ್ಕ ನೀಡಲು ಆಗದೆ ಅವುಗಳನ್ನು ನದಿಗೆ ಎಸೆಯುತ್ತಿರುವುದು ಏಕೆ? ಕೆಲವು ರಾಜ್ಯಗಳ ಜನ ಮಾತ್ರ ಏಕೆ ಇಷ್ಟೊಂದು ಬಡವರಾಗಿದ್ದಾರೆ, ಹತಾಶರಾಗಿದ್ದಾರೆ, ಭರವಸೆ ಕಳೆದುಕೊಂಡಿದ್ದಾರೆ?

ಮೇಲಿನ ಸಾಲುಗಳಲ್ಲಿ ನಾವು ಜನಾಂಗೀಯತೆ, ಪ್ರಾದೇಶಿಕತೆ, ಧರ್ಮ, ಸಂಪ್ರದಾಯ, ಜನಸಮೂಹ ಸೇರಿದಂತೆ ಹಲವು ಕಾರಣಗಳನ್ನು ಅಲ್ಲಗಳೆದಿದ್ದೇವೆ. ಇನ್ನುಳಿದಿರುವುದು ರಾಜಕಾರಣ ಮತ್ತು ಆರ್ಥಿಕತೆ ಮಾತ್ರ. ರಾಜಕಾರಣವನ್ನು ಮೊದಲಿಗೆ, ಆರ್ಥಿಕತೆಯನ್ನು ನಂತರದಲ್ಲಿ ಹೆಸರಿಸಿರುವುದು ಉದ್ದೇಶಪೂರ್ವಕವಾಗಿದೆ. ಏಕೆಂದರೆ, ಒಳ್ಳೆಯ ಹಾಗೂ ಕೆಟ್ಟ ಆರ್ಥಿಕ ಪರಿಣಾಮಗಳ ಮೂಲ ಇರುವುದು ರಾಜಕಾರಣದಲ್ಲಿ.

ಇದು ನಮ್ಮನ್ನು ಕರೆದೊಯ್ಯುವುದು 'ಚುನಾವಣಾ ರಾಜಕಾರಣ' ಎನ್ನುವ ತೀರಾ ಪರಿಚಿತ ಸ್ಥಳಕ್ಕೆ. ಉತ್ತರ-ಪ್ರದೇಶ ಮತ್ತು ಬಿಹಾರ ರಾಜ್ಯಗಳನ್ನಷ್ಟೇ ಅಲ್ಲದೆ, ಹಿಂದಿ ನಾಡಿನ ನಾಲ್ಕೂ ರಾಜ್ಯಗಳತ್ತ. ರಾಜಸ್ಥಾನ ಮತ್ತು ಮಧ್ಯ-ಪ್ರದೇಶಗಳತ್ತಲೂ ಗಮನ ಹರಿಸೋಣ. ಉತ್ತರಾಖಂಡ, ಛತ್ತೀಸಗಡ ಮತ್ತು ಜಾರ್ಖಂಡ್ ರಾಜ್ಯಗಳ ರಚನೆ ಆಗುವ ಮೊದಲಿದ್ದ ಈ ಪ್ರದೇಶವನ್ನು ಸಮಗ್ರವಾಗಿ ನೋಡೋಣ. ಈ ಪ್ರದೇಶದಲ್ಲಿ ಆರ್ಥಿಕವಾಗಿ ಸಮಾನ ಅಂಶಗಳಿವೆ. ಇಲ್ಲಿ ತಲಾವಾರು ಆದಾಯವು 1,500 ಅಮೆರಿಕನ್ ಡಾಲರ್‌ಗಿಂತ (₹ 1.09 ಲಕ್ಷ) ಕಡಿಮೆ. ರಾಷ್ಟ್ರೀಯ ತಲಾವಾರು ಆದಾಯವಾದ 2,100 ಅಮೆರಿಕನ್ ಡಾಲರ್‌ಗಿಂತ (₹ 1.53 ಲಕ್ಷ) ಇದು ಬಹಳ ಕಡಿಮೆ.

ಹಿಂದೂ ಧರ್ಮದ ಅತ್ಯಂತ ಪವಿತ್ರ ಪುರಾತನ ಯಾತ್ರಾಸ್ಥಳಗಳಲ್ಲಿ ಹೆಚ್ಚಿನವು ಇಲ್ಲಿವೆ. ಈ ಪ್ರದೇಶವು ಈಗ ಹಿಂದುತ್ವ ರಾಜಕಾರಣದ ತವರುಮನೆಯಾಗಿರ-ಬಹುದು. ಆದರೆ, 1989ರವರೆಗೆ ಇದು ಕಾಂಗ್ರೆಸ್ಸಿನ ಭದ್ರಕೋಟೆಯಾಗಿತ್ತು. 1989ರವರೆಗೆ ಈ ಪ್ರದೇಶವನ್ನು ಕಾಂಗ್ರೆಸ್ ಆಳಿದ್ದರೆ, 2014ರ ನಂತರದಲ್ಲಿ ಬಿಜೆಪಿ ಆ ಕೆಲಸ ಮಾಡುತ್ತಿದೆ.

ತಮ್ಮ ಪಕ್ಷಗಳಲ್ಲಿ ಪ್ರಭಾವಿ ನಾಯಕರೂ, ದೇಶದ ಪ್ರಧಾನಿಯೂ ಆಗಿದ್ದ ಎಲ್ಲರೂ ಉತ್ತರಪ್ರದೇಶ ದವರು: ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ವಿ.ಪಿ. ಸಿಂಗ್, ಚಂದ್ರಶೇಖರ್, ವಾಜಪೇಯಿ ಅವರನ್ನು ಹೆಸರಿಸಬಹುದು. ಈಗ ನರೇಂದ್ರ ಮೋದಿ ಅವರೂ ಅಲ್ಲಿನವರೇ. ಅವರು ವಡೋದರಾದಿಂದ ವಾರಾಣಸಿಗೆ ಬಂದವರು. ಕೆಲವು ಸ್ಪಷ್ಟ ಕಾರಣಗಳಿಗಾಗಿ ನಾವು ಇಲ್ಲಿ ಮೊರಾರ್ಜಿ ದೇಸಾಯಿ, ನರಸಿಂಹ ರಾವ್ ಮತ್ತು ಮನಮೋಹನ್ ಸಿಂಗ್ ಅವರ ಹೆಸರನ್ನು ಸೇರಿಸುತ್ತಿಲ್ಲ.

ದೇಶವನ್ನು ಯಾರು ಆಳಬೇಕು ಎಂಬುದನ್ನು ಹಿಂದಿ ನಾಡು ತೀರ್ಮಾನಿಸುತ್ತದೆ. ಹೀಗಿದ್ದರೂ, ಈ ನಾಡು ಅತ್ಯಂತ ಬಡತನದ, ತೀರಾ ಅಸ್ತವ್ಯಸ್ತ ಆಡಳಿತ ವ್ಯವಸ್ಥೆ-ಯನ್ನು ಹೊಂದಿರುವ ಹಾಗೂ ಇಡೀ ದೇಶದ ಸಾಮಾಜಿಕ ಅಭಿವೃದ್ಧಿ ಸೂಚ್ಯಂಕಗಳ ಸರಾಸರಿ ಮಟ್ಟವನ್ನು ಕೆಳಮಟ್ಟಕ್ಕೆ ತರುವಷ್ಟು ಕಡಿಮೆ ಮಟ್ಟದ ಸಾಮಾಜಿಕ ಸೂಚ್ಯಂಕಗಳನ್ನು ಹೊಂದಿರುವ ಪ್ರದೇಶವೂ ಹೌದು.

ಹಿಂದಿ ನಾಡಿನ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶ ರಾಜ್ಯಗಳನ್ನು ಒಟ್ಟಾಗಿ 'ಬಿಮಾರು ರಾಜ್ಯಗಳು' ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಅತಿಹೆಚ್ಚಿನ ತಲಾವಾರು ಆದಾಯ ಹೊಂದಿರುವ 20 ರಾಜ್ಯಗಳ ಪಟ್ಟಿಯಲ್ಲಿ ಈ ನಾಲ್ಕು ರಾಜ್ಯಗಳು ಇಲ್ಲ. 21ನೆಯ ಸ್ಥಾನದಲ್ಲಿ ರಾಜಸ್ಥಾನ ಇದೆ. ಮಧ್ಯಪ್ರದೇಶ (26), ಉತ್ತರಪ್ರದೇಶ (31), ಬಿಹಾರ (32) ನಂತರದ ಸ್ಥಾನಗಳಲ್ಲಿ ಬರುತ್ತವೆ. ಹೀಗಿದ್ದರೂ, ಜನಸಂಖ್ಯೆ ಹೆಚ್ಚಳದ ಪಟ್ಟಿಯಲ್ಲಿ ಈ ರಾಜ್ಯಗಳು ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತವೆ.

ವಿಂಧ್ಯಪರ್ವತಗಳ ದಕ್ಷಿಣದಲ್ಲಿ ಚಿತ್ರಣ ಸಂಪೂರ್ಣ ಬದಲಾಗಿರುತ್ತದೆ. ಗೋವಾ, ತೆಲಂಗಾಣ, ಕರ್ನಾಟಕ, ಕೇರಳ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿ ತಲಾವಾರು ಆದಾಯದ ರಾಷ್ಟ್ರೀಯ ಪಟ್ಟಿಯಲ್ಲಿ 1ನೆಯ ಸ್ಥಾನ, 6ರಿಂದ 12ರವರೆಗಿನ ಸ್ಥಾನ ಪಡೆದಿವೆ. ಮಹಾರಾಷ್ಟ್ರ, 12ನೆಯ ಸ್ಥಾನದಲ್ಲಿ, ಆಂಧ್ರ ಪ್ರದೇಶ 17ನೆಯ ಸ್ಥಾನದಲ್ಲಿ ಇವೆ. ವಿಂಧ್ಯಪರ್ವತದ ದಕ್ಷಿಣಕ್ಕೆ ಇರುವ ಎಲ್ಲ ರಾಜ್ಯಗಳೂ 20ರೊಳಗಿನ ಸ್ಥಾನ ಪಡೆದಿವೆ. ಹೀಗಿದ್ದರೂ, ದೇಶವನ್ನು ಆಳುವವರು ಯಾರು ಎಂಬುದನ್ನು ನಿರ್ಧರಿಸುವ ಶಕ್ತಿ ಈ ಭಾಗಕ್ಕೆ ಇಲ್ಲ.

ಇದನ್ನು ನಾವು ರಾಜಕಾರಣದ ಸಂದರ್ಭದಲ್ಲಿ ಗ್ರಹಿಸೋಣ. ಲೋಕಸಭೆಯ ಒಟ್ಟು 543 ಸ್ಥಾನಗಳ ಪೈಕಿ ನಾಲ್ಕು 'ಬಿಮಾರು' ರಾಜ್ಯಗಳಲ್ಲಿನ ಒಟ್ಟು ಕ್ಷೇತ್ರಗಳ ಸಂಖ್ಯೆ 204. ಈ ಸ್ಥಾನಗಳಲ್ಲಿ ದೊಡ್ಡ ಪ್ರಮಾಣದ ಗೆಲುವು ಕಾಣುವ ಪಕ್ಷಕ್ಕೆ ದೆಹಲಿಯಲ್ಲಿ ಅಧಿಕಾರ ಖಚಿತ. ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿಗೆ, 1984ರವರೆಗೆ ಕಾಂಗ್ರೆಸ್‌ಗೆ ಇದು ಸಾಧ್ಯವಾಗಿತ್ತು.

ಪುಟ್ಟದಾದ ಪುದುಚೇರಿ, ಲಕ್ಷದ್ವೀಪ ಮತ್ತು ಅಂಡ-ಮಾನ್‌ನಲ್ಲಿನ ಸ್ಥಾನಗಳು ಹಾಗೂ ವಿಂಧ್ಯಪರ್ವತದ ದಕ್ಷಿಣಕ್ಕೆ ಇರುವ ರಾಜ್ಯಗಳಲ್ಲಿನ ಲೋಕಸಭಾ ಸ್ಥಾನಗಳ ಒಟ್ಟು ಸಂಖ್ಯೆ 185. ಸುಮ್ಮನೆ ಹೋಲಿಕೆ ಮಾಡಲೆಂದು, ಈ ಸಾಲಿಗೆ ಒಡಿಶಾ ರಾಜ್ಯವನ್ನೂ ಸೇರಿಸೋಣ. ಆಗ ಲೋಕಸಭಾ ಸ್ಥಾನಗಳ ಒಟ್ಟು ಸಂಖ್ಯೆ 205 ಆಗುತ್ತದೆ. ಒಂದಿಷ್ಟು ಸಾಮಾನ್ಯ ಗುಣಧರ್ಮಗಳನ್ನು ಹಂಚಿ ಕೊಂಡಿರುವ ಈ ಎಲ್ಲ ರಾಜ್ಯಗಳಲ್ಲಿನ ಲೋಕಸಭಾ ಕ್ಷೇತ್ರ ಗಳನ್ನು ಗೆದ್ದು, ದೇಶ ಆಳಲು ಅಗತ್ಯವಿರುವ ಸಂಖ್ಯಾ ಬಲವನ್ನು ಒಗ್ಗೂಡಿಸಿಕೊಳ್ಳುವ ಆಸೆಯನ್ನು ಯಾರಾದರೂ ಹೊಂದಲು ಸಾಧ್ಯವೇ? ಇದು ಇಂದು ಅಸಾಧ್ಯದ ಮಾತು.

ರಾಜಕಾರಣ ಹಾಗೂ ರಾಜಕೀಯ ಆಯ್ಕೆಗಳಲ್ಲಿ ಬಹಳ ಹೆಚ್ಚಿನ ಸಾಮ್ಯತೆ ಹೊಂದಿರುವ ರಾಜ್ಯಗಳು ದೇಶವನ್ನು ಆಳುತ್ತಿದ್ದರೂ, ಗುಣಮಟ್ಟದ ಜೀವನದ ಅಳತೆಪಟ್ಟಿಯ ತಳಭಾಗದಲ್ಲಿ ಇವೆ. ಕಾಂಗ್ರೆಸ್ ಆಡಳಿತದ ಅವಧಿಯಲ್ಲಿಯೂ ಪರಿಸ್ಥಿತಿ ಹೀಗೇ ಇತ್ತು. ಬಿಜೆಪಿ ಆಡಳಿತದ ಅವಧಿಯಲ್ಲಿಯೂ ಪರಿಸ್ಥಿತಿ ಅದೇ ರೀತಿ ಮುಂದುವರಿದಿದೆ. ಧರ್ಮ, ಜಾತಿ, ರಾಷ್ಟ್ರೀಯತೆಯ ಹೆಸರಿನಲ್ಲಿ ಜನ ಅಧಿಕಾರ ಕೊಟ್ಟರೆ, ಹಾಗೆ ಅಧಿಕಾರ ಕೊಟ್ಟ ಜನ ಸಾಂಕ್ರಾಮಿಕದ 12 ತಿಂಗಳ ಅವಧಿಯಲ್ಲಿ ಎರಡು ಬಾರಿ ಊರಿನ ಕಡೆ ದೌಡಾಯಿಸಬೇಕಾದ, ತಮ್ಮವರ ಘನತೆಯ ಅಂತ್ಯಸಂಸ್ಕಾರಕ್ಕೂ ದುಡ್ಡು ಇಲ್ಲದಂತಹ, ಶವವನ್ನು ನದಿಗೆ ಎಸೆಯಬೇಕಾದಂತಹ ಪರಿಸ್ಥಿತಿಯನ್ನು ತಂದಿರಿಸಲಾಗಿದೆ.

ವಿಂಧ್ಯಪರ್ವತದಿಂದ ದಕ್ಷಿಣಕ್ಕೆ ಬಹುತೇಕ ರಾಜ್ಯ ಗಳಲ್ಲಿ ಅಲ್ಲಿನದೇ ಆದ ರಾಜಕಾರಣ ಇದೆ, ಪ್ರಾದೇಶಿಕ ನಾಯಕರು ಅಲ್ಲಿ ಒಂದು ಹಂತದ ಮಟ್ಟಿಗಿನ ಒಳ್ಳೆಯ ಆಡಳಿತ ನೀಡಿದ್ದಾರೆ. ಇಲ್ಲಿನ ಜನ ತಮ್ಮ ಕುಟುಂಬದ

ಜಾಗತಿಕ ಟೆಂಡರ್‌ಗಿಲ್ಲ ಸ್ಪಂದನ: ವಿದೇಶಿ ಲಸಿಕೆಗಳ ಆಮದು ಸಾಧ್ಯತೆ ಕ್ಷೀಣ

ಕೋವಿಡ್ ಲಸಿಕೆಗೆ ರಾಜ್ಯಗಳ ಪರದಾಟ

ಕೋವಿಡ್ ಲಸಿಕೆಯನ್ನು 18ರಿಂದ 44ರ ವಯೋಮಾನದವರಿಗೆ ಹಾಕಿಸುವುದು ರಾಜ್ಯ ಸರ್ಕಾರಗಳ ಹೊಣೆ. ಇದಕ್ಕಾಗಿ ರಾಜ್ಯ ಸರ್ಕಾರಗಳೇ ಲಸಿಕೆಯನ್ನು ಖರೀದಿಸಬೇಕು. ಮೇ 1ರಿಂದ ಈ ವಯೋಮಾನದವರು ಲಸಿಕೆ ಹಾಕಿಸಿಕೊಳ್ಳಲು ಅರ್ಹರು ಎಂದು ಕೇಂದ್ರ ಸರ್ಕಾರವು ಏಪ್ರಿಲ್ 19ರಂದು ಹೇಳಿತ್ತು.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಕೋವಿಶೀಲ್ಡ್ ಮತ್ತು ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆಗಳು ಭಾರತದಲ್ಲಿ ತಯಾರಾಗುತ್ತಿವೆ. ಈ ಕಂಪನಿಗಳು ತಯಾರಿಸುವ ಲಸಿಕೆಯನ್ನು ಕೇಂದ್ರ ಸರ್ಕಾರವೇ ರಾಜ್ಯಗಳಿಗೆ ಹಂಚಿಕೆ ಮಾಡುತ್ತದೆ. 45 ವರ್ಷ ದಾಟಿದವರಿಗೆ ಕೇಂದ್ರ ಸರ್ಕಾರವೇ ಉಚಿತವಾಗಿ ಲಸಿಕೆ ಹಾಕಿಸುತ್ತದೆ. ಈ ಉದ್ದೇಶಕ್ಕಾಗಿ ಈ ಎರಡು ಕಂಪನಿಗಳು ತಯಾರಿಸುವ ಶೇ 50ರಷ್ಟು ಲಸಿಕೆಯನ್ನು ಬಳಸಿಕೊಳ್ಳಲಾಗುತ್ತದೆ. ಉಳಿದ ಶೇ 50ರಷ್ಟರಲ್ಲಿ ಶೇ 25ರಷ್ಟನ್ನು ರಾಜ್ಯಗಳಿಗೆ ಮತ್ತು ಶೇ 25ರಷ್ಟನ್ನು ಖಾಸಗಿ ಆಸ್ಪತ್ರೆಗಳಿಗೆ ಹಂಚಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯು ಅನುಮೋದನೆ ನೀಡಿದ ಯಾವುದೇ ಲಸಿಕೆಯನ್ನು 18-44ರ ವಯೋಮಾನದವರಿಗೆ ಹಾಕಿಸುವುದಕ್ಕಾಗಿ ರಾಜ್ಯ ಸರ್ಕಾರಗಳು ಖರೀದಿಸಬಹುದು ಎಂದೂ ಕೇಂದ್ರ ಹೇಳಿದೆ.

18-44ರ ವಯೋಮಾನದವರು ಲಸಿಕೆಗೆ ಅರ್ಹರು ಎಂದು ನಿರ್ಧರಿಸುವಾಗ ಲಸಿಕೆಯ ಲಭ್ಯತೆಯನ್ನು ಲೆಕ್ಕ ಹಾಕಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ. ಯಾವುದೇ ರಾಜ್ಯಕ್ಕೆ ನೇರವಾಗಿ ಲಸಿಕೆಯನ್ನು ಖರೀದಿಸಲು ಈವರೆಗೆ ಸಾಧ್ಯವಾಗಿಲ್ಲ. ಹಲವು ರಾಜ್ಯಗಳು ಲಸಿಕೆ ಅಭಿಯಾನ ಆರಂಭಿಸಿ, ಲಸಿಕೆ ಇಲ್ಲ ಎಂಬ ಕಾರಣಕ್ಕೆ ನಿಲ್ಲಿಸಿದವು.

'11 ರಾಜ್ಯಗಳು ಮಾತ್ರ ಈವರೆಗೆ ಈ ವರ್ಗದ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕಿಸಿವೆ. ಮೇ 13ರ ಮಾಹಿತಿ ಪ್ರಕಾರ, 39.14 ಲಕ್ಷ ಡೋಸ್ ಲಸಿಕೆ ಮಾತ್ರ ಹಾಕಲಾಗಿದೆ' ಎಂದು 'ಬ್ಲೂಮ್‌ಬರ್ಗ್‌ಕ್ವಿಂಟ್' ವರದಿ ಮಾಡಿದೆ.

ದೇಶೀಯವಾಗಿ ಲಭ್ಯವಾಗುವ ಲಸಿಕೆಗೆ ಮಿತಿ ಇದೆ. ಕೋವಿಶೀಲ್ಡ್ (6.5 ಕೋಟಿ) ಮತ್ತು ಕೋವ್ಯಾಕ್ಸಿನ್ (2 ಕೋಟಿ) ಲಸಿಕೆಗಳ 8.5 ಕೋಟಿ ಡೋಸ್‌ಗಳು ಮೇ ತಿಂಗಳಲ್ಲಿ ಲಭ್ಯವಾಗಲಿವೆ ಎಂಬುದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಮಾಹಿತಿ. ಇದರಲ್ಲಿ 4.25 ಕೋಟಿ ಡೋಸ್ ಕೇಂದ್ರದ ಪಾಲು, 2.12 ಕೋಟಿ ಡೋಸ್ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತವೆ. ಉಳಿದ 2.12 ಕೋಟಿ ಡೋಸ್ ಅನ್ನು ಎಲ್ಲ ರಾಜ್ಯಗಳಿಗೆ ಹಂಚಲಾಗುತ್ತದೆ.

ಹೀಗಾಗಿ, ರಾಜ್ಯಗಳು ಲಸಿಕೆಯ ತೀವ್ರ ಕೊರತೆ ಎದುರಿಸುತ್ತಿವೆ. ಈ ಕೊರತೆ ನೀಗಿಸುವುದಕ್ಕಾಗಿಯೇ ರಾಜ್ಯಗಳು ಜಾಗತಿಕ ಟೆಂಡರ್‌ನ ಮೊರೆ ಹೋಗಿವೆ. ಆದರೆ, ಇದು ಕಾರ್ಯರೂಪಕ್ಕೆ ಬರುವುದು ಸುಲಭವಲ್ಲ ಎಂಬುದು ಈವರೆಗಿನ ಬೆಳವಣಿಗೆಗಳಿಂದ ಸ್ಪಷ್ಟವಾಗಿದೆ. ಅಮೆರಿಕದ ಮೊಡೆರ್ನಾ, ಫೈಝರ್ ಮತ್ತು ಜಾನ್ಸನ್ ಎಂಡ್ ಜಾನ್ಸನ್, ರಷ್ಯಾದ ಸ್ಪುಟ್ನಿಕ್-ವಿ ಹಾಗೂ ಚೀನಾ ಅಭಿವೃದ್ಧಿಪಡಿಸಿದ ಮೂರು ಲಸಿಕೆಗಳು ಈಗ ಬಳಕೆಯಲ್ಲಿವೆ. ಫೈಝರ್ 60ಕ್ಕೂ ಹೆಚ್ಚು ದೇಶಗಳಲ್ಲಿ, ಮೊಡೆರ್ನಾ 27ಕ್ಕೂ ಹೆಚ್ಚು ದೇಶಗಳಲ್ಲಿ, ಸ್ಪುಟ್ನಿಕ್ 10ಕ್ಕೂ ಹೆಚ್ಚು ದೇಶಗಳಲ್ಲಿ ಬಳಕೆಯಲ್ಲಿವೆ.

ಭಾರತದ ವಿವಿಧ ರಾಜ್ಯಗಳು ಕರೆದಿರುವ ಜಾಗತಿಕ ಟೆಂಡರ್‌ಗೆ ಯಾವುದೇ ಸ್ಪಂದನ ದೊರೆತಿಲ್ಲ. 'ಹಲವು ದೇಶಗಳ ಕೇಂದ್ರ ಸರ್ಕಾರಗಳೇ ಲಸಿಕೆ ಖರೀದಿಗೆ ಪೂರ್ಣ ಖಾತರಿಯ ಜತೆಗೆ ಮುಂಚೂಣಿಯಲ್ಲಿ ನಿಂತಿರುವಾಗ ರಾಜ್ಯಗಳ ಜತೆಗೆ ವ್ಯವಹರಿಸುವುದಿಲ್ಲ ಎಂದು ವಿದೇಶದ ಲಸಿಕೆ ತಯಾರಿಕಾ ಕಂಪನಿಗಳು ಹೇಳಿವೆ. ಹೀಗಾಗಿ ಬಿಹಾರ ಜಾಗತಿಕ ಟೆಂಡರ್ ಕರೆಯುವುದಿಲ್ಲ' ಎಂದು ಬಿಹಾರದ ಆರೋಗ್ಯ ಸಚಿವ ಮಂಗಲ್ ಪಾಂಡೆ ಹೇಳಿದ್ದಾರೆ.

ದೆಹಲಿ ಮತ್ತು ಪಂಜಾಬ್ ಸರ್ಕಾರದ ಅನುಭವಗಳು ಇದನ್ನೇ ಪುಷ್ಟೀಕರಿಸುತ್ತವೆ. 'ಫೈಝರ್ ಮತ್ತು ಮೊಡೆರ್ನಾ ಕಂಪನಿಗಳ ಜತೆಗೆ ಮಾತುಕತೆ ನಡೆಸಿದ್ದೇವೆ. ದೆಹಲಿ ಸರ್ಕಾರಕ್ಕೆ ನೇರವಾಗಿ ಲಸಿಕೆ ನೀಡುವುದು ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ಜತೆಗೆ ಮಾತ್ರ ವ್ಯವಹರಿಸುತ್ತೇವೆ ಎಂದು ಈ ಕಂಪನಿಗಳು ಹೇಳಿವೆ. ಹಾಗಾಗಿ, ಕೇಂದ್ರವೇ ಲಸಿಕೆ ಆಮದು ಮಾಡಿಕೊಂಡು ರಾಜ್ಯಗಳಿಗೆ ಹಂಚಬೇಕು' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಒತ್ತಾಯಿಸಿದ್ದಾರೆ. ಪಂಜಾಬ್ ಸರ್ಕಾರಕ್ಕೆ ಕೂಡ ಮೊಡೆರ್ನಾ ಇದೇ ಉತ್ತರ ನೀಡಿದೆ.

ರಾಜ್ಯಗಳ ಲಸಿಕೆ ಖರೀದಿಯಲ್ಲಿ ಕೇಂದ್ರದ ಪಾತ್ರವೇನೂ ಇಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಇದೇ 11ರಂದು ಹೇಳಿದ್ದು ವರದಿಯಾಗಿದೆ.

ಹೀಗಾಗಿ, 18-44 ವಯೋಮಾನದವರ ಲಸಿಕೆ ಅಭಿಯಾನದ ಬಗ್ಗೆ ದಿನ ಕಳೆದಂತೆ ಗೊಂದಲಗಳು ಹೆಚ್ಚುತ್ತಲೇ ಇದೆ; ಲಸಿಕೆ ಹಾಕಿಸುವಿಕೆಯು ಇನ್ನಷ್ಟು ದಿನ ಕುಂಟುತ್ತಲೇ ಸಾಗಲಿದೆ.

ಆಧಾರ: ಪಿಟಿಐ, ಬ್ಲೂಮ್‌ಬರ್ಗ್‌ಕ್ವಿಂಟ್

ದೆಹಲಿಯ ಲಸಿಕೆ ಕೇಂದ್ರವೊಂದು ಲಸಿಕೆ ಕೊರತೆಯಿಂದಾಗಿ ಸ್ಥಗಿತಗೊಂಡಿದೆ. ಹಾಗಾಗಿ, ಅಲ್ಲಿ ನಿಯೋಜಿಸಲಾಗಿದ್ದ ಸಿವಿಲ್ ಡಿಫೆನ್ಸ್ ಸ್ವಯಂಸೇವಕರು ಸೋಮವಾರ ವಿಶ್ರಾಂತಿ ಪಡೆದರು – ಪಿಟಿಐ ಚಿತ್ರ

ಈವರೆಗಿನ ಲಸಿಕೆ ಹಾಕಿಸುವಿಕೆ ಪ್ರಮಾಣ % (ಕನಿಷ್ಠ ಒಂದು ಡೋಸ್ ಹಾಕಿಸಿಕೊಂಡವರು)



ಪ್ರಜಾವಾಣಿ ಗ್ರಾಫಿಕ್ಸ್ ಆಧಾರ: ಅವರ್‌ವರ್ಲ್ಡ್‌ಇನ್‌ಡಾಟಾ

ಜಾಗತಿಕ ಟೆಂಡರ್‌ನತ್ತ ರಾಜ್ಯಗಳ ಚಿತ್ತ

ಲಸಿಕೆ ಅಭಾವವನ್ನು ನೀಗಿಸಲು ಮಹಾರಾಷ್ಟ್ರ, ಉತ್ತರ ಪ್ರದೇಶ, ಕರ್ನಾಟಕ, ತಮಿಳುನಾಡು, ಒಡಿಶಾ, ಉತ್ತರಾಖಂಡ, ರಾಜಸ್ಥಾನ ಸೇರಿ 10ಕ್ಕೂ ಹೆಚ್ಚು ರಾಜ್ಯಗಳು ಜಾಗತಿಕ ಟೆಂಡರ್ ಕರೆದು ಖರೀದಿಗೆ ಮುಂದಾಗಿವೆ.

ಉತ್ತರ ಪ್ರದೇಶ ಸರ್ಕಾರವು ಮೊದಲಿಗೆ ಟೆಂಡರ್ ಕರೆಯಿತು. 4 ಕೋಟಿ ಡೋಸ್ ಪೂರೈಕೆಗೆ ಬೇಡಿಕೆ ಸಲ್ಲಿಸಿತು. ಮುಂಬೈ ಮಹಾನಗರ ಪಾಲಿಕೆಯು 1 ಕೋಟಿ ಡೋಸ್‌ಗೆ ಕಳೆದ ವಾರವಷ್ಟೇ ಬಿಡ್ ಕರೆದಿದೆ. ಮೂರು ತಿಂಗಳೊಳಗೆ 5 ಕೋಟಿ ಡೋಸ್ ಲಸಿಕೆ ಪೂರೈಸುವುದಕ್ಕಾಗಿ ತಮಿಳುನಾಡು ಸರ್ಕಾರವು ಟೆಂಡರ್ ಕರೆದಿದೆ. ಉತ್ತರಾಖಂಡ ಸರ್ಕಾರವು ರಾಜ್ಯದ 30 ಲಕ್ಷ ಜನರಿಗೆ ಲಸಿಕೆ ಬೇಕು ಎಂದು ಟೆಂಡರ್ ಕರೆದಿದೆ. ಒಡಿಶಾ ಸರ್ಕಾರವು ನಾಲ್ಕು ತಿಂಗಳ ಒಳಗೆ 3.8 ಕೋಟಿ ಡೋಸ್ ಅಗತ್ಯವಿದೆ ಎಂದು ಬೇಡಿಕೆ ಇಟ್ಟಿದ್ದು, ಇದೇ 28ರ ಗಡುವು ನೀಡಿದೆ. ಮುಂಚಿತವಾಗಿ ಶೇ 30ರಷ್ಟು ಹಣ ಪಾವತಿ ಮಾಡಿ, ದಾಸ್ತಾನು ಪೂರೈಕೆಯಾದ ಎರಡು ದಿನಗಳಲ್ಲಿ ಬಾಕಿ ಹಣ ಪಾವತಿ ಮಾಡುವುದಾಗಿ ಟೆಂಡರ್‌ನಲ್ಲಿ ಉಲ್ಲೇಖಿಸಿದೆ.

ಕರ್ನಾಟಕ ಸರ್ಕಾರವು ₹843 ಕೋಟಿ ವೆಚ್ಚದಲ್ಲಿ 2 ಕೋಟಿ ವಯಲ್ಸ್ ಖರೀದಿಗೆ ಜಾಗತಿಕ ಟೆಂಡರ್ ಆಹ್ವಾನಿಸಿದ್ದು, ಅದರ ಅವಧಿ ಮೇ 24ಕ್ಕೆ ಮುಕ್ತಾಯವಾಗಿದೆ.

ಒಂದು ವೇಳೆ ವಿದೇಶದ ಲಸಿಕೆಗಳು ಲಭ್ಯವಾದರೆ, ಅವುಗಳನ್ನು ಶೇಖರಿಸಿ ಇಡಲು 2ರಿಂದ 8 ಡಿಗ್ರಿ ಸೆಲ್ಸಿಯಸ್ ತಾಪಮಾನದ ವ್ಯವಸ್ಥೆ ಅಗತ್ಯವಿದ್ದು, ಇದಕ್ಕೆ ತಮಿಳುನಾಡು, ಒಡಿಶಾ ರಾಜ್ಯಗಳು ಸಿದ್ಧತೆ ಮಾಡಿಕೊಂಡಿವೆ. ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳು ಬಿಡ್‌ನಲ್ಲಿ ಭಾಗವಹಿಸುವಂತಿಲ್ಲ ಎಂದು ಟೆಂಡರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸರಳವಲ್ಲ ಲಸಿಕೆಯ ಆಮದು

ವಿದೇಶದಿಂದ ಲಸಿಕೆ ಆಮದು ಪ್ರಕ್ರಿಯೆ ಸುಲಭವಲ್ಲ. ಕೇಂದ್ರ ಸರ್ಕಾರದ ನಿಯಂತ್ರಣ ಕ್ರಮಗಳಿಂದಾಗಿ ಆಮದು ಬಹುತೇಕ ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗಿದೆ. 'ವಿಶ್ವ ಆರೋಗ್ಯ ಸಂಸ್ಥೆ ಅಂಗೀಕರಿಸಿರುವ ಲಸಿಕೆಯನ್ನು ಆಮದು ಮಾಡಿಕೊಳ್ಳಬಹುದು' ಎಂದು ಕೇಂದ್ರ ಸರ್ಕಾರ ಹೇಳಿರುವುದರಿಂದ ಫೈಝರ್, ಮಾಡೆರ್ನಾ, ಜಾನ್ಸನ್ ಎಂಡ್ ಜಾನ್ಸನ್ ಸಂಸ್ಥೆಗಳ ಲಸಿಕೆಗಳನ್ನು ಸುಲಭವಾಗಿ ಆಮದು ಮಾಡಿಕೊಳ್ಳಬಹುದು ಎಂಬ ಭಾವನೆ ಮೂಡುತ್ತದೆ. ಆದರೆ, ವಾಸ್ತವ ಹಾಗಿಲ್ಲ.

ಲಸಿಕೆ ಆಮದು ಯಾಕೆ ಕಷ್ಟ ಎಂಬುದು 2021ರ ಏಪ್ರಿಲ್ 15ರಂದು ಕೇಂದ್ರ ಸರ್ಕಾರವು ಜಾರಿ ಮಾಡಿರುವ ಅಧಿಸೂಚನೆಯಲ್ಲಿ ಹೇಳಿರುವ ನಿಬಂಧನೆಗಳನ್ನು ನೋಡಿದರೆ ಅರ್ಥವಾಗುತ್ತದೆ.

- ಅಮೆರಿಕ, ಬ್ರಿಟನ್ ಹಾಗೂ ಜಪಾನ್‌ನಲ್ಲಿ ಅಂಗೀಕಾರ ಪಡೆದಿರುವ ಲಸಿಕೆಗಳನ್ನು ಆಮದು ಮಾಡಿಕೊಳ್ಳಲು, ಆಯಾ ಸಂಸ್ಥೆಗಳ ಭಾರತೀಯ ಅಂಗಸಂಸ್ಥೆಗಳ ಮೂಲಕ ಅರ್ಜಿ ಸಲ್ಲಿಸಬಹುದು. ಅಂಥ ಕಂಪನಿಗೆ ಭಾರತೀಯ ಅಂಗಸಂಸ್ಥೆ ಇಲ್ಲದಿದ್ದರೆ, ಅಧಿಕೃತ ಏಜೆಂಟರ ಮೂಲಕ ಅರ್ಜಿ ಸಲ್ಲಿಸಬಹುದು. ಯಾವ ಕಾರಣಕ್ಕೂ ರಾಜ್ಯಗಳು ನೇರವಾಗಿ ವಿದೇಶಿ ತಯಾರಿಕಾ ಸಂಸ್ಥೆಯಿಂದ ಖರೀದಿಸುವಂತಿಲ್ಲ
- ಅಂಗಸಂಸ್ಥೆ ಅಥವಾ ಅಧಿಕೃತ ಏಜೆಂಟರಿಂದ ಬಂದ ಅರ್ಜಿಗಳನ್ನು ಕೇಂದ್ರ ಔಷಧ ಪ್ರಮಾಣೀಕರಣ ಮತ್ತು ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ಪರಿಶೀಲಿಸಿ, ನಿಯಂತ್ರಿತ ಬಳಕೆಗೆ ಅನುಮತಿ ನೀಡುತ್ತದೆ. ಮೂರು ದಿನಗಳೊಳಗೆ ಈ ಪ್ರಕ್ರಿಯೆ ನಡೆಯುವುದು
- ನಿಯಂತ್ರಿತ ಬಳಕೆಗೆ ಅನುಮತಿ ಕೋರುವ ಅರ್ಜಿಯ ಜತೆಗೆ ಪರೀಕ್ಷಾ ಪ್ರೊಟೊಕಾಲ್, ಆಮದು ನೋಂದಣಿ ಪ್ರಮಾಣಪತ್ರ ಹಾಗೂ ಆಮದು ಪರವಾನಗಿಗಾಗಿಯೂ ಅರ್ಜಿಗಳನ್ನು ಸಲ್ಲಿಸಬೇಕು (ಈ ಪ್ರಕ್ರಿಯೆಯು ಸುದೀರ್ಘವಾದುದು ಮತ್ತು ಇದಕ್ಕೆ ನೂರಾರು ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ)
- ಎಲ್ಲಾ ಅರ್ಜಿಗಳು ಸಮರ್ಪಕವಾಗಿವೆ ಎಂಬುದು ಖಚಿತಗೊಂಡ ನಂತರ ಕಸೌಲಿಯಲ್ಲಿರುವ ಕೇಂದ್ರೀಯ ಔಷಧಗಳ ಪ್ರಯೋಗಾಲಯದಲ್ಲಿ (ಸಿಡಿಎಲ್) ಲಸಿಕೆಯ ಪರೀಕ್ಷೆ ನಡೆಸಲಾಗುವುದು
- ಈ ಪರೀಕ್ಷೆ ಯಶಸ್ವಿಯಾದರೆ, ಲಸಿಕೆಯ ನಿಯಂತ್ರಿತ ಬಳಕೆಗೆ ಅನುಮತಿ ನೀಡಲಾಗುವುದು. ಆರಂಭದಲ್ಲಿ ನೂರು ಮಂದಿ ಫಲಾನುಭವಿಗಳ ಮೇಲೆ ಪ್ರಯೋಗಿಸಬೇಕು. ಜತೆಗೆ ಸುರಕ್ಷತೆಯನ್ನು ಕುರಿತ ದತ್ತಾಂಶಗಳನ್ನು ಸಿಡಿಎಸ್‌ಸಿಒಗೆ ಸಲ್ಲಿಸಬೇಕು
- 100 ಮಂದಿಯ ಮೇಲೆ ಲಸಿಕೆಯ ಪ್ರಯೋಗ ನಡೆದ ನಂತರ,
- ವಿವಿಧ ರಾಜ್ಯ ಸರ್ಕಾರಗಳ ಜೊತೆಗೆ ನಗರಪಾಲಿಕೆಗಳೂ ಲಸಿಕೆ ಖರೀದಿಗೆ ಮುಂದಾಗಿವೆ. ಮೂಲಗಳ ಪ್ರಕಾರ, ಬೃಹನ್ಮುಂಬೈ ಮಹಾ ನಗರಪಾಲಿಕೆಯ ಟೆಂಡರ್‌ಗೆ ರಷ್ಯಾದ ಸ್ಪುಟ್ನಿಕ್-ವಿ ಲಸಿಕೆ ತಯಾರಕರು ಸ್ಪಂದಿಸಿದ್ದಾರೆ ಎನ್ನಲಾಗಿದೆ
- ಫೈಝರ್ ಮತ್ತು ಮೊಡೆರ್ನಾ ಲಸಿಕೆಗಳನ್ನು ಖರೀದಿಸಲು ಯತ್ನಿಸಲಾಯಿತಾದರೂ, ಈ ಕಂಪನಿಗಳ ತಯಾರಿಕಾ ಸಾಮರ್ಥ್ಯದ ಅಷ್ಟೂ ಲಸಿಕೆಗಳನ್ನು ವಿವಿಧ ದೇಶಗಳು ಕಾಯ್ದಿರಿಸಿವೆ ಎಂಬ ಉತ್ತರ ಬಂದಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ
- 'ಫೈಝರ್ ಮತ್ತು ಮೊಡೆರ್ನಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ಸಂಪರ್ಕಿಸಿದೆ. ಆ ಕಂಪನಿಗಳಲ್ಲಿ ಹೆಚ್ಚುವರಿಯಾಗಿ ಉಳಿಯುವ ಲಸಿಕೆಗಳ ಮಾಹಿತಿ ಸರ್ಕಾರಕ್ಕೆ ಸಿಗಲಿದೆ. ಆ ಬಳಿಕವಷ್ಟೇ ಯಾವ ರಾಜ್ಯಗಳಿಗೆ ಎಷ್ಟು ಪ್ರಮಾಣದ ಲಸಿಕೆ ಹಂಚಿಕೆ ಮಾಡಬೇಕು ಎಂದು ನಿರ್ಧರಿಸಲಿದ್ದೇವೆ' ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲಾಲ್ ಅಗರ್‌ವಾಲ್ ತಿಳಿಸಿದ್ದಾರೆ

ಸಂಸ್ಥೆಯು ಸಲ್ಲಿಸಿದ ದತ್ತಾಂಶವನ್ನು ಸಿಡಿಎಸ್‌ಸಿಒ ಪರಿಶೀಲನೆಗೆ ಒಳಪಡಿಸುವುದು. ಹೀಗೆ ಮಾನ್ಯತೆ ಲಭಿಸಿದ ನಂತರವೇ ಲಸಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಲು ಅರ್ಜಿದಾರರಿಗೆ ಪರವಾನಗಿ ನೀಡಲಾಗುವುದು

- ಆದರೆ ಈ ಅನುಮತಿಯು ಪರೀಕ್ಷಾ ಪ್ರೊಟೊಕಾಲ್‌ನ ದತ್ತಾಂಶಗಳ ಪರಿಶೀಲನೆಯ ನಂತರವೇ ಜಾರಿಗೆ ಬರುತ್ತದೆ. ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಪರೀಕ್ಷಾ ಪ್ರೊಟೊಕಾಲ್ ದತ್ತಾಂಶಗಳನ್ನು ಪರಿಶೀಲನೆ ನಡೆಸಿ, ತುರ್ತು ಬಳಕೆಗೆ ಅನುಮತಿ ನೀಡುತ್ತಾರೆ

ಇಷ್ಟೆಲ್ಲಾ ನಿಯಮಗಳನ್ನು ಪಾಲಿಸಿದ ಸಂಸ್ಥೆಗಳು ಮಾತ್ರ ಜಾಗತಿಕ ಟೆಂಡರ್‌ನಲ್ಲಿ ಪಾಲ್ಗೊಳ್ಳುವ ಅರ್ಹತೆ ಪಡೆಯುತ್ತವೆ. ಆದ್ದರಿಂದ ವಿವಿಧ ರಾಜ್ಯಗಳಿಗೆ ನೇರವಾಗಿ ಲಸಿಕೆ ಪೂರೈಸುವ ಇಚ್ಛೆ ಕೆಲವು ಸಂಸ್ಥೆಗಳಿಗೆ ಇದ್ದರೂ ಟೆಂಡರ್‌ನಲ್ಲಿ ಪಾಲ್ಗೊಳ್ಳುವ ಅರ್ಹತೆ ಇಲ್ಲದಾಗಿದೆ. ಅಲ್ಲದೆ, ಇಷ್ಟೆಲ್ಲಾ ಪ್ರಕ್ರಿಯೆಗಳ ಮೂಲಕ ಹೋಗಲು ಯಾವ ಸಂಸ್ಥೆ ಮುಂದಾಗುತ್ತದೆ ಎಂಬುದೂ ಪ್ರಶ್ನೆಯಾಗಿದೆ.

ಸದ್ಯಕ್ಕೆ ಸ್ಪುಟ್ನಿಕ್-ವಿ ಲಸಿಕೆ ಮಾತ್ರ ಈ ಅರ್ಹತೆ ಪಡೆದಿದೆ. ಸ್ಪುಟ್ನಿಕ್ ಪರವಾಗಿ ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬ್ ಸಂಸ್ಥೆ ಸ್ಥಳೀಯ ಅಧಿಕೃತ ಏಜೆಂಟ್ ರೂಪದಲ್ಲಿ ಈ ಎಲ್ಲಾ ಪ್ರಕ್ರಿಯೆಗಳನ್ನು ಪೂರೈಸಿ, ಈಗಾಗಲೇ ಎರಡು ಲಕ್ಷಕ್ಕೂ ಹೆಚ್ಚು ಡೋಸ್‌ಗಳನ್ನು ಆಮದು ಮಾಡಿಕೊಂಡಿದೆ.

ಬಿಜೆಪಿ ವರ್ಚಸ್ಸು ಹೆಚ್ಚಳ ಸಭೆಯಲ್ಲಿ ಮೋದಿ ಭಾಗಿ

• ಸಂಜಯ್ ಪಾಂಡೆ, ಆನಂದ್ ಮಿಶ್ರಾ

ಲಖನೌ/ನವದೆಹಲಿ: ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂಬ ಗ್ರಹಿಕೆಯು ಪಕ್ಷದ ಮೇಲೆ ಬೀರಬಹುದಾದ ಪರಿಣಾಮದ ಬಗ್ಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಹಿರಿಯ ನಾಯಕರು ನಡೆಸಿದ ಚರ್ಚೆಯಲ್ಲಿ; ಪ್ರಧಾನಿ ನರೇಂದ್ರ ಮೋದಿ ಅವರೂ ಭಾಗಿಯಾಗಿದ್ದರು. ಪಶ್ಚಿಮ ಬಂಗಾಳದಲ್ಲಿ ನಿರೀಕ್ಷಿತ ಸಂಖ್ಯೆಯ ಕ್ಷೇತ್ರಗಳಲ್ಲಿ ಗೆಲುವು ಸಾಧ್ಯವಾಗದಿರಲು ಕೋವಿಡ್ ನಿರ್ವಹಣೆ ವಿಷಯವೇ ಕಾರಣ ಎಂಬ ಅಭಿಪ್ರಾಯ ಇದೆ. ಹಾಗಾಗಿ, ಇದೇ ವಿಷಯವು ಉತ್ತರ ಪ್ರದೇಶ ಚುನಾವಣೆಯ ಮೇಲೆಯೂ ಪರಿಣಾಮ ಬೀರಬಹುದೇ ಎಂದು ಈ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ ಎಂದು ತಿಳಿದು ಬಂದಿದೆ.

ಭಾನುವಾರ ನಡೆದ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಮುಖ್ಯಸ್ಥ ಜೆ.ಪಿ.ನಡ್ಡಾ, ಉತ್ತರ ಪ್ರದೇಶ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸುನಿಲ್ ಬನ್ಸಲ್ ಮತ್ತು ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಭಾಗವಹಿಸಿದ್ದರು.

ಸಂಘಟನೆ ಮತ್ತು ಸರ್ಕಾರದ ಮಟ್ಟದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿದು ಬಂದಿದೆ.

ದೇಶದ ರಾಜಕೀಯ ಚಿತ್ರಣವನ್ನೇ ಬದಲಿಸಿ 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಆಡಳಿತ ಪಕ್ಷ ಬಿಜೆಪಿಯು ಕೋವಿಡ್‌ನಿಂದಾಗಿ ಅತ್ಯಂತ ದೊಡ್ಡ ಸವಾಲು ಎದುರಿಸುತ್ತಿದೆ. ಉತ್ತರ ಪ್ರದೇಶದಲ್ಲಿ ಗಂಗಾ ನದಿಯಲ್ಲಿ ಹೆಣಗಳು ತೇಲಿ ಬಂದಿರುವ ಚಿತ್ರಗಳೇ ವಿರೋಧ ಪಕ್ಷಗಳಿಗೆ ದೊಡ್ಡ ಅಸ್ತ್ರವನ್ನು ಕೊಟ್ಟಿವೆ. ಗಂಗ

12ನೇ ತರಗತಿ ಪರೀಕ್ಷೆ: ವ್ಯಾಪಕ ಚರ್ಚೆ ಬಳಿಕ ನಿರ್ಧಾರ

ನವದೆಹಲಿ (ಪಿಟಿಐ): 12ನೇ ತರಗತಿ ಪರೀಕ್ಷೆ ನಡೆಸುವ ಕುರಿತು ಅಂತಿಮ ನಿರ್ಧಾರವನ್ನು ವ್ಯಾಪಕ ಸಮಾಲೋಚನೆ ಪ್ರಕ್ರಿಯೆಗಳನ್ನು ನಡೆಸಿ ತೆಗೆದುಕೊಳ್ಳಲಾಗುವುದು ಎಂದು ಸೋಮವಾರ ಸರ್ಕಾರದ ಮೂಲಗಳು ತಿಳಿಸಿವೆ.

'12ನೇ ತರಗತಿ ಪರೀಕ್ಷೆಗಳನ್ನು ನಡೆಸುವ ಕುರಿತು ರಾಜ್ಯಗಳಲ್ಲಿ ಒಮ್ಮತ ಮೂಡಬೇಕಿದೆ. ವ್ಯಾಪಕ ಚರ್ಚೆ ನಡೆಸಿದ ಬಳಿಕ ನಿರ್ಧಾರ ತೆಗೆದುಕೊಳ್ಳಲಾಗುವುದು. ಜೂನ್ 1ರ ವೇಳೆಗೆ ಅಂತಿಮ ನಿರ್ಧಾರ ಪ್ರಕಟಿಸಲಾಗುವುದು' ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಕ್ರಿಯಾಲ್ ನಿಶಾಂಕ್ ತಿಳಿಸಿದ್ದಾರೆ.

ಕೇರಳ: ಭಾಷಾಭಿಮಾನ ಮೆರೆದ ಮಂಜೇಶ್ವರದ ಶಾಸಕ– ವಿಡಿಯೊ ವೈರಲ್

ಕನ್ನಡದಲ್ಲೇ ಪ್ರತಿಜ್ಞಾವಿಧಿ ಸ್ವೀಕರಿಸಿದ ಅಶ್ರಫ್

ಅಶ್ರಫ್

ತಿರುವನಂತರಪುರಂ (ಪಿಟಿಐ): ಕೇರಳದ 15ನೇ ವಿಧಾನಸಭೆ ಅಧಿವೇಶನದ ಮೊದಲ ದಿನವಾದ ಸೋಮವಾರ ನೂತನ ಚುನಾಯಿತ ಸದಸ್ಯರು ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಪೈಕಿ ಮಂಜೇಶ್ವರದ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಕನ್ನಡದಲ್ಲಿ ಪ್ರಮಾಣ ಸ್ವೀಕರಿಸಿ ಭಾಷಾಭಿಮಾನ ಮೆರೆದರು.

'ಎ.ಕೆ.ಎಂ.ಅಶ್ರಫ್ ಹೆಸರಿನವನಾದ ನಾನು.... ಅಲ್ಲಾಹು ಮತ್ತು ಸತ್ಯ ಪ್ರತಿಜ್ಞೆ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸುತ್ತೇನೆ' ಎಂದು ಸ್ಪಷ್ಟವಾದ ಕನ್ನಡದಲ್ಲಿ ಪ್ರತಿಜ್ಞಾವಿಧಿಯನ್ನು ಓದಿದರು. ಅವರ ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

140 ಸದಸ್ಯ ಬಲದ ವಿಧಾನಸಭೆಯಲ್ಲಿ ಸುಮಾರು 136 ಜನರ ಮೊದಲ ದಿನ ಪ್ರಮಾಣ ಸ್ವೀಕರಿಸಿದರು. ಇವರ ಪೈಕಿ 53 ಜನರು ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಕ್ರೀಡಾ ಸಚಿವರು ಆದ ವಿ.ಅಬ್ದುರಹಿಮಾನ್ (ತನೂರ್), ಕೆ.ಬಾಬು (ನೆನ್ಮಾರಾ), ಎಂ.ವಿನ್ಸೆಂಟ್ (ಕೋವಳಂ) ಅವರು ಆರೋಗ್ಯ ಕಾರಣದಿಂದ ಸದನಕ್ಕೆ ಹಾಜರಾಗಿಲ್ಲ.

ಹಂಗಾಮಿ ಸ್ಪೀಕರ್ ಆಗಿದ್ದ ಪಿಟಿಎ ರಹೀಂ ಅವರು ಇಂಗ್ಲಿಷ್ ಅಕ್ಷರಮಾಲೆಯ ಅನುಸಾರ ಸದಸ್ಯರನ್ನು ಆಹ್ವಾನಿಸಿ ಪ್ರಮಾಣವಚನ ಬೋಧಿಸಿದರು.

ಕೆಲ ಸಚಿವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಕೆ.ಎ.ಶೈಲಜಾ ಸ್ಥಾನದಲ್ಲಿ ನೂತನ ಆರೋಗ್ಯ ಸಚಿವೆಯಾಗಿರುವ ವೀಣಾ ಜಾರ್ಜ್ ಅವರು ಸರ್ವಶಕ್ತನ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು. ಕೆಲವರು ಇಂಗ್ಲಿಷ್‌ನಲ್ಲಿ ಹಾಗೂ ಬಹುತೇಕ ಮಂದಿ ಮಾತೃಭಾಷೆ ಮಲಯಾಳಂನಲ್ಲಿಯೇ ಪ್ರಮಾಣವಚನ ಸ್ವೀಕರಿಸಿದರು.

ಆರ್‌ಎಂಪಿ ನಾಯಕಿ, ವಡಕಾರ ಕ್ಷೇತ್ರದಿಂದ ಆಯ್ಕೆಯಾಗಿರುವ ಕೆ.ಕೆ.ರೇಮಾ ಅವರು, ವರ್ಷದ ಹಿಂದೆ ಹತ್ಯೆಯಾಗಿದ್ದ ತಮ್ಮಪತಿ ಚಂದ್ರಶೇಖರನ್ ಅವರ ಚಿತ್ರವಿದ್ದ ಬ್ಯಾಡ್ಜ್ ಧರಿಸಿದ್ದರು. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅವರ ಅಳಿಯ ಪಿ.ಕೆ.ಮೊಹಮ್ಮದ್ ರಿಯಾಸ್ ಒಟ್ಟಿಗೇ ಸದನದಲ್ಲಿ ಕಾಣಿಸಿಕೊಂಡದ್ದು ವಿಶೇಷ.

ಬಾಡಿಗೆಗೆ ಪಡೆದಿದ್ದ ಸ್ಪೈಸ್ ಜೆಟ್ ವಿಮಾನ

ಕೋವಿಡ್ ನಿಯಮ ಉಲ್ಲಂಘಿಸಿ ಆಗಸದಲ್ಲೇ ವಿವಾಹವಾದ ಜೋಡಿ!

ಆಗಸದಲ್ಲೇ ವಿವಾಹವಾದ ಜೋಡಿ
– ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ತಮಿಳುನಾಡಿನ ಜೋಡಿಯೊಂದು ವಿಮಾನವೊಂದನ್ನು ಬಾಡಿಗೆ ಪಡೆದು ಆಗಸದಲ್ಲೇ ವಿವಾಹವಾಗಿದ್ದು, ಕೋವಿಡ್ ನಿಯಮ ಉಲ್ಲಂಘಿಸಿದ ಕಾರಣ ದೂರು ದಾಖಲಾಗಿದೆ.

'ಮದುರೈನ ಜೋಡಿಯೊಂದು ಮೇ 23ರಂದು ಸ್ಪೈಸ್ ಜೆಟ್ ವಿಮಾನವೊಂದನ್ನು ಸುಮಾರು 2 ಗಂಟೆಗಳ ಕಾಲ ಬಾಡಿಗೆ ಪಡೆದು ಸಂಬಂಧಿಕರು ಮತ್ತು ಸ್ನೇಹಿತರ ಸಮ್ಮುಖದಲ್ಲಿ ವಿವಾಹವಾಗಿದೆ. ಆದರೆ, ಈ ಸಮಯದಲ್ಲಿ ಕೋವಿಡ್-19 ಮಾರ್ಗಸೂಚಿಗಳಾದ ಮಾಸ್ಕ್ ಧರಿಸುವಿಕೆ, ದೈಹಿಕ ಅಂತರ ಕಾಪಾಡುವ ನಿಯಮಗಳನ್ನು ಗಾಳಿಗೆ ತೂರಿದೆ' ಎಂದು ಸೋಮವಾರ ಮೂಲಗಳು ತಿಳಿಸಿವೆ.

'ವಿಮಾನದಲ್ಲಿ ಕೋವಿಡ್ ನಿಯಮ ಪಾಲಿಸದ ಕಾರಣಕ್ಕಾಗಿ ಸ್ಪೈಸ್‌ಜೆಟ್ ವಿಮಾನ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ' ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯದ (ಡಿಜಿಸಿಎ) ಮಹಾನಿರ್ದೇಶನಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಮಾನದಲ್ಲಿ ವಿವಾಹವಾದ ಚಿತ್ರಗಳು ಮತ್ತು ವಿಡಿಯೊಗಳು ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗಿವೆ. ಈ ವಿಡಿಯೊ ಮತ್ತು ಚಿತ್ರಗಳಲ್ಲಿ ಜನರು ಪರಸ್ಪರ ಅಂತರ ಮರೆತು ನವದಂಪತಿ ಸಮೀಪದಲ್ಲೇ ನಿಂತಿರುವುದು ಕಾಣುತ್ತದೆ.

'ಮದುರೈನ ಟ್ರಾವೆಲ್ ಏಜೆಂಟ್‌ವೊಬ್ಬರ ಮೂಲಕ ಮೇ 23ರಂದು ಸ್ಪೈಸ್ ಜೆಟ್ ಬೋಯಿಂಗ್ -737 ಚಾರ್ಟರ್ಡ್ ಫ್ಲೈಟ್ ಅನ್ನು ಬುಕ್ ಮಾಡಲಾಗಿತ್ತು. ವಿವಾಹ ನಂತರದ ಸಂತೋಷದ ಸವಾರಿಗಾಗಿ (ಜಾಲಿರೈಡ್) ಗುಂಪೊಂದಕ್ಕೆ ಈ ವಿಮಾನವನ್ನು ಬುಕ್ ಮಾಡಲಾಗಿತ್ತು. ಕೋವಿಡ್ ನಿಯಮ ಪಾಲನೆ ಕುರಿತು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು. ಅಲ್ಲದೇ ಇದರಲ್ಲಿ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಮಾಡಲು ಅನುಮತಿ ನೀಡಿರಲಿಲ್ಲ' ಎಂದು ಸ್ಪೈಸ್ ಜೆಟ್ ವಕ್ತಾರ ತಿಳಿಸಿದ್ದಾರೆ.

ಆಟೊ ಚಾಲಕರ ದಿನಸಿ ಕಿಟ್‌ಗೆ ₹3 ಲಕ್ಷ ನೀಡಿದ ಉಪೇಂದ್ರ ಅಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ನಿಂದಾಗಿ ಸಂಕಷ್ಟಕ್ಕೀಡಾಗಿರುವ ಜನರಿಗೆ ನಟ ಉಪೇಂದ್ರ ಅವರು ಹಲವು ರೀತಿಯಲ್ಲಿ ನೆರವಾಗುತ್ತಿದ್ದಾರೆ. ಮಂಗಳಮುಖಿಯರು, ಆಟೊ ಚಾಲಕರು, ಸಿನಿಮಾ ರಂಗದ ಕಾರ್ಮಿಕರು, ಅರ್ಚಕರು ಹೀಗೆ ಸಾವಿರಾರು ಜನರಿಗೆ ದಿನಸಿ ಕಿಟ್‌ಗಳನ್ನು ವಿತರಿಸುತ್ತಿದ್ದಾರೆ. ಇವರ ಈ ಕಾರ್ಯಕ್ಕೆ ಸ್ವಂತ ಅಣ್ಣ ಸುಧೀಂದ್ರ ಅವರೂ ಇದೀಗ ಕೈಜೋಡಿಸಿದ್ದಾರೆ.

ಉಪೇಂದ್ರ ಅವರ ಅಣ್ಣ ಸುಧೀಂದ್ರ ಅವರು ತಮ್ಮ 26ನೇ ವಿವಾಹ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆಟೊ ಚಾಲಕರಿಗೆ ಕಿಟ್ ವಿತರಿಸಲು ₹3 ಲಕ್ಷ ನೀಡಿದ್ದಾರೆ. ಈ ಕುರಿತು ಟ್ವಿಟರ್‌ನಲ್ಲಿ ಉಪೇಂದ್ರ ಮಾಹಿತಿ ನೀಡಿದ್ದಾರೆ. ಜೊತೆಗೆ ಅಣ್ಣ ಸುಧೀಂದ್ರ ಹಾಗೂ ಅತ್ತಿಗೆ ವೀಣಾ ಅವರ ಫೋಟೊವನ್ನು ಉಪೇಂದ್ರ ಅಪ್‌ಲೋಡ್ ಮಾಡಿ 'ಧನ್ಯವಾದಗಳು' ಎಂದಿದ್ದಾರೆ.

ಕನ್ನಡ ಚಲನಚಿತ್ರರಂಗದ ಸಾವಿರಾರು ಕಾರ್ಮಿಕರು, ಕಲಾವಿದರು ಕೆಲಸವಿಲ್ಲದೇ ಕೋವಿಡ್ ಹೊಡೆತಕ್ಕೆ ತತ್ತರಿಸಿ ಹೋಗಿದ್ದಾರೆ. ಹೀಗಾಗಿ ಈ ಕಾರಣ, ಒಕ್ಕೂಟದ ಎಲ್ಲಾ ಸಂಘಗಳ ಸುಮಾರು ಮೂರು ಸಾವಿರ ಕುಟುಂಬಕ್ಕೆ ದಿನಸಿ ಕಿಟ್ ನೀಡಲು ನಿರ್ಧರಿಸಿದ್ದೇನೆ ಎಂದು ಉಪೇಂದ್ರ ತಿಳಿಸಿದ್ದರು. ಇದರ ಬೆನ್ನಲ್ಲೇ ಖ್ಯಾತ ನಟಿ ಬಿ. ಸರೋಜಾ ದೇವಿ ಅವರು ₹4 ಲಕ್ಷ, ನಟ ಸಾಧುಕೋಕಿಲ ಅವರು ₹2.5 ಲಕ್ಷ ಹಾಗೂ ಹಲವು ನಟರು, ನಿರ್ಮಾಪಕರು ದೇಣಿಗೆ ನೀಡಿ ಉಪೇಂದ್ರ ಅವರ ಕೈಜೋಡಿಸಿದ್ದರು. ಜನಸಾಮಾನ್ಯರೂ ತಮ್ಮ ಕೈಲಾದ ದೇಣಿಗೆ, ವಸ್ತುಗಳನ್ನು ಸಂಕಷ್ಟದಲ್ಲಿರುವ ಜನರಿಗೆ ನೀಡಲು ಉಪೇಂದ್ರ ಅವರಿಗೆ ಒಪ್ಪಿಸುತ್ತಿದ್ದಾರೆ.

ರೈತರ ನೆರವಿಗೂ ಉಪೇಂದ್ರ ಧಾವಿಸಿದ್ದು, ರಾಜ್ಯದ ಹಲವೆಡೆಯಿಂದ ರೈತರಿಂದ ನೇರವಾಗಿ ತರಕಾರಿಗಳನ್ನು ಖರೀದಿಸಿ, ಅದರ ಸಾರಿಗೆ ವೆಚ್ಚವನ್ನೂ ನೀಡಿ ದಿನಸಿ ಕಿಟ್ ಜೊತೆಯಲ್ಲಿ ನೀಡುತ್ತಿದ್ದಾರೆ. ಹಿರಿಯ ಕಲಾವಿದರರಿಗೆ 25 ಕೆ.ಜಿ. ಅಕ್ಕಿ, ಗೋಧಿ ಚೀಲ, ತರಕಾರಿ, ಹಣ್ಣಿನ ಕಿಟ್ ನೀಡುತ್ತಿದ್ದಾರೆ.

ಸೋಂಕಿತರ ಮೇಲೆ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಕುದೂರು ಪಟ್ಟಣದ ಬೈರವದುರ್ಗದಲ್ಲಿನ ಕೋವಿಡ್ ಆರೈಕೆ ಕೇಂದ್ರದಲ್ಲಿರುವ ಸೋಂಕಿತರ ಮೇಲೆ ಸೋಮವಾರ ಕುದೂರು ಗ್ರಾಮ ಪಂಚಾಯಿತಿ ಸದಸ್ಯೆ ಶಿವಮ್ಮ ಅವರ ಪತಿ ರಾಜಣ್ಣ ಎಂಬುವರು ಗುಂಪು ಸೇರಿಸಿಕೊಂಡು ಕಲ್ಲು ತೂರಾಟ ನಡೆಸಿದ್ದಾರೆ.

ಘಟನೆ ಖಂಡಿಸಿ ಸೋಂಕಿತರು ಮಧ್ಯಾಹ್ನದ ಊಟ ತ್ಯಜಿಸಿ ಪ್ರತಿಭಟನೆ ನಡೆಸಿದರು. ಕುದೂರು ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ, ಆರೋಪಿಗಳಿಗೆ ತಿಳಿವಳಿಕೆ ನೀಡಿ ಮುಚ್ಚಳಿಕೆ ಪತ್ರ ಬರೆಸಿಕೊಂಡರು. ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮಾಗಡಿ ತಹಶೀಲ್ದಾರ್ ಬಿ.ಜಿ. ಶ್ರೀನಿವಾಸಪ್ರಸಾದ್ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ

Astrology

ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಮೋಹನ್ ದಾಸ್ ಶರ್ಮ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ, ಜ್ಞಾನಶಕ್ತಿ, ಆರೋಗ್ಯ ಸಮಸ್ಯೆ ತೊಂದರೆಯಿದ್ದರೆ ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ, ನಿಮ್ಮ ಗಂಡ ನಿಮ್ಮ ಮಾತುಗಳನ್ನು ಕೇಳಬೇಕು. ನಿಮ್ಮ ಅತ್ತೆಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ನಿಮ್ಮ ಸೊಸೆಯಿಂದ ನಿಮ್ಮ ಕುಟುಂಬದಲ್ಲಿ ತೊಂದರೆ ಆಗುತ್ತಿದೆಯೇ. ನೀವು ಮಾಡತಕ್ಕಂತಹ ವ್ಯಾಪಾರದಲ್ಲಿ ಲಾಭ ನಷ್ಟ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸಹೋಗಿದ್ದೀರಾ. ವಾಸ್ತುದೋಷ, ಕುಜದೋಷ, ಕಾಳಸರ್ಪದೋಷ, ಮಾಂಗಲ್ಯದೋಷ. ನಿಮ್ಮ ಜನ್ಮಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆಯಾಗುತ್ತಿದ್ದರೆ ನೀವು ಕೊಟ್ಟಂತಹ ಹಣ ನಿಮಗೇ ವಾಪಾಸ್ ಬರಬೇಕು. ನೀವಿಷ್ಟಪಟ್ಟಂತಹ ಸ್ತ್ರೀ / ಪುರುಷ ನಿಮ್ಮಂತೆ ವಶೀಕರಣ ಆಗಬೇಕು. ಗಂಡ ಹೆಂಡತಿ ಕಿರಿಕಿರಿಯಿಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದಿಯೇ. ಅಧಿಕಾರಿಗಳಿಂದ ನೀವು ಮಾಡತಕ್ಕಂತಹ ಕೆಲಸದಲ್ಲಿ ತೊಂದರೆಯಾಗುತ್ತಿದೆಯಾ. ಅಣ್ಣ - ತಮ್ಮಂದಿರ ಅಸ್ತಿಯಲ್ಲಿ ತೊಂದರೆ. ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆಯೇ. ಮರಣ ಭಯವನ್ನು ನಿಮ್ಮ ಕುಟುಂಬದಲ್ಲಿ ಮಾಟಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆಯೇ. ನಿಮ್ಮೆಲ್ಲಾ ಕಠಿಣಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯ ಚಂದ್ರ ಗ್ರಹಣದಿಂದ ಜಪಸಿದ್ಧಿಗಳಿಂದ ಕೇವಲ 48 ಗಂಟೆಗಳಲ್ಲಿ 100% ಶಾಶ್ವತ ಪರಿಹಾರ ಮಾಡುತ್ತಾರೆ. 9663631199 ಮಲ್ಲೇಶ್ವರಂ, ಬೆಂಗಳೂರು .

ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷ್ಯಾಲಯ ಪಂಡಿತ್ ರಾಘವೇಂದ್ರ ಗೂರುಜಿ ನಿಮ್ಮ ಯಾವುದೇ ಸಮಸ್ಯೆ ಇರಲಿ 3 ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ ಮಂತ್ರಾಲಯ 7760909072

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ನುಡಿದಂತೆ ನಡೆಯುವುದು★ "ವಂಶಪಾರಂಪರಿಕ ಜ್ಯೋತಿಷ್ಯರು," ಆರೋಗ್ಯ, ಸಂತಾನ, ಸ್ತ್ರೀಪುರುಷ ವಶೀಕರಣ, ಗಂಡಹೆಂಡತಿ ಕಲಹ, ನಾಗಸಾಧುಗಳ ಭಾನಮತಿ ಪ್ರಯೋಗದಿಂದ 100%ಪರಿಹಾರ. 7829724990

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ||.ವಿವೇಕಾನಂದಜೋಶಿ. 9008968867

ಉದ್ಯೋಗಾವಕಾಶ

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ. ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸಗಳಿಗೆ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9686114647, 9900229091

ವ್ಯಾಪಾರ

Business to Business

Finance

ಮುದ್ರಾ ಯೋಜನೆಯಲ್ಲಿ ಕೃಷಿ ಸ್ಪಿರಾಷ್ಟಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ 9172930942, 9449896870

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವಾಹನ

Four Wheelers Selling

Others

ಟಾಟಾ Intra V10
ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ
INTRA V10
1000 Kg Payload
8.2 x 5.3 ft
33 kW ಇಂಜಿನ್
4.99%* ಬಡ್ಡಿದರ/ 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು ಎಕ್ಸ್‌ಚೇಂಜ್
₹20,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar - 73899 44057
Belgaum - 91088 64572
* ಷರತ್ತುಗಳು ಅನ್ವಯಿಸುತ್ತವೆ.

DH ಪ್ರಜಾವಾಣಿ
BOOK YOUR REMEMBRANCE & OBITUARIES ADVERTISEMENTS IN DECCAN HERALD & PRAJAVANI
Please contact us at :
Santhosh Kumar : 9880856233
Jerry : 9731810277
Ravichandra : 9901641752
Vishal : 9845114560
Tanveer : 9886213331
E-mail: dhclassified@deccanherald.co.in

ಕಲಬುರ್ಗಿ ನಗರದಲ್ಲಿ ಸೋಮವಾರ ಸುರಿದ ಬಿರುಸಿನ ಮಳೆಯಲ್ಲೇ ಬೈಕ್ ಸವಾರ ಮುಂದೆ ಸಾಗಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಸಿಡಿಲು ಬಡಿದು ರೈತ ಸಾವು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರ ಸೇರಿ ಜಿಲ್ಲೆಯಾದ್ಯಂತ ಸೋಮವಾರ ಸಂಜೆ ಉತ್ತಮ ಮಳೆಯಾಯಿತು. ಚನ್ನಗಿರಿ, ಹೊನ್ನಾಳಿ, ಸಾಸ್ವೆಹಳ್ಳಿ, ಜಗಳೂರು, ಹರಿಹರ, ಮಾಯಕೊಂಡ, ಸಂತೇಬೆನ್ನೂರು, ಮಲೇಬೆನ್ನೂರಿನಲ್ಲಿ ಧಾರಾಕಾರ ಮಳೆಯಾಯಿತು.

ಮಲೇಬೆನ್ನೂರು ಸಮೀಪದ ಹುಲುಗಿನಹೊಳೆ ಗ್ರಾಮದಲ್ಲಿ ಸಿಡಿಲು ಬಡಿದು ಯುವ ರೈತ ಕೆ. ನಾಗರಾಜ (40) ಮೃತಪಟ್ಟಿದ್ದಾರೆ. ಹೊಲದಲ್ಲಿ ಭತ್ತದ ಮೂಟೆ ತುಂಬುತ್ತಿದ್ದಾಗ ಸಿಡಿಲು ಬಡಿದಿದೆ. ಅವರ ಸಹೋದರ ವೀರೇಶ ಅವರು ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಜಯನಗರ ಜಿಲ್ಲೆಯ ಉಚ್ಚಂಗಿದುರ್ಗದಲ್ಲೂ ಉತ್ತಮ ಮಳೆಯಾಗಿದೆ.

ಚಿತ್ರದುರ್ಗ ನಗರ ಸೇರಿ ಜಿಲ್ಲೆಯಾದ್ಯಂತ ವಿವಿಧೆಡೆ ಉತ್ತಮ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಬಿರುಸಿನ ಮಳೆ: ಕಲಬುರ್ಗಿ ನಗರದಲ್ಲಿ ಮಧ್ಯಾಹ್ನ ಬಿರುಗಾಳಿ ಸಹಿತ ಕೆಲ ಹೊತ್ತು ಭಾರಿ ಮಳೆ ಸುರಿಯಿತು.

ಜಿಲ್ಲೆಯ ಚಿತ್ತಾಪುರ ಹಾಗೂ ಕಾಳಗಿ ತಾಲ್ಲೂಕಿನ ಹಲವೆಡೆ ಜಿಟಿ ಜಿಟಿ ಮಳೆಯಾಗಿದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿ ಎರಡು ತಾಸಿಗೂ ಅಧಿಕ ಸಮಯ ಸೋಮವಾರ ಜೋರು ಮಳೆ ಸುರಿದಿದೆ. ಮುಳಗುಂದ ಭಾಗದಲ್ಲಿ ಹಾಗೂ ರೋಣ ನರೇಗಲ್‌ನಲ್ಲೂ ರಭಸದ ಮಳೆ ಆಗಿದೆ.

ಮಹಿಳೆಗೆ ಹೊಡೆದ ಅಧಿಕಾರಿ: ಆಕ್ರೋಶ

ಚಿಕ್ಕಮಗಳೂರು: ಮೂಡಿಗೆಯಲ್ಲಿ ಸೋಮವಾರ ಬೆಳಿಗ್ಗೆ ಸೊಪ್ಪು ಖರೀದಿಗೆ ಬಂದಿದ್ದ ಮಹಿಳೆಯೊಬ್ಬರ ಮೇಲೆ ಗ್ರಾಮ ಲೆಕ್ಕಾಧಿಕಾರಿಯೊಬ

ಮಂದಗತಿಯ ವಲಸೆ ಕಾರ್ಮಿಕರ ನೋಂದಣಿ: 'ಸುಪ್ರೀಂ' ಆಕ್ಷೇಪ

ನವದೆಹಲಿ (ಪಿಟಿಐ): ವಲಸೆ ಕಾರ್ಮಿಕರ ನೋಂದಣಿ ಪ್ರಕ್ರಿಯೆ ನಿಧಾನವಾಗಿ ನಡೆಯುತ್ತಿರುವುದಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಆಕ್ಷೇಪ ವ್ಯಕ್ತಪಡಿಸಿದೆ.

ವಲಸೆ ಕಾರ್ಮಿಕರನ್ನು ಗುರುತಿಸುವ ಮತ್ತು ನೋಂದಾಯಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಿದರೆ, ಅವರಿಗೆ ಈ ಸಾಂಕ್ರಾಮಿಕ ಸಮಯದಲ್ಲಿ ಅಗತ್ಯ ನೆರವು ಯೋಜನೆಗಳನ್ನು ವಿಸ್ತರಿಸಬಹುದು ಎಂದು ಕೋರ್ಟ್ ಹೇಳಿದೆ.

ಕೋವಿಡ್-19 ಸಾಂಕ್ರಾಮಿಕದ ಈ ಸಂಕಷ್ಟದ ಸಮಯದಲ್ಲಿ ವಲಸೆ ಕಾರ್ಮಿಕರ ಆಹಾರ ಭದ್ರತೆ, ಹಣ ವರ್ಗಾವಣೆ, ಸಾರಿಗೆ ಸೌಕರ್ಯ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳು ಅಗತ್ಯವಾಗಿ ಒದಗಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಮೂವರು ಸಾಮಾಜಿಕ ಕಾರ್ಯಕರ್ತರು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದರು. ಮನವಿ ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಎಂ.ಆರ್. ಶಾ ಅವರನ್ನೊಳಗೊಂಡ ಪೀಠ ಈ ನಿರ್ದೇಶನ ನೀಡಿದೆ.

ವಲಸೆ ಕಾರ್ಮಿಕರೂ ಸೇರಿ ಎಲ್ಲಾ ಫಲಾನುಭವಿಗಳಿಗೆ ಅಗತ್ಯ ಯೋಜನೆಗಳು ತಲುಪಲೇಬೇಕು. ಹಾಗಾಗಿ ನೋಂದಣಿ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಹಿಸಬೇಕು ಎಂದಿದೆ.

ಮಧ್ಯಾಹ್ನದ ವೇಳೆಗೆ ಭೂ ಪ್ರದೇಶ ಪ್ರವೇಶದ ನಿರೀಕ್ಷೆ • ಗಂಟೆಗೆ 155 ರಿಂದ 165 ಕಿ.ಮೀ. ವೇಗದಲ್ಲಿ ಗಾಳಿ

ಬಾಲಾಸೋರ್‌ಗೆ ಅಪ್ಪಳಿಸಲಿದೆ ಯಸ್ ಚಂಡಮಾರುತ

ಕೋಲ್ಕತ್ತ (ಪಿಟಿಐ): ಹಿಂದೂ ಮಹಾಸಾಗರದಲ್ಲಿ ಸೃಷ್ಟಿಯಾಗಿರುವ 'ಯಸ್' ಚಂಡಮಾರುತವು ಬುಧವಾರ (ಮೇ 26) ಮಧ್ಯಾಹ್ನದ ವೇಳೆಗೆ ಉತ್ತರ ಒಡಿಶಾದ ಬಾಲಾಸೋರ್‌ನಲ್ಲಿ ಭೂಮಿಗೆ ಅಪ್ಪಳಿಸುವ ಸಾಧ್ಯತೆ ಇದೆ. ಆ ಸಂದರ್ಭದಲ್ಲಿ ಗಾಳಿಯ ವೇಗವು ಗಂಟೆಗೆ 155ರಿಂದ 165 ಕಿ.ಮೀ.ನಷ್ಟಿರುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ ಅಂದಾಜಿಸಿದೆ.

ಚಂಡಮಾರುತವು ಒಡಿಶಾದ ಪಾರಾದೀಪ್ ಹಾಗೂ ಪಶ್ಚಿಮ ಬಂಗಾಳದ ಸಾಗರ ದ್ವೀಪವನ್ನು ದಾಟಿ ಹೋಗಲಿದೆ. ಪಶ್ಚಿಮ ಬಂಗಾಳದ ಉತ್ತರ ಮತ್ತು ದಕ್ಷಿಣ 24 ಪರಗಣ ಜಿಲ್ಲೆಗಳಲ್ಲೂ ಗಂಟೆಗೆ 90ರಿಂದ 100 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ ಎಂದು ಕೋಲ್ಕತ್ತ ಪ್ರಾದೇಶಿಕ ಹವಾಮಾನ ಕೇಂದ್ರದ ಉಪನಿರ್ದೇಶಕ ಸಂಜೀವ್ ಬಂದೋಪಾಧ್ಯಾಯ ತಿಳಿಸಿದ್ದಾರೆ.

ಬಂದರು ಸ್ಥಗಿತ: ಕೋಲ್ಕತ್ತ ಬಂದರಿನಲ್ಲಿ ಮಂಗಳವಾರದಿಂದಲೇ ಎಲ್ಲಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗುವುದು. ಮಂಗಳವಾರ ಬೆಳಿಗ್ಗೆಯಿಂದ ಹಡಗುಗಳ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ. ಮಧ್ಯಾಹ್ನ 2 ಗಂಟೆಯಿಂದ ಸರಕು ನಿರ್ವಹಣೆಯನ್ನು ಸ್ಥಗಿತಗೊಳಿಸಲಾಗುವುದು. ಕಾರ್ಮಿಕರನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗುವುದು ಎಂದು ಕೋಲ್ಕತ್ತ ಪೋರ್ಟ್ ಟ್ರಸ್ಟ್ ಅಧ್ಯಕ್ಷ ವಿನೀತ್ ಕುಮಾರ್ ತಿಳಿಸಿದ್ದಾರೆ.

ಮೀನುಗಾರಿಕೆಗಾಗಿ ಆಳ ಸಮುದ್ರಕ್ಕೆ ಹೋಗಿದ್ದ ಎಲ್ಲಾ 265 ಬೋಟ್‌ಗಳು ಈಗಾಗಲೇ ತೀರಕ್ಕೆ ಮರಳಿವೆ ಎಂದು ತಿಳಿಸಿದ್ದಾರೆ.

ಯಸ್ ಚಂಡಮಾರುತದ ಪರಿಣಾಮವಾಗಿ ಹೌರಾ ಸೇತುವೆ ಬಳಿ ಸೋಮವಾರ ಬಿರುಗಾಳಿ ರೀತಿಯ ವಾತಾವರಣ ಉಂಟಾಗಿತ್ತು —ಪಿಟಿಐ ಚಿತ್ರ

ತಾರತಮ್ಯ: ಮಮತಾ ಆರೋಪ

ಯಸ್ ಚಂಡಮಾರುತ ಎದುರಿಸಲು ಸಿದ್ಧತೆ ಮಾಡಿಕೊಳ್ಳುವ ಸಲುವಾಗಿ ಸಣ್ಣ ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ ಒಡಿಶಾಗೆ ತಲಾ ₹600 ಕೋಟಿ ಮುಂಗಡ ನೀಡಿದ್ದರೆ, ಪಶ್ಚಿಮ ಬಂಗಾಳಕ್ಕೆ ಕೇವಲ ₹400 ಕೋಟಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ದೊಡ್ಡ ರಾಜ್ಯವಾಗಿದ್ದರೂ ನಾವು ಪದೇಪದೇ ಯಾಕೆ ಸೌಲಭ್ಯಗಳಿಂದ ವಂಚಿತರಾಗುತ್ತೇವೆ? ಎಲ್ಲಾ ಸಹಕಾರವನ್ನು ನೀಡುವುದಾಗಿ ಅಮಿತ್ ಶಾ ಅವರು ಸಭೆಯಲ್ಲಿ ಭರವಸೆ ನೀಡಿದ್ದರು. ಆದರೆ ಮುಂಗಡ ಹಣವನ್ನು ಘೋಷಿಸುವ ಸಂದರ್ಭದಲ್ಲಿ ಬಂಗಾಳಕ್ಕೆ ಕಡಿಮೆ ಹಣ ನೀಡಿದ್ದಾರೆ. ಅಲ್ಲದೆ ವೈಜ್ಞಾನಿಕವಾಗಿಯೇ ಇದನ್ನು ನಿರ್ಧರಿಸಲಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ' ಎಂದು ಅವರು ಮಾಧ್ಯಮ ಪ್ರತಿನಿಧಿಗಳ ಮುಂದೆ ಹೇಳಿದ್ದಾರೆ.

ಅಮಿತ್ ಶಾ ಸಭೆ, ಸಿದ್ಧತೆಗಳ ಪರಿಶೀಲನೆ

ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರು ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು ಮತ್ತು ಅಂಡಮಾನ್ ನಿಕೋಬಾರ್‌ನ ಲೆಫ್ಟಿನೆಂಟ್ ಗವರ್ನರ್ ಜತೆಗೆ ವಿಡಿಯೊ ಸಂವಾದ ನಡೆಸಿ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದ್ದಾರೆ.

ಪಶ್ಚಿಮ ಬಂಗಾಳ, ಒಡಿಶಾ ಮತ್ತು ಆಂಧ್ರಪ್ರದೇಶದ ಕರಾವಳಿಯಲ್ಲಿರುವ ಆಮ್ಲಜನಕ ತಯಾರಿಕಾ ಘಟಕಗಳ ಸುರಕ್ಷತೆಗೆ ಹೆಚ್ಚಿನ ಗಮನ ನೀಡುವಂತೆ ಅವರು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದಾರೆ. ಕೋವಿಡ್ ಆಸ್ಪತ್ರೆಗಳಿಗೆ ಯಾವುದೇ ಸಮಸ್ಯೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆಯೂ ಅವರು ಮನವಿ ಮಾಡಿದ್ದಾರೆ. ಗೃಹ ಸಚಿವಾಲಯವು 24 ಗಂಟೆಯೂ ಕಾರ್ಯ ನಿರ್ವಹಿಸುವ ನಿಯಂತ್ರಣ ಕೊಠಡಿಯನ್ನು ತೆರೆದಿದ್ದು, ಅಗತ್ಯ ನೆರವಿಗಾಗಿ ಈ ಕೇಂದ್ರವನ್ನು ಸಂಪರ್ಕಿಸಲು ಕೋರಿದರು.

ಪೂರ್ವ ಕರಾವಳಿಯ ಬಂದರುಗಳಲ್ಲಿ ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಬಂದರು ಮತ್ತು ಜಲಸಾರಿಗೆ ಖಾತೆಯ ರಾಜ್ಯ ಸಚಿವ ಮನ್‌ಸುಖ್ ಮಾಂಡವೀಯ ಪರಿಶೀಲನೆ ನಡೆಸಿದರು. ಪ್ರಾಣ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗದಂತೆ ಗರಿಷ್ಠ ಜಾಗ್ರತೆ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಾರ್ಜ್ ದುರಂತ: ಮೃತರ ಸಂಖ್ಯೆ 86ಕ್ಕೆ

ಮುಂಬೈ (ಪಿಟಿಐ): ತೌತೆ ಚಂಡಮಾರುತದ ಸಂದರ್ಭದಲ್ಲಿ ಅರಬ್ಬಿ ಸಮುದ್ರದಲ್ಲಿ ಮುಳುಗಿದ ಪಿ305 ಬಾರ್ಜ್ ಮತ್ತು ವರಪ್ರದಾ ಆ್ಯಂಕರ್ ನಿರ್ವಹಣೆ ದೋಣಿಯಿಂದ ನಾಪತ್ತೆಯಾದವರ ಪೈಕಿ 16 ಮಂದಿಯ ಮೃತದೇಹಗಳು ಗುಜರಾತ್ ಮತ್ತು ಮಹಾರಾಷ್ಟ್ರ ಕರಾವಳಿಯಲ್ಲಿ ಭಾನುವಾರದ ಬಳಿಕ ಪತ್ತೆಯಾಗಿವೆ ಎಂದು ನೌಕಾಪಡೆಯು ಸೋಮವಾರ ತಿಳಿಸಿದೆ. ಇದರೊಂದಿಗೆ ನಾಪತ್ತೆಯಾಗಿದ್ದ ಎಲ್ಲ 86 ಮಂದಿಯ ಮೃತದೇಹ ಪತ್ತೆ ಆದಂತಾಗಿದೆ.

ಬಾರ್ಜ್‌ನಲ್ಲಿದ್ದ 261 ಮಂದಿ ಮತ್ತು ವರಪ್ರದಾ ದೋಣಿಯಲ್ಲಿದ್ದ 13 ಮಂದಿ ಇದೇ 17ರಂದು ನಾಪತ್ತೆಯಾಗಿದ್ದರು. ಅವರ ಪೈಕಿ ಬಾರ್ಜ್‌ನಲ್ಲಿದ್ದ 186 ಹಾಗೂ ದೋಣಿಯಲ್ಲಿದ್ದ ಇಬ್ಬರನ್ನು ನೌಕಾಪಡೆ ಮತ್ತು ಕರಾವಳಿ ಕಾವಲು ಪಡೆಯು ರಕ್ಷಿಸಿತ್ತು.

ವರಪ್ರದಾ ದೋಣಿಯನ್ನು ಐಎನ್‌ಎಸ್ ಮಕರ ನೌಕೆಯು ಸೋಮವಾರ ಪತ್ತೆ ಮಾಡಿದೆ. ಬಾರ್ಜ್ ಮುಳುಗಿದ ಸ್ಥಳದಲ್ಲಿಯೇ ಅದರ ಅವಶೇಷಗಳನ್ನು ನೌಕೆಯು ಶನಿವಾರವೇ ಗುರುತಿಸಿದೆ.

ದೆಹಲಿ ಪೊಲೀಸರಿಂದ ಟ್ವಿಟರ್ ಸಂಸ್ಥೆಗೆ ಪ್ರಶ್ನೆ

ಟ್ವೀಟ್ ತಿರುಚಿದ್ದು ಎಂದು ವರ್ಗೀಕರಿಸಿದ್ದು ಹೇಗೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಮುಖಂಡ ಸಂಬಿತ್ ಪಾತ್ರಾ ಅವರು ಮಾಡಿದ್ದ ಟ್ವೀಟ್‌ನಲ್ಲಿ ಲಗತ್ತಿಸಲಾಗಿದ್ದ ಟೂಲ್‌ಕಿಟ್ ಅನ್ನು ತಿರುಚಲಾಗಿದೆ ಎಂಬುದಾಗಿ ವರ್ಗೀಕರಿಸಿದ್ದು ಹೇಗೆ ಎಂದು ದೆಹಲಿ ಪೊಲೀಸರು ಟ್ವಿಟರ್ ಸಂಸ್ಥೆಯನ್ನು ಪ್ರಶ್ನಿಸಿದ್ದಾರೆ. ಇದರ ಹಿಂದಿರುವ ಸತ್ಯವನ್ನು ಬಹಿರಂಗಪಡಿಸುವಂತೆ ಕೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಸರ್ಕಾರವನ್ನು ಗುರಿಯಾಗಿಸಲು ಕಾಂಗ್ರೆಸ್ ಸಿದ್ಧಪಡಿಸಿದೆ ಎಂದು ಹೇಳಲಾದ 'ಟೂಲ್‌ಕಿಟ್' ಬಗ್ಗೆ ಪಾತ್ರಾ ಅವರು ಮಾಡಿದ್ದ ಟ್ವೀಟ್ ಕುರಿತು ವಿಶೇಷ ಘಟಕವು ತನಿಖೆ ನಡೆಸುತ್ತಿದೆ ಎಂದು ವಕ್ತಾರರು ತಿಳಿಸಿದ್ದಾರೆ. ಟ್ವಿಟರ್ ಸಂಸ್ಥೆಯು ಪಾತ್ರಾ ಅವರ ಟ್ವೀಟ್ ತಿರುಚಿದ್ದು ಎಂದು ಯಾವ ಆಧಾರದ ಮೇಲೆ ನಿರ್ಧರಿಸಿದೆ ಎಂದು ಪ್ರಶ್ನಿಸಲಾಗಿದೆ. 'ತನಿಖೆಯ ಭಾಗವಾಗಿ ಈ ಪ್ರಶ್ನೆಗೆ ಉತ್ತರದ ಅಗತ್ಯವಿದೆ. ತನಿಖೆ ನಡೆಸುತ್ತಿರುವ ವಿಶೇಷ ಘಟಕವು ಸತ್ಯವನ್ನು ತಿಳಿಯಬಯಸಿದೆ. ಟ್ವಿಟರ್ ಇದಕ್ಕೆ ಸ್ಪಷ್ಟನೆ ನೀಡಬೇಕು' ಎಂದು ಪೊಲೀಸ್ ಇಲಾಖೆಯ ವಕ್ತಾರರು ತಿಳಿಸಿದ್ದಾರೆ.

ಕಾಂಗ್ರೆಸ್ ನೀಡಿದ ದೂರು ಆಧರಿಸಿ, ಪಾತ್ರಾ ಹಾಗೂ ಕೆಲವರ ಟ್ವೀಟ್‌ಗಳಿಗೆ 'ತಿರುಚಿದ ಮಾಹಿತಿ' ಎಂಬ ಟ್ಯಾಗ್ ಅನ್ನು ಟ್ವಿಟರ್ ಸೇರಿಸಿತ್ತು. ತನಿಖೆಯ ಮೇಲೆ ಪರಿಣಾಮ ಬೀರುವ ಕಾರಣ, ಟ್ಯಾಗ್ ಅನ್ನು ತೆಗೆಯುವಂತೆ ಕೇಂದ್ರ ಸರ್ಕಾರವು ಟ್ವಿಟರ್‌ಗೆ ಸೂಚಿಸಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ಪರಿಸ್ಥಿತಿಯನ್ನು ಸೂಕ್ತವಾಗಿ ನಿರ್ವಹಿಸಿಲ್ಲ ಎಂಬುದಾಗಿ ಅಪಪ್ರಚಾರ ನಡೆಸಲು 'ಟೂಲ್‌ಕಿಟ್' ಸೃಷ್ಟಿಸಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಬಿಜೆಪಿಯೇ ಈ ಟೂಲ್‌ಕಿಟ್ ಸೃಷ್ಟಿಸಿದೆ ಎಂದು ಕಾಂಗ್ರೆಸ್ ಪ್ರತ್ಯಾರೋಪ ಮಾಡಿದೆ. ಈ ವಿಚಾರವಾಗಿ ಕಾಂಗ್ರೆಸ್-ಬಿಜೆಪಿ ವಾಕ್ಸಮರದಲ್ಲಿ ತೊಡಗಿವೆ.

ಕೇಂದ್ರದ ಕೃಷಿ ಕಾನೂನುಗಳಿಗೆ ವಿರೋಧ; ರೈತ ಪ್ರತಿಭಟನೆಗೆ ಆರು ತಿಂಗಳು ಪೂರ್ತಿ

ನಾಳೆ ಕರಾಳ ದಿನ: ಗಡಿಯತ್ತ ರೈತರ ಪಯಣ

ಚಂಡೀಗಡ (ಪಿಟಿಐ/ರಾಯಿಟರ್ಸ್): ಕೇಂದ್ರದ ಕೃಷಿ ಕಾನೂನುಗಳನ್ನು ವಿರೋಧಿಸಿ ದೆಹಲಿ ಗಡಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಆರು ತಿಂಗಳು ತುಂಬುತ್ತಿರುವುದರಿಂದ, ಮೇ 26 ರಂದು ಕರಾಳ ದಿನ ಆಚರಿಸಲು ತೀರ್ಮಾನಿಸಲಾಗಿದೆ. ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಪಂಜಾಬ್‌ನ ವಿವಿಧ ಪ್ರದೇಶಗಳಿಂದ ರೈತರು ದೆಹಲಿ ಗಡಿಯತ್ತ ದೊಡ್ಡ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿದ್ದಾರೆ ಎಂದು ರೈತ ಮುಖಂಡರು ಹೇಳಿದ್ದಾರೆ.

ಕೇಂದ್ರ ಜಾರಿ ಮಾಡಿರುವ ಮೂರು ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ, ದೆಹಲಿ ಹೊರಭಾಗದ ಸಿಂಘು, ಟಿಕ್ರಿ ಹಾಗೂ ಗಾಜಿಪುರ್ ಗಡಿಗಳಲ್ಲಿ ರೈತರು ಕಳೆದ ನವೆಂಬರ್ ತಿಂಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ಕೇಂದ್ರ ಹಾಗೂ ರೈತರ ಮಧ್ಯೆ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದರೂ ಜನವರಿ 22ರ ನಂತರ ಮಾತುಕತೆ ನಡೆದಿಲ್ಲ. ಮಾತುಕತೆಯನ್ನು ಪುನರಾರಂಭಿಸುವಂತೆ ಸಂಯುಕ್ತ ಕಿಸಾನ್ ಮೋರ್ಚಾ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶುಕ್ರವಾರ ಪತ್ರ ಬರೆದಿದೆ.

'ದೆಹಲಿ ಗಡಿಗಳತ್ತ ದೊಡ್ಡ ಸಂಖ್ಯೆಯಲ್ಲಿ ರೈತರು ಬರುತ್ತಿದ್ದಾರೆ. ಮಹಿಳೆಯರು, ಮಕ್ಕಳು ಸಹ ಅಗತ್ಯ ವಸ್ತುಗಳೊಂದಿಗೆ ದೆಹಲಿಯ ಗಡಿಯತ್ತ ಪ್ರಯಾಣ ಆರಂಭಿಸಿದ್ದಾರೆ. ಪ್ರತಿ ಭಾನುವಾರ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ರೈತರ ಗುಂಪುಗಳು ಗಡಿಯತ್ತ ಹೋಗುತ್ತವೆ. ಒಂದು ವಾರದ ನಂತರ ಅವರು ಮರಳುತ್ತಾರೆ ಮತ್ತು ಹೊಸ ಗುಂಪುಗಳು ಅವರ ಸ್ಥಾನವನ್ನು ತುಂಬುತ್ತವೆ' ಎಂದು ಭಾರತ್ ಕಿಸಾನ್ ಯೂನಿಯನ್‌ನ ಮುಖಂಡರು ಹೇಳಿದ್ದಾರೆ.

ಪ್ರತಿಭಟನೆ ಬೇಡ: ಮನವಿ

ಪ್ರತಿಭಟನೆಯಲ್ಲಿ ಸಾವಿರಾರು ಜನರು ಸೇರುವುದರಿಂದ ಕೊರೊನಾ ಸೋಂಕು ಪಸರಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ಪ್ರತಿಭಟನೆಯನ್ನು ಕೈಬಿಡಬೇಕೆಂದು ಹಲವು ನಾಯಕರು ರೈತರಲ್ಲಿ ಮನವಿ ಮಾಡಿದ್ದಾರೆ.

'ದಯವಿಟ್ಟು ಬೇಜವಾಬ್ದಾರಿಯುತ ವರ್ತನೆ ತೋರಬೇಡಿ. ಜನರ ಜೀವವನ್ನೇ ಅಪಾಯಕ್ಕೆ ಒಡ್ಡಬಲ್ಲ ಇಂಥ ಪ್ರತಿಭಟನೆ ಸ್ವೀಕಾರಾರ್ಹವಲ್ಲ' ಎಂದು ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಹೇಳಿದ್ದಾರೆ.

ಕಾಂಗ್ರೆಸ್ ಸೇರಿದಂತೆ 12 ರಾಜಕೀಯ ಪಕ್ಷಗಳು ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿವೆ.

ಈ ತಿಂಗಳ ಆರಂಭದಲ್ಲಿ ಹಿಂಸಾತ್ಮಕ ಸಂಘರ್ಷ ನಡೆಸಿದ ಆರೋಪದಲ್ಲಿ 300 ರೈತರ ವಿರುದ್ಧ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ಇದನ್ನು ಖಂಡಿಸಿ ರೈತರು ಹರಿಯಾಣದ ಹಿಸಾರ್‌ನಲ್ಲಿ ಸೋಮವಾರ ಭಾರಿ ಪ್ರತಿಭಟನೆ ನಡೆಸಿದ್ದಾರೆ —ಪಿಟಿಐ ಚಿತ್ರ

ಶಿಲೀಂಧ್ರ ಸೋಂಕಿಗೆ ಕನ್ನಡಿಗನ ಚುಚ್ಚುಮದ್ದು

ಒಂದನೇ ಪುಟದಿಂದ

'ಉತ್ಪನ್ನದ ಮರು ಅಭಿವೃದ್ಧಿಗೆ ಸಂಬಂಧಿಸಿದಂತೆ ಆ ಸಂದರ್ಭದಲ್ಲಿ ಯಾವುದೇ ಮಾರ್ಗಸೂಚಿ ಇರಲಿಲ್ಲ. ಇದನ್ನು ಮತ್ತೆ ಉತ್ಪಾದಿಸಲು ಅಮೆರಿಕದ ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (ಎಫ್‌ಡಿಎ) ಹಾಗೂ ಯುರೋಪಿಯನ್ ಮೆಡಿಕಲ್ ಏಜೆನ್ಸಿಯವರ ಅನುಮತಿ ಪಡೆಯಬೇಕಿತ್ತು. ಅವರು ಈ ಉತ್ಪನ್ನ ಸರಿ ಇದೆಯೋ, ಇಲ್ಲವೋ ಎಂದು ಹೇಳುತ್ತಾರೆಯೇ ವಿನಾ ತಂತ್ರಜ್ಞಾನದ ಬಗ್ಗೆ ಯಾವ ಮಾಹಿತಿಯನ್ನೂ ಹಂಚಿಕೊಳ್ಳುವುದಿಲ್ಲ. ಮೂಲ ಉತ್ಪನ್ನದ ಸೂತ್ರದ (ಫಾರ್ಮುಲಾ) ಆಧಾರದ ಮೇಲೆ ವೈದ್ಯಕೀಯ ಪ್ರಯೋಗ (ಕ್ಲಿನಿಕಲ್ ಟ್ರಯಲ್) ನಡೆಸಿ ಉತ್ಪನ್ನ ತಯಾರಿಸಿದ್ದೆವು' ಎಂದರು.

'ದೇಹದಲ್ಲಿ ಶಿಲೀಂಧ್ರ ಸೋಂಕು ಮೊದಲು ದಾಳಿ ಮಾಡುವುದು ಶ್ವಾಸಕೋಶ, ಯಕೃತ್ತು ಹಾಗೂ ಉದರದೊಳಗಿನ ತೊರಳೆ (ಸ್ಪ್ಲೀನ್) ಮೇಲೆ. ಈ ಚುಚ್ಚುಮದ್ದು ಮೂರು ಭಾಗಗಳ ಮೇಲೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ' ಎಂದರು.

'ಆ್ಯಂಫೊಟೆರಿಸಿನ್ ಬಿ ಯು ಚುಚ್ಚುಮದ್ದುಗಳ ಮೂಲವಾಗಿದ್ದು, ಸಾರ್ವಜನಿಕವಾಗಿ ಲಭ್ಯವಿರುತ್ತದೆ. ಇದನ್ನು ಬಳಸಿಕೊಂಡು ನಾಲ್ಕು ಬಗೆಯ ಚುಚ್ಚುಮದ್ದುಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಮೊದಲನೆಯದು ಸಾಂಪ್ರದಾಯಿಕ ಉತ್ಪನ್ನ. ಎರಡನೇಯದು ಲೈಪೊಸೋಮಲ್ ಆ್ಯಂಫೊಟೆರಿಸಿನ್ ಇಂಜೆಕ್ಷನ್‌ಆಗಿದ್ದು ಇದು, ಸಾಮಾನ್ಯ ಇಂಜೆಕ್ಷನ್‌ಗಿಂತ 75 ಪಟ್ಟು ಹೆಚ್ಚು ಪರಿಣಾಮಕಾರಿ. ಮೂರನೆಯದು ಲಿಪಿಡ್ ಕಾಂಪ್ಲೆಕ್ಸ್. ಇದು ಎರಡನೆಯದ್ದಕ್ಕಿಂತ 20 ಪಟ್ಟು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇನ್ನು, ಆ್ಯಂಫೊಟೆರಿಸಿನ್ ಎಮಲ್ಷನ್, ಸಾಮಾನ್ಯ ಇಂಜೆಕ್ಷನ್‌ಗಿಂತ 150 ಪಟ್ಟು ಹೆಚ್ಚು ಸುರಕ್ಷಿತವಾಗಿದೆ' ಎಂದರು.

ಲಿಪಿಡ್ ಕಾಂಪ್ಲೆಕ್ಸ್ ಮತ್ತು ಆ್ಯಂಫೊಟೆರಿಸಿನ್ ಎಮಲ್ಷನ್ ಉತ್ಪನ್ನದ ಹಕ್ಕುಸ್ವಾಮ್ಯ ಶ್ರೀಕಾಂತ್ ಅವರ ಹೆಸರಿನಲ್ಲಿಯೇ ಇದೆ.

ಕುಂದಾಪುರದ ಕುಡಿ

ಬೆಂಗಳೂರಿನ ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ 1975ರಲ್ಲಿ ಬಿ.ಫಾರ್ಮಾ ಪೂರೈಸಿದ ಶ್ರೀಕಾಂತ್ ಪೈ ಅವರು, 1977ರಲ್ಲಿ ಮಣಿಪಾಲ್ ಫಾರ್ಮಸಿ ಕಾಲೇಜಿನಲ್ಲಿ ಎಂ.ಫಾರ್ಮಾ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

'1977ರ ಸಂದರ್ಭದಲ್ಲಿ ಕರ್ನಾಟಕದಲ್ಲಿ ಉದ್ಯೋಗಾವಕಾಶಗಳು ಕಡಿಮೆ ಇದ್ದವು. ಮುಂಬೈನಲ್ಲಿ ಸಹೋದರಿಯ ಮನೆ ಇದ್ದುದರಿಂದ ಅಲ್ಲಿಯೇ ಕೆಲಸಕ್ಕಾಗಿ ತೆರಳಿದೆ. ವಿವಿಧ ಕಂಪನಿಗಳಲ್ಲಿ ಕೆಲಸ ಮಾಡಿದ ನಂತರ ಭಾರತ್ ಸೀರಂ ಕಂಪನಿಗೆ ಸೇರಿ 17 ವರ್ಷ ಕೆಲಸ ಮಾಡಿದ್ದೇನೆ' ಎಂದ ಪೈ ಅವರು, ಸದ್ಯ ಮುಂಬೈನಲ್ಲಿಯೇ ವಿಶ್ರಾಂತ ಜೀವನ ಸಾಗಿಸುತ್ತಿದ್ದಾರೆ.

ಶಸ್ತ್ರಚಿಕಿತ್ಸೆ ವೇಳೆ ರೋಗಿಯ ಪ್ರಜ್ಞೆ ತಪ್ಪಿಸಲು (ಅನಸ್ತೇಶಿಯಾ) ಬಳಸುವ ಪ್ರೊಟೊಕಾಲ್ ಚುಚ್ಚುಮದ್ದು ಸೇರಿದಂತೆ ವಿವಿಧ ಔಷಧ ಉತ್ಪನ್ನಗಳಿಗೆ ಸಂಬಂಧಿಸಿದ 16 ಹಕ್ಕುಸ್ವಾಮ್ಯಗಳು ಶ್ರೀಕಾಂತ್ ಪೈ ಹೆಸರಿನಲ್ಲಿವೆ.

ರಾಜ್ಯ ಕ್ರಿಕೆಟ್ ಸಂಸ್ಥೆಗಳಿಂದ ಲಭಿಸದ ಆಟಗಾರರ ಮಾಹಿತಿ: ಬಿಸಿಸಿಐ ಖಜಾಂಜಿ ಅರುಣ್

ರಣಜಿ: ಕೈಸೇರದ ಪರಿಹಾರ ಧನ

ನವದೆಹಲಿ (ಪಿಟಿಐ): ಕೋವಿಡ್-19ರಿಂದಾಗಿ ಕಳೆದ ಬಾರಿ ರದ್ದಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪರಿಹಾರ ಮೊತ್ತ ಇನ್ನೂ ಆಟಗಾರರ ಕೈಸೇರಲಿಲ್ಲ. ಟೂರ್ನಿಯಲ್ಲಿ ಆಡಬೇಕಾಗಿದ್ದವರ ಮಾಹಿತಿಯನ್ನು ರಾಜ್ಯ ಸಂಸ್ಥೆಗಳು ಸಲ್ಲಿಸದ ಕಾರಣ ಹಣ ಬಿಡುಗಡೆ ಮಾಡಲು ಆಗಲಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಇತರ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಪಾಲ್ಗೊಂಡ ಆಟಗಾರರಿಗೆ ಸಿಗಬೇಕಾಗಿರುವ ಸಂಭಾವನೆಯ ಮೊತ್ತ ಕೆಲವು ವರ್ಷಗಳಿಂದ ಬಿಡುಗಡೆಯಾಗಲಿಲ್ಲ. ಈ ವರ್ಷದ ವಿಜಯ್ ಹಜಾರೆ ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿಗೆ ಸಂಬಂಧಿಸಿದ ಮೊತ್ತವನ್ನು ಮಾತ್ರ ಬಿಡುಗಡೆ ಮಾಡಲಾಗಿದೆ ಎಂದು ಬಿಸಿಸಿಐ ಖಜಾಂಚಿ ಅರುಣ್ ಧುಮಲ್ ತಿಳಿಸಿದ್ದಾರೆ.

ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ರನ್ನರ್ ಅಪ್ ಆದ ಭಾರತ ತಂಡಕ್ಕೆ ಬಿಸಿಸಿಐನಿಂದ ಹಣ ವರ್ಗಾವಣೆ ಆಗಲಿಲ್ಲ ಎಂದು ಇತ್ತೀಚೆಗೆ ಇಂಗ್ಲೆಂಡ್‌ನ 'ಟೆಲಿಗ್ರಾಫ್' ವರದಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ವಾರದ ಒಳಗೆ ಹಣ ನೀಡುವುದಾಗಿ ಬಿಸಿಸಿಐ ತಿಳಿಸಿತ್ತು. ಇದರ ಬೆನ್ನಲ್ಲೇ ಪುರುಷರ ಮತ್ತು ಮಹಿಳೆಯರ ವಿವಿಧ ಟೂರ್ನಿಗಳಿಗೆ ಸಂಬಂಧಿಸಿದ ಮೊತ್ತ ಬಾಕಿ ಇದೆ ಎಂಬುದು ಬಹಿರಂಗವಾಗಿದೆ.

'ಎಷ್ಟು ಟೂರ್ನಿಗಳಲ್ಲಿ ಯಾರೆಲ್ಲ ಆಡಿದ್ದಾರೆ, ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿ ಇದ್ದವರು ಯಾರು ಎಂಬಿತ್ಯಾದಿ ಮಾಹಿತಿಯನ್ನು ರಾಜ್ಯ ಸಂಸ್ಥೆಗಳು ನೀಡಬೇಕು. ಆದರೆ ಈ ವರೆಗೆ ಇಂಥ ಯಾವ ವಿವರವೂ ಬಂದಿಲ್ಲ' ಎಂದು ಧುಮಾಲ್ ವಿವರಿಸಿದ್ದಾರೆ.

₹ 20 ಲಕ್ಷದಿಂದ ₹ 10 ಕೋಟಿ ವರೆಗೆ ಗಳಿಸಿರುವ ಆಟಗಾರರು ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿದ್ದರು. ಆದರೆ ಐಪಿಎಲ್ ತಂಡಗಳಲ್ಲಿ ಇಲ್ಲದ ಸುಮಾರು 700 ಆಟಗಾರರು ದೇಶಿ ಟೂರ್ನಿಗಳಿಂದ ಸಿಗುವ ಸಂಭಾವನೆಯನ್ನೇ ನಂಬಿ ಕೊಂಡು ಇರುತ್ತಾರೆ. ಪೂರ್ತಿ ದೇಶಿ ಋತುವಿನಲ್ಲಿ ಆಡಿದರೆ ಅವರಿಗೆ ₹ 10 ಲಕ್ಷದಿಂದ ₹ 20 ಲಕ್ಷದ ವರೆಗೆ ಸಿಗುತ್ತದೆ. ಈ ಪೈಕಿ ಗರಿಷ್ಠ ಸಂಭಾವನೆ ಗಳಿಸುವುದು ರಣಜಿ ಟ್ರೋಫಿಯಿಂದ. ಪಂದ್ಯವೊಂದಕ್ಕೆ ಗರಿಷ್ಠ ₹ 1.40 ಲಕ್ಷದ ವರೆಗೂ ಸಿಗುತ್ತದೆ.

'ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಪರಿಹಾರ ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಖಜಾಂಚಿ ಸರಿಯಾಗಿಯೇ ಹೇಳಿದ್ದಾರೆ. ಯಾರಿಗೆಲ್ಲ ಮೊತ್ತ ಸಂದಾಯ ಆಗಬೇಕು ಎಂದು ಯಾರು ಬಲ್ಲ. ಈ ಹಿನ್ನೆಲೆಯಲ್ಲಿ ಸಮರ್ಪಕವಾದ ಮಾಹಿತಿ ಬೇಕಾಗುತ್ತದೆ' ಎಂದು ಮಾಜಿ ಆಟಗಾರರೊಬ್ಬರು ಹೇಳಿದರು.

ಪ್ರಸಾರ ಹಕ್ಕುಗಳ ಮಾರಾಟದಿಂದ ಬಂದ ಹಣದ ಒಂದು ಭಾಗವನ್ನು ಬಿಸಿಸಿಐ ಆಟಗಾರರಿಗಾಗಿ ತೆಗೆದಿರಿಸುತ್ತದೆ. ವಾರ್ಷಿಕ ಲೆಕ್ಕಪತ್ರಗಳ ಪರಿಶೀಲನೆ ಆದ ನಂತರ ಪ್ರತಿವರ್ಷ ಸೆಪ್ಟೆಂಬರ್‌ನಲ್ಲಿ ಹಣ ಬಿಡುಗಡೆ ಮಾಡಲಾಗುತ್ತದೆ. ಆಡಳಿತ ಸಮಿತಿ (ಸಿಒಎ) ಕಾರ್ಯಾಚರಣೆ ಆರಂಭವಾದ 2016-17ರಿಂದ ದೇಶಿ ಆಟಗಾರರಿಗೆ ಸಂದಾಯ ಆಗಬೇಕಿರುವ ಮೊತ್ತ ಬಾಕಿ ಇದೆ ಎಂದು ಧುಮಲ್ ತಿಳಿಸಿದ್ದಾರೆ.

ಕೆಎಸ್‌ಸಿಎ ವಿವರ ಸಲ್ಲಿಸಿದೆ: ವಿನಯ್

ಸಂಭಾವನೆ ಲಭಿಸಬೇಕಾದ ಆಟಗಾರರಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಬಿಸಿಸಿಐಗೆ ಕಳುಹಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಖಜಾಂಚಿ ವಿನಯ್ ಮೃತ್ಯುಂಜಯ ತಿಳಿಸಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು 'ಮಾಹಿತಿಗಳನ್ನು ಕಳುಹಿಸಲು ಕೆಎಸ್‌ಸಿಎ ಯಾವತ್ತೂ ತಡ ಮಾಡುವುದಿಲ್ಲ. ಅರುಣ್ ಧುಮಲ್ ಅವರು ಇತರ ರಾಜ್ಯ ಸಂಸ್ಥೆಗಳಿಗೆ ಸಂಬಂಧಿಸಿ ಹೇಳಿರಬಹುದು' ಎಂದು ಹೇಳಿದರು. 'ಸಂಭಾವನೆಯ ಮೊತ್ತವನ್ನು ಬಿಸಿಸಿಐ ನೇರವಾಗಿ ಆಟಗಾರರಿಗೆ ಕಳುಹಿಸುತ್ತದೆ. ಹೀಗಾಗಿ ಅದರಲ್ಲಿ ಮೂಗು ತೂರಿಸಲು ನಮಗೆ ಅವಕಾಶವಿಲ್ಲ. ಮಾಹಿತಿ ಕಳುಹಿಸುವುದಷ್ಟೇ ನಮ್ಮ ಕೆಲಸ. ಅದನ್ನು ಸಮರ್ಪಕವಾಗಿ ಮಾಡಲಾಗಿದೆ' ಎಂದು ಅವರು ವಿವರಿಸಿದರು.

ಮುಖ್ಯಾಂಶಗಳು

- ಪುರುಷ, ಮಹಿಳೆಯರ ಟೂರ್ನಿಗಳಿಗೆ ಸಂಬಂಧಿಸಿದ ಮೊತ್ತ ಬಾಕಿ
- ವಿಜಯ್ ಹಜಾರೆ, ಮುಷ್ತಾಕ್ ಅಲಿ ಟ್ರೋಫಿ ಮೊತ್ತ ಮಾತ್ರ ಬಿಡುಗಡೆ

ಕೋವಿಡ್: ಬಿಸಿಸಿಐ, ಪಾಂಡ್ಯ ಸಹೋದರರಿಂದ ಆಮ್ಲಜನಕ ದೇಣಿಗೆ

ನವದೆಹಲಿ: ಕೋವಿಡ್ ಪೀಡಿತರ ಜೀವರಕ್ಷಣೆಗಾಗಿ ಆಕ್ಸಿಜನ್ ಸಾಂದ್ರೀಕರಣ ಉಪಕರಣಗಳನ್ನು ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನಿರ್ಧರಿಸಿದೆ. ದೇಶದ ವಿವಿಧ ಭಾಗಗಳ ವೈದ್ಯಕೀಯ ಸಂಸ್ಥೆಗಳಿಗೆ ತಲಾ 10 ಲೀಟರ್‌ನ ಒಟ್ಟು ಎರಡು ಸಾವಿರ ಉಪಕರಣಗಳನ್ನು ಮಂಡಳಿ ವಿತರಿಸಲಿದೆ.

'ಕೋವಿಡ್ ಎರಡನೇ ಅಲೆಗೆ ದೇಶ ತತ್ತರಿಸಿದೆ. ವೈದ್ಯಕೀಯ ಉಪಕರಣಗಳು ಮತ್ತು ಜೀವರಕ್ಷಕ ಸೌಲಭ್ಯಗಳಿಗಾಗಿ ಎಲ್ಲೆಡೆ ಹಾಹಾಕಾರ ಎದ್ದಿದೆ. ಈ ಹಿನ್ನೆಲೆಯಲ್ಲಿ ನೆರವಿಗೆ ನಿಲ್ಲಲು ನಿರ್ಧರಿಸಲಾಗಿದೆ. ಮುಂದಿನ ಕೆಲವು ತಿಂಗಳಲ್ಲಿ ಉಕರಣಗಳನ್ನು ವಿತರಿಸಲಾಗುವುದು. ಇದರಿಂದ ರೋಗಿಗಳಿಗೆ ನೆರವಾಗಲಿದೆ ಎಂಬ ಭರವಸೆ ಇದೆ' ಎಂದು ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

10 ಲೀಟರ್ ಸಾಂದ್ರೀಕರಣ ಉಪಕರಣಕ್ಕೆ ₹ 60 ಸಾವಿರದಿಂದ ₹ ಒಂದು ಲಕ್ಷದ ವರೆಗೆ ಬೆಲೆ ಇದೆ. 2 ಸಾವಿರ ಉಪಕರಣಕ್ಕಾಗಿ ₹ 12 ಕೋಟಿಯಷ್ಟು ವೆಚ್ಚವಾಗಲಿದೆ. ಮೊದಲ ಅಲೆಯ ವೇಳೆ ಪಿಎಂ ಕೇರ್ಸ್ ನಿಧಿಗೆ ಬಿಸಿಸಿಐ ₹ 51 ಕೋಟಿ ಮೊತ್ತವನ್ನು ನೀಡಿತ್ತು.

'ಕೊರೊನಾ ವಿರುದ್ಧ ವೈದ್ಯಕೀಯ ಸಿಬ್ಬಂದಿ ಮತ್ತು ಆರೋಗ್ಯ ರಕ್ಷಣಾ ಕ್ಷೇತ್ರದ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಅವರ ನೆರವಿಗೆ ನಿಲ್ಲಬೇಕಾದದ್ದು ಎಲ್ಲರ ಜಾವಾಬ್ದಾರಿ. ಆರೋಗ್ಯ ಮತ್ತು ರಕ್ಷಣೆಗೆ ಬಿಸಿಸಿಐ ಎಲ್ಲ ಸಂದರ್ಭದಲ್ಲೂ ಆದ್ಯತೆ ನೀಡಿದೆ. ಆಮ್ಲಜನಕ ಸಾಂದ್ರೀಕರಣ ಉಪಕರಣಗಳು ರೋಗಿಗಳಿಗೆ ತುರ್ತಾಗಿ ನೆರವಿಗೆ ಬರಲಿವೆ' ಎಂದು ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

ಪಾಂಡ್ಯ ಸಹೋದರರಿಂದ ನೆರವು: ಭಾರತ ಕ್ರಿಕೆಟ್ ತಂಡದ ಆಟಗಾರರಾದ ಹಾರ್ದಿಕ್ ಪಾಂಡ್ಯ ಮತ್ತು ಕೃಣಾಲ್ ಪಾಂಡ್ಯ ಕೋವಿಡ್ ಕೇಂದ್ರಗಳಿಗೆ ಆಮ್ಲಜನಕ ಸಾಂದ್ರೀಕರಣಗಳನ್ನು ನೀಡುತ್ತಿದ್ದಾರೆ. ಈ ವಿಷಯವನ್ನು ಕೃಣಾಲ್ ತಮ್ಮ ಟ್ವಿಟರ್ ಖಾತೆಯ ಮೂಲಕ ಬಹಿರಂಗ ಮಾಡಿದ್ದಾರೆ.

ಸೌರಭ್ ಚೌಧರಿ –ಪಿಟಿಐ ಚಿತ್ರ

ಶೂಟಿಂಗ್: ಸೌರಭ್ ಶುಭಾರಂಭ

ಒಸಿಜೆಕ್, ಕ್ರೊವೇಷಿಯಾ (ಪಿಟಿಐ): ಭಾರತದ ಇಳವೆನ್ನಿಲ ವಾಳರಿವನ್ ಮತ್ತು ಸೌರಭ್ ಚೌಧರಿ ಇಲ್ಲಿ ಸೋಮವಾರ ಆರಂಭಗೊಂಡ ಯುರೋಪಿಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಿಂಚಿದರು. ಭಾರತದ ಶೂಟರ್‌ಗಳು ಇಲ್ಲಿ ಅತಿಥಿ ಕ್ರೀಡಾಪಟುಗಳಾಗಿ ಪಾಲ್ಗೊಂಡಿದ್ದಾರೆ.

ಮಹಿಳೆಯರ 10 ಮೀಟರ್ಸ್ ಏರ್ ರೈಫಲ್‌ನ ವಿಶ್ವ ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿರುವ ಇಳವೆನ್ನಿಲ 630.4 ಸ್ಕೋರ್ ಗಳಿಸಿ ಫೈನಲ್ ಪ್ರವೇಶಿಸಿದರು. ಇರಾನ್‌ನ ಅರ್ಮಿನಾ ಸಡೆಘ್ಯಾನ್ (629.8) ಎರಡನೇ ಸ್ಥಾನ ಗಳಿಸಿದರು.

ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಸೌರಭ್ ಚೌಧರಿ 589 ಸ್ಕೋರು ಗಳಿಸಿ ಕನಿಷ್ಠ ಅರ್ಹತಾ ಸ್ಕೋರ್ ವಿಭಾಗದಲ್ಲಿ ಅಗ್ರ ಸ್ಥಾನ ಗಳಿಸಿದರು.

ಕೋವಿಡ್: ಮಿಲ್ಖಾ ಸಿಂಗ್ ಆಸ್ಪತ್ರೆಗೆ ದಾಖಲು; ಆರೋಗ್ಯ ಸ್ಥಿರ

ಚಂಡೀಗಢ (ಪಿಟಿಐ): ಕೊರೊನಾ ಸೋಂಕಿತರಾಗಿರುವ ಭಾರತದ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರನ್ನು ಸೋಮವಾರ ಆಸ್ಪತ್ರೆಗೆ ದಾಖಲಿಸಲಾಗಿದೆ. ಮುಂಜಾಗೃತಾ ಕ್ರಮವಾಗಿ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಮಿಲ್ಖಾ ಸಿಂಗ್ ಅವರ ಪುತ್ರ, ಹೆಸರಾಂತ ಗಾಲ್ಫ್ ಆಟಗಾರ ಜೀವ್ ಮಿಲ್ಖಾ ಸಿಂಗ್ ತಿಳಿಸಿದ್ದಾರೆ.

91 ವರ್ಷದ ಮಿಲ್ಖಾ ಅವರಿಗೆ ಹೋದ ಬುಧವಾರ ಸೋಂಕು ದೃಢಪಟ್ಟಿದ್ದು, ಚಂಡೀಗಢದ ನಿವಾಸದಲ್ಲಿ ಏಕಾಂತವಾಸದಲ್ಲಿದ್ದರು. ಅವರನ್ನು ಮೊಹಾಲಿಯ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ಅವರಲ್ಲಿ ಸುಸ್ತು ಕಾಣಿಸಿಕೊಂಡಿತ್ತು; ಸೋಮವಾರದಿಂದ ಊಟ ಮಾಡಿರಲಿಲ್ಲ. ಹೀಗಾಗಿ ಆಸ್ಪತ್ರೆಗೆ ದಾಖಲಿಸಬೇಕಾಯಿತು. ಅವರ ಆರೋಗ್ಯ ಸರಿಯಾಗಿದ್ದರೂ, ಅನುಭವಿ ವೈದ್ಯರ ನಿಗಾ ಇರಲಿ ಎಂಬ ಕಾರಣಕ್ಕೆ ಆಸ್ಪತ್ರೆಗೆ

ಮಿಲ್ಖಾ ಸಿಂಗ್

ದಾಖಲಿಸುವುದು ಸುರಕ್ಷಿತ ಎನಿಸಿತು' ಎಂದು ಜೀವ್ ಹೇಳಿದ್ದಾರೆ. 'ವೈದ್ಯರು ತಂದೆಯವರ ಕಾಳಜಿ ಚೆನ್ನಾಗಿ ಮಾಡುತ್ತಿದ್ದಾರೆ. ಅವರು ಶೀಘ್ರ ಗುಣಮುಖರಾಗುತ್ತಾರೆ' ಎಂದು ಜೀವ್ ಹೇಳಿದ್ದಾರೆ. ಮಿಲ್ಖಾ ಅವರಿಗೆ ಕೋವಿಡ್ ಖಚಿತಪಟ್ಟ ಕಾರಣ ದುಬೈನಲ್ಲಿದ್ದ ಜೀವ್ ದೆಹಲಿಗೆ ಮರಳಿದ್ದರು.

ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಚಿನ್ನ ಗೆದ್ದಿರುವ ಮಿಲ್ಖಾ, 1958ರ ಕಾಮನ್ವೆಲ್ತ್ ಗೇಮ್ಸ್‌ನಲ್ಲೂ ಚಿನ್ನದ ಪದಕ ಗೆದ್ದಿದ್ದರು. 1960ರ ರೋಮ್ ಒಲಿಂಪಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ಫೈನಲ್ ಪ್ರವೇಶಿಸಿದ್ದ ಅವರು ನಾಲ್ಕನೇ ಸ್ಥಾನ ಗಳಿಸಿದ್ದರು. ಅಲ್ಲಿ ಅವರು ಗುರಿ ಮುಟ್ಟಿದ ಅವಧಿ ರಾಷ್ಟ್ರೀಯ ದಾಖಲೆಯಾಗಿತ್ತು. 38 ವರ್ಷಗಳ ನಂತರ ಪರಮ್‌ಜೀತ್ ಸಿಂಗ್ ಈ ದಾಖಲೆಯನ್ನು ಮುರಿದಿದ್ದರು. ಮಿಲ್ಖಾ ಅವರಿಗೆ 1959ರಲ್ಲಿ ಪದ್ಮಶ್ರೀ ಪುರಸ್ಕಾರ ಒಲಿದಿತ್ತು.

ಬಾಕ್ಸಿಂಗ್: ಹಸಮುದ್ದೀನ್‌ಗೆ ಗೆಲುವು

ದುಬೈ (ಪಿಟಿಐ): ಭಾರತದ ಮೊಹಮ್ಮದ್ ಹಸಮುದ್ದೀನ್ ಮತ್ತು ಶಿವ ಥಾಪಾ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಕಂಡಿದ್ದಾರೆ. ಮೊದಲ ದಿನವಾದ ಸೋಮವಾರ ನಡೆದ 56 ಕೆಜಿ ವಿಭಾಗದ ಬೌಟ್‌ನಲ್ಲಿ ಹಸಮುದ್ದೀನ್ ಕಜಕಸ್ತಾನದ ಮಕಮೂದ್ ಸಬಿರ್‌ಖಾನ್ ಎದುರು ಜಯ ಗಳಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗಳಿಸಿರುವ ಹಸಮುದ್ದೀನ್ , ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲಿ 2 ಬಾರಿ ಚಿನ್ನ ಗೆದ್ದಿರುವ ಎದುರಾಳಿಯನ್ನು 5-0ಯಿಂದ ಮಣಿಸಿದರು. ಮುಂದಿನ ಸುತ್ತಿನಲ್ಲಿ ಅವರು ಹಾಲಿ ವಿಶ್ವ ಚಾಂಪಿಯನ್ ಮತ್ತು ಏಷ್ಯನ್ ಗೇಮ್ಸ್ ಚಾಂಪಿಯನ್ ಮಿರಾಜಿಜ್‌ಬೆಕ್ ಮಿರ್ಜಹಲಿಲೊವ್ ಅವರನ್ನು ಎದುರಿಸುವರು.



ಮೊಹಮ್ಮದ್ ಹಸಮುದ್ದೀನ್ ಗೆಲುವಿನ ಕ್ಷಣ –ಟ್ವಿಟರ್ ಚಿತ್ರ

64 ಕೆಜಿ ವಿಭಾಗದಲ್ಲಿ ಶಿವ ಥಾಪಾ ಅವರು ಕಿರ್ಗಿಸ್ತಾನದ ಡಿಮಿಟ್ರಿ ಪುಚಿನ್ ಅವರನ್ನು 5-0ಯಿಂದ ಮಣಿಸಿ ಎಂಟರಘಟ್ಟ ತಲುಪಿದರು. ಶಿವ ಅವರು ಮುಂದಿನ ಸುತ್ತಿನಲ್ಲಿ ಕುವೈತ್‌ನ ನಾಡೆರ್ ಓದಾಹ್ ಅವರನ್ನು ಎದುರಿಸುವರು.

ಒಲಿಂಪಿಕ್ಸ್: ಲಸಿಕೆ ನೀಡಿಕೆಗೆ ವೇಗ

ಟೋಕಿಯೊ(ಪಿಟಿಐ) : ಒಲಿಂಪಿಕ್ಸ್ ಆರಂಭಕ್ಕೆ ಎರಡು ತಿಂಗಳು ಬಾಕಿ ಇರುವಂತೆಯೇ ಜಪಾನ್ ಸರ್ಕಾರ ಲಸಿಕೆ ಹಂಚಿಕೆಯನ್ನು ತ್ವರಿತಗೊಳಿಸುವ ಮೂಲಕ ಕೋವಿಡ್ ಸೋಂಕು ನಿಯಂತ್ರಣಕ್ಕೆ ಮುಂದಾಗಿದೆ. ಅದಕ್ಕಾಗಿ ಟೋಕಿಯೊ ಮತ್ತು ಒಸಾಕಾದಲ್ಲಿನ ಹಿರಿಯರಿಗೆ ಲಸಿಕೆ ನೀಡಲು ಸೋಮವಾರ ಸೇನಾ ವೈದ್ಯರು ಮತ್ತು ದಾದಿಯರನ್ನು ನಿಯೋಜಿಸಿದೆ.

ಒಂದು ವರ್ಷದ ವಿಳಂಬದ ನಂತರ ಪ್ರಧಾನಿ ಯೋಶಿಹಿದೆ ಸುಗಾ ಅವರು ಟೋಕಿಯೊದಲ್ಲಿ ಒಲಿಂಪಿಕ್ಸ್ ಆಯೋಜಿಸಲು ನಿರ್ಧರಿಸಿದ್ದಾರೆ. ಹೀಗಾಗಿ, ಜುಲೈ ಹೊತ್ತಿಗೆ ರಾಷ್ಟ್ರದ 3.6 ಕೋಟಿ ಹಿರಿಯರಿಗೆ ಲಸಿಕೆ ನೀಡುವ ಮಹತ್ವಾಕಾಂಕ್ಷಿ ಕಾರ್ಯಕ್ಕೆ (ಅಸಂಭವ ಎನಿಸಿದರೂ) ಮುಂದಾಗಿದ್ದಾರೆ.

ಇನ್ನೂ ಬಹಳಷ್ಟು ಜನರಿಗೆ ಲಸಿಕೆ ಪೂರೈಕೆಯಾಗಿಲ್ಲದ ಕಾರಣ ಮತ್ತು ಸುರಕ್ಷತೆಯ ಬಗೆಗಿನ ಆತಂಕದಿಂದಾಗಿ ಕೂಟಕ್ಕೆ ಜನರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ನ್ಯೂಜಿಲೆಂಡ್ ಶಿಬಿರಕ್ಕೆ 'ಕೇನ್ ಬಳಗ'

ಸೌತಾಂಪ್ಟನ್ (ಪಿಟಿಐ): ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡಿದ್ದ ಕೇನ್ ವಿಲಿಯಮ್ಸನ್ ಸೇರಿ ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಆಟಗಾರರು ಹಾಗೂ ಸಿಬ್ಬಂದಿ ಸೋಮವಾರ ತಮ್ಮ ತಂಡದ ಅಭ್ಯಾಸಕ್ಕೆ ಸೇರಿಕೊಂಡರು. ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ (ಎನ್‌ಜೆಡ್‌ಸಿ) ಈ ವಿಷಯ ತಿಳಿಸಿದೆ. ಕಿವೀಸ್ ಬಳಗವು ಆತಿಥೇಯ ಇಂಗ್ಲೆಂಡ್ ಎದುರು ಎರಡು ಟೆಸ್ಟ್ ಪಂದ್ಯಗಳನ್ನು ಆಡಬೇಕಿದೆ.

ಐಪಿಎಲ್‌ನಲ್ಲಿ ಪಾಲ್ಗೊಂಡಿದ್ದ ವಿಲಿಯಮ್ಸನ್, ಕೈಲ್ ಜೆಮೀಸನ್, ಮಿಚೆಲ್ ಸ್ಯಾಂಟನರ್, ಫಿಸಿಯೊ ಟಾಮಿ ಸಿಮ್ಸೆಕ್ ಹಾಗೂ ಸ್ಟ್ರೆಂಥ್ ಆ್ಯಂಡ್ ಕಂಡಿಷನಿಂಗ್ ಕೋಚ್ ಕ್ರಿಸ್ ಡೊನಾಲ್ಡ್‌ಸನ್ ಅವರು ಕಳೆದ ವಾರ ಮಾಲ್ಡೀವ್ಸ್‌ನಿಂದ ಇಂಗ್ಲೆಂಡ್‌ಗೆ ಆಗಮಿಸಿದ್ದರು. ಆದರೆ ತಂಡದ ತರಬೇತಿಗೆ ಸೇರಿಕೊಂಡಿರಲಿಲ್ಲ.

'ಮತ್ತೆ ಒಂದುಗೂಡುವಿಕೆ! ಐಪಿಎಲ್‌ನಲ್ಲಿ ಆಡಿದ್ದ ನಮ್ಮವರು ಮೊದಲ ಬಾರಿಗೆ ತಂಡದ ತಾಲೀಮಿಗೆ ಸೇರಿಕೊಂಡಿದ್ದಾರೆ. ಇದು ಸಕಾರಾತ್ಮಕ ಸಂಗತಿ' ಎಂದು 'ಬ್ಲ್ಯಾಕ್ ಕ್ಯಾಪ್ಸ್' ಟ್ವೀಟ್ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಅಲ್ಟ್ರಾ ಮ್ಯಾರಥಾನ್ ಓಟಗಾರರ ಸಾವು: ತನಿಖೆಗೆ ಆದೇಶ

ಬೀಜಿಂಗ್ (ಎಎಫ್‌ಪಿ): ವಿಪರೀತ ಚಳಿ ಮತ್ತು ಗಾಳಿಯಿಂದಾಗಿ ಅಲ್ಟ್ರಾ ಮ್ಯಾರಥಾನ್ ಓಟಗಾರರು ಸಾವಿಗೀಡಾದ ಘಟನೆಗೆ ಸಂಬಂಧಿಸಿ ಚೀನಾದ ಪ್ರಾದೇಶಿಕ ಆಡಳಿತ ತನಿಖೆಗೆ ಆದೇಶ ನೀಡಿದೆ.

ಗಾನ್ಸು ಪ್ರಾಂತ್ಯದ ಯೆಲ್ಲೊ ರಿವರ್ ಸ್ಟೋನ್ ಫಾರೆಸ್ಟ್‌ನಲ್ಲಿ ಶನಿವಾರ ನಡೆದ 100 ಕಿಲೋಮೀಟರ್ ಓಟದಲ್ಲಿ ಪ್ರತಿಕೂಲ ಹವಾಮಾನದಿಂದಾಗಿ 21 ಮಂದಿ ಸಾವಿಗೀಡಾಗಿದ್ದರು. ಬದುಕಿ ಉಳಿದವರ ಪೈಕಿ ಕೆಲವರ ಸ್ಥಿತಿ ಚಿಂತಾಜನಕವಾಗಿತ್ತು. ಒಟ್ಟು 172 ಸ್ಪರ್ಧಿಗಳು ಪಾಲ್ಗೊಂಡಿದ್ದರು.

ಸಾವಿಗೆ ಕಾರಣವೇನು ಎಂಬುದನ್ನು ಪತ್ತೆಹಚ್ಚಲು ಸೂಚಿಸಲಾಗಿದೆ. ಇದೇ ವೇಳೆ ಇಂಥ ವಾತಾವರಣದಲ್ಲಿ ಸ್ಪರ್ಧೆ ಆಯೋಜಿಸಲು ಯಾಕೆ ಮುಂದಾದರು ಎಂಬುದರ ಬಗ್ಗೆಯೂ ತನಿಖೆ ನಡೆಯಲಿದೆ. ನಗರದ ಹವಾಮಾನ ಮಾಹಿತಿ ಕೇಂದ್ರದ ಮುನ್ಸೂಚನೆಯನ್ನು ಲೆಕ್ಕಿಸದೇ ಓಟ ಆಯೋಜಿಸಲಾಗಿತ್ತು ಎನ್ನಲಾಗಿದೆ.

ಚಿಕಿತ್ಸೆ ಪಡೆಯುತ್ತಿರುವವರ ಪೈಕಿ ಕೆಲವರು ಸ್ಪರ್ಧೆಯ ಸಂದರ್ಭದಲ್ಲಿ ಅನುಭವಿಸಿದ ತೊಂದರೆ ವಿವರಿಸಿದ್ದಾರೆ. 'ಗಾಳಿ ವೇಗವಾಗಿ ಬೀಸುತ್ತಿತ್ತು. ನಾನು ಪದೇ ಪದೇ ಬಿದ್ದೆ. ತುಟಿಗಳು ಮರಗಟ್ಟಿಹೋಗಿದ್ದವು' ಎಂದು ಜಾಂಗ್ ಕ್ಸಿಯಾಟೊ ಹೇಳಿದ್ದಾರೆ.

ಹಾಕಿ ಇಂಡಿಯಾಗೆ 126 ಅಂಪೈರ್,